ಸಂಪುಟ 23 ಸಂಚಿಕೆ 28
ಜುಲೈ 15, 2001 ಬೆಲೆ ರೂ. 3.00


ದುಡಿವ ಜನರ ಪ್ರಾಣಮಿತ್ರ

ಪೆಕ್ಷಾರರಗ

ಉಳಿಕೆದಾರರ ಹಣ ಶೇರು ಬಜಾರಿನಲ್ಲಿ ಗುಳುಂ

ರೈತ ಕುಟುಂಬದ ಧಾರುಣ ಆತ್ಮಹತ್ಯೆ





ಯುಗೋಸ್ಲಾವಿಯಾ ಮಾಜಿ ಅಧ್ಯಕ್ಷರ ಮಾರಾಟ!?

ದ್ವೇಷದ ಕಿಚ್ಚಿನ ಗದರ್

ಮಲೋಪರಾ ಹತ್ಯಾಕಾಂಡ

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ


ಕನ್ನಡಕ್ಕೆ: ವಿಶ್ವಕುಂದಾಪುರ


ಧಾರವಾಹಿ: 70


ಪಂಚಾಯತಿ ಚುನಾವಣೆಗಳು ನಡೆದ ಕೆಲವೇ ದಿನಗಳಲ್ಲಿ ಮಾಲ್ಡಾ ಜಿಲ್ಲೆಯ ಮಲೋಪರಾದಲ್ಲಿ ನಡೆದ ಹತ್ಯಾಕಾಂಡದಿಂದ ಇಡೀ ಪಶ್ಚಿಮ ಬಂಗಾಳವೇ ಆಘಾತಕ್ಕೊಳಗಾಯಿತು. ನಂಬಲೂ ಆಗದಂಥ ಘೋರ ಕೃತ್ಯ ಅದಾಗಿತ್ತು.

ಮಲೋಪರಾ ಚಾಂದ್ ಮುನಿ ಗ್ರಾಮದ ಒಂದು ಪ್ರದೇಶ. 1983 ಜುಲೈ 6 ರಂದು ಕಾಂಗ್ರೆಸ್ ಸಮಾಜಘಾತುಕರು ಈ ಪ್ರದೇಶದ ಮೇಲೆ ದಾಳಿ ಮಾಡಿ ಸಿಪಿಐ(ಎಂ)ನ 13 ಕಾರ್ಯಕರ್ತರನ್ನು ಕೊಂದು ಹಾಕಿದರು.

ಮುಂಚಿನ ದಿನ ರಾತ್ರಿ ಹೊಲವೊಂದರಲ್ಲಿ ಒಂದು ಶವಸಿಕ್ಕಿತ್ತು. ಅದು ಯಾರದು ಎಂಬುದನ್ನು ಗುರುತು ಹಿಡಿಯದೇಯೇ ಕಾಂಗ್ರೆಸ್ ಗೂಂಡಾಗಳು ಸಿಪಿಐ(ಎಂ) ಬೆಂಬಲಿಗರ ಮೇಲೆ ಹಲ್ಲೆ ನಡೆಸಿದರು. ಪಕ್ಷದ ರತುವಾ ಸ್ಥಳೀಯ ಸಮಿತಿ ಕಾರ್ಯದರ್ಶಿ ಅಬ್ದುಲ್ ಬಾರಿ ಮೇಲೆ ದಾಳಿ ಮಾಡಿದರು. ಜಿಲ್ಲಾ ಪರಿಷತ್ ಸದಸ್ಯರೂ ಆಗಿದ್ದ ಅಬ್ದುಲ್‌ರನ್ನು ಕೊಲ್ಲುವುದು ಅವರ ಉದ್ದೇಶವಾಗಿತ್ತು. ಅವರ ಇಬ್ಬರು ಮಕ್ಕಳಾದ ಮಹಮದ್ ಅಮೀನ್ ಮತ್ತು ಪಷ್ಕರ ಅಮೀನ್‌ರನ್ನು ದುಷ್ಕರ್ಮಿಗಳು ಬರ್ಬರವಾಗಿ ಕೊಂದರು. ಅಬ್ದುಲ್‌ರ ಮಾವನವರನ್ನು ಕೊಲ್ಲಲಾಯಿತು.


ಎನ್.ಟಿ.ರಾಮರಾವ್


ಫಾರೂಕ್ ಅಬ್ದುಲ್ಲಾ


ರಾಮಕೃಷ್ಣ ಹೆಗ್ಡೆ

ಜುಲೈ 16 ರಂದು ಪ್ರತಿಭಟನೆ ನಡೆಸಲು ಎಡರಂಗ ಕರೆ ನೀಡಿತು. ಮಲೋಪರಾ ಹತ್ಯಾಕಾಂಡದ ಬಗ್ಗೆ ಖ್ಯಾತ ಕಲಾವಿದ ಉತ್ಪಲ್ ದತ್ ಒಂದು ಬೀದಿ ನಾಟಕ ಬರೆದರು. ಮಾಲ್ಡಾ ಜಿಲ್ಲೆಯ ಕಾಂಗ್ರೆಸ್ ಮುಖಂಡರು ಕರಪತ್ರವೊಂದನ್ನು ಹೊರಡಿಸಿ ಹತ್ಯೆಗಳನ್ನು ಬೆಂಬಲಿಸಿರುವುದು 'ಗಣಶಕ್ತಿ'ಯ 1983 ಜುಲೈ 7ರ ಸಂಚಿಕೆಯ ವರದಿಯಿಂದ ನನಗೆ ಗೊತ್ತಾಯಿತು.

ಆದರೆ, ಮೊದಲೇ ನನ್ನ ಪ್ರವಾಸ ಕಾರ್ಯಕ್ರಮ ನಿಗದಿಯಾದ ಪ್ರಕಾರ ನಾನು ವಿದೇಶಕ್ಕೆ ಹೋಗಬೇಕಿತ್ತು. ನಾನು ಪತ್ನಿ ಜತೆ ಮಾಸ್ಕೊ ಮತ್ತು ಬುಡಾಪೆಸ್ಟ್‌ಗೆ ಹೋದೆ. ಅಲ್ಲಿಂದ ನಾವು ಲಂಡನ್‌ಗೆ ತೆರಳಿದೆವು. ಮತ್ತೆ ಮಾಸ್ಕೊಗೆ ಬಂದು ಅಲ್ಲಿಂದ ಕಲ್ಕತ್ತಾಗೆ ಮರಳಿದೆವು. ಈ ಪ್ರವಾಸಗಳ ವೇಳೆ ನಾನು ಅನೇಕ ವಿಷಯಗಳಲ್ಲಿ ಮಾತನಾಡಿದೆ.

ನಾನು ಮರಳಿದಾಗ, ಬಂಗಾಳದಲ್ಲಿ ಮುಷ್ಕರ ನಡೆಸಲು ಟ್ರೇಡ್ ಯೂನಿಯನ್‌ಗಳು ಸಿದ್ಧತೆ ಮಾಡಿದ್ದವು. ರಾಜ್ಯದ ಬಗ್ಗೆ ಕೇಂದ್ರ ಸರಕಾರ ಪಕ್ಷಪಾತ ಮಾಡುತ್ತಿರುವುದನ್ನು ವಿರೋಧಿಸಲು ಕರೆ ನೀಡಲಾದ ಈ ಮುಷ್ಕರಕ್ಕೆ ಎಡರಂಗ ಬೆಂಬಲ ನೀಡಿತು. ಸೆಪ್ಟೆಂಬರ್ 28ರಂದು ನಡೆಯಲಿದ್ದ ಮುಷ್ಕರಕ್ಕೆ ಮುಂದೆ ಒಂದುವರೆ ತಿಂಗಳ ಕಾಲ ಸತತ ಪ್ರಚಾರ ನಡೆಸಲಾಯಿತು. ಮುಷ್ಕರ ಭಾರಿ ಯಶಸ್ಸು ಕಂಡಿತು.

ಸರ್ಕಾರಿಯಾ ಆಯೋಗದ ರಚನೆ

ಕೇಂದ್ರ-ರಾಜ್ಯ ಸಂಬಂಧಗಳ ಮರುಪರಿಶೀಲನೆಯ ಆಗ್ರಹವನ್ನು ನಾವು ನಿಲ್ಲಿಸಲೇ ಇಲ್ಲ. ಈ ಒಪ್ಪಂದಕ್ಕೆ ಮಣಿದು ಇಂದಿರಾಗಾಂಧಿ 1983 ಜೂನ್ 9 ರಂದು ಸರ್ಕಾರಿಯಾ ಆಯೋಗವನ್ನು ರಚಿಸಿದ್ದರು. ಆಯೋಗ ಐದು ವರ್ಷಗಳ ನಂತರ ವರದಿಯನ್ನು ಸಲ್ಲಿಸಿತು. ಅದರಲ್ಲಿನ ಅನೇಕ ವಿಷಯಗಳ ಬಗ್ಗೆ ನಮಗೆ ಭಿನ್ನಾಭಿಪ್ರಾಯವಿತ್ತು. ಆದರೆ ಅದು ಬೇರೆಯೇ ಸಂಗತಿ.

ಒಕ್ಕೂಟ ತತ್ವದ ನೈಜ ಸಫಲತೆಗಾಗಿ ರಾಜ್ಯಗಳ ಅಧಿಕಾರಗಳನ್ನೇ ಹೆಚ್ಚು ಮಾಡಬೇಕು ಎಂದು ಸ್ಪಷ್ಟವಾಗಿ ಪ್ರತಿಪಾದಿಸಿದ 11 ಅಂಶಗಳ ಪ್ರಸ್ತಾಪವೊಂದನ್ನು ಆಗಸ್ಟ್ 26 ರಂದು ಕಾ. ಇ.ಎಂ.ಎಸ್. ಹೊರಡಿಸಿದರು.

ಶ್ರೀನಗರದಲ್ಲಿ ನಡೆದ ಕಾಂಗ್ರೆಸೇತರ ಪಕ್ಷಗಳು ಮತ್ತು ಐದು ರಾಜ್ಯಗಳ ಮುಖ್ಯಮಂತ್ರಿಗಳ ಸಮ್ಮೇಳನ ದೇಶದ್ದ ಜನರ ಗಮನ ಸೆಳೆಯಿತು. ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿಯವರ ಕಾರ್ಯಾಲಯದಲ್ಲಿ ಅಕ್ಟೋಬರ್ 5 ರಿಂದ 7ರವರೆಗೆ ನಡೆದ ಸಮ್ಮೇಳನದಲ್ಲಿ ಸಂಯುಕ್ತರಂಗದ ಪ್ರತಿನಿಧಿಯಾಗಿ ಐ.ಕೆ. ಗುಜ್ರಾಲ್ ಭಾಗವಹಿಸಿದ್ದರು. ಇದು ಐ.ಕೆ. ಗುಜ್ರಾಲ್ ಮುಖಂಡರಾಗಿದ್ದ ಹಾಗೂ ಆ ನಂತರ ಅವರೇ ಪ್ರಧಾನ ಮಂತ್ರಿಯಾದ ಸಂಯುಕ್ತರಂಗ. ಅಲ್ಲಿ ನಾನು ಡಾ. ಅಶೋಕಮಿತ್ರರ ಜತೆ ಸಮ್ಮೇಳನದಲ್ಲಿ ಪಾಲ್ಗೊಂಡೆ.

ಆಂಧ್ರಪ್ರದೇಶದ ಎನ್.ಟಿ. ರಾಮರಾವ್, ತ್ರಿಪುರಾದ ನೃಪೇನ್ ಚಕ್ರವರ್ತಿ ಮತ್ತು ಕರ್ನಾಟಕದ ರಾಮಕೃಷ್ಣ ಹೆಗಡೆ ಸಮ್ಮೇಳನದಲ್ಲಿ ಭಾಗವಹಿಸಿದ ಇತರ ಮುಖ್ಯಮಂತ್ರಿಗಳು.

ಕಾ. ಇ.ಎಂ.ಎಸ್. ನಮ್ಮ ಪಕ್ಷವನ್ನು ಹಾಗೂ ಕಾ.ಸಿ. ರಾಜೇಶ್ವರ ರಾವ್ ಸಿಪಿಐ ಅನ್ನು ಪ್ರತಿನಿಧಿಸಿದರು. ಜನತಾಪಕ್ಷದ ಚಂದ್ರಶೇಖರ್, ಬಿಜು ಪಟ್ನಾಯಕ್ ಹಾಗೂ ಎಚ್.ಎನ್. ಬಹುಗುಣ, ಕಾಂಗ್ರೆಸ್ (ಎಸ್)ನ ಶರದ್‌ಪವಾರ್, ಅಕಾಲಿದಳದ ಹರಚಂದ್ ಸಿಂಗ್ ಲೋಂಗೊವಾಲ ಮತ್ತು ಜನವಾದಿ ಪಕ್ಷದ ಚಂದ್ರಜಿತ್ ಯಾದವ್ ಆಯಾಯ ಪಕ್ಷಗಳನ್ನು ಪ್ರತಿನಿಧಿಸಿ ಈ ಮಹತ್ವದ ಸಮ್ಮೇಳನದಲ್ಲಿ ಭಾಗವಹಿಸಿದರು.

ಈ ಸಭೆಯನ್ನು ಸಂಘಟಿಸಲು ಮುಂದಾಗಿ ಮುತುವರ್ಜಿ ವಹಿಸಿದ ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಡಾ. ಫರೂಕ್ ಅಬ್ದುಲ್ಲಾ ಈ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು ಎಂದು ಬಿಕ್ಕಟ್ಟು ಉಂಟಾದ ಸಂದರ್ಭದಲ್ಲಿ ಆರು ತಿಂಗಳೊಳಗೆ ಚುನಾವಣೆಗಳನ್ನು ನಡೆಸಲು ರಾಜ್ಯಪಾಲರು ಕ್ರಮಗಳನ್ನು ಕೈಗೊಳ್ಳಬೇಕು. ಅಗತ್ಯ ಬಿದ್ದರೆ ರಾಷ್ಟ್ರಪತಿ ಸಂವಿಧಾನದ 263ನೇ ಸೆಕ್ಷನ್ ಅನ್ವಯ ಅಂತರ ರಾಜ್ಯ ಮಂಡಳಿಯ ಜತೆ ಸಮಾಲೋಚಿಸಬಹುದು. ಮಂಡಳಿಯ ಶಿಫಾರಸನ್ನು ಸಂಸತ್ತಿನಲ್ಲಿ ಮಂಡಿಸಬೇಕು. ಅಧಿಕಾರದ ಕೇಂದ್ರೀಕರಣವೇ ನಾನಾ ರಾಜ್ಯಗಳಲ್ಲಿನ ಆರ್ಥಿಕ ಅಸಮತೋಲನಕ್ಕೆ ಕಾರಣ. ಕೇಂದ್ರ ಕೆಲವು ರಾಜ್ಯಗಳ ವಿರುದ್ಧ ಭಾರಿ ಪಕ್ಷಪಾತ ನಡೆಸುತ್ತಿದೆ" ಎಂದು ಈ ಪ್ರಸ್ತಾವನೆ ಹೇಳಿತು.

ಸಂವಿಧಾನದ ಸೆಕ್ಷನ್ 268 ಹಾಗೂ 269ರ ಸೂಕ್ತ ಬಳಕೆ, ನಿರ್ದಿಷ್ಟ ಆರ್ಥಿಕ ಕ್ರಮಗಳು ಸಹಿತ ಹಲವು ಪರಿಹಾರ ಮಾರ್ಗಗಳನ್ನು ಈ ಪ್ರಸ್ತಾವನೆ ಪಟ್ಟಿ ಮಾಡಿತು.

ಶ್ರೀನಗರ ಬಿಟ್ಟಲ್ಲಿಂದ ನಾವು ಕಲ್ಕತ್ತಾದಲ್ಲಿ ಪುನಾರಂಭ ಮಾಡಿದೆವು. ಕಲ್ಕತ್ತಾದಲ್ಲಿ 1983 ಜನವರಿ 13 ರಿಂದ 15ರ ವರೆಗೆ ಒಂದು ಸಭೆ ನಡೆಯಿತು. ಅಶೋಕ ಮಿತ್ರ ಮತ್ತು ನಾನು ಪ.ಬಂಗಾಳವನ್ನು ಪ್ರತಿನಿಧಿಸಿದ್ದೆವು. ಗಜ್ರಾಲ್, ಚಂದ್ರಶೇಖರ್, ಶರದ್ ಪವಾರ್, ಬಿಜು ಪಟ್ನಾಯಕ್, ಜಾರ್ಜ್ ಫರ್ನಾಂಡೀಸ್, ಮಧುದಂಡವತೆ, ರಾಮವಿಲಾಸ ಪಾಸ್ವಾನ್, ಎಂ. ಕರುಣಾನಿಧಿ, ಚಂದ್ರಜಿತ್ ಯಾದವ್ ಮತ್ತು ತಾರಕೇಶ್ವರಿ ಸಿನ್ಹಾ ಭಾಗವಹಿಸಿದರು.

ಆರ್ಥಿಕ ಪರಿಸ್ಥಿತಿ ಕುರಿತ ಗೊತ್ತುವಳಿಯಲ್ಲದೆ, ಕಾಂಗ್ರೆಸೇತರ ರಾಜ್ಯ ಸರಕಾರಗಳನ್ನು ದುರ್ಬಲಗೊಳಿಸಲು ಕೇಂದ್ರ ಸರಕಾರ ನಡೆಸುತ್ತಿದ್ದ ಪ್ರಯತ್ನಗಳನ್ನು ಖಂಡಿಸುವ ಒಂದು ಗೊತ್ತುವಳಿಯನ್ನು ಸಮ್ಮೇಳನ ಅಂಗೀಕರಿಸಿತು.

ಮುಖ್ಯಮಂತ್ರಿಗಳು ಮತ್ತು ರಾಜಕೀಯ ಘಟಾನುಘಟಿಗಳಿಗಷ್ಟೇ ಸಮಾಲೋಚನೆಯನ್ನು ಸೀಮಿತಗೊಳಿಸಲು ಬಯಸಿದ ನಾವು ಸಮ್ಮೇಳನದ ಕೊನೆಯ ದಿನ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಬೃಹತ್ ರ್‍ಯಾಲಿ ನಡೆಸಿದೆವು. ಸಮ್ಮೇಳನದ ಭಾವನೆಗಳಿಗೆ ಅದರಲ್ಲಿ ಪಾಲ್ಗೊಂಡ ಎಲ್ಲರೂ ಅನಂತರವೂ ಬದ್ದರಾಗಿದ್ದ ರೆಂದೇನೂ ಅಲ್ಲ. ಅದು ಲೆಕ್ಕಕ್ಕೆ ಮಾತ್ರ ಬದ್ಧರು. ಇತಿಹಾಸ ಹಾಗೂ ಜನರು ಇಂಥವರು ಏನೆಂಬುದನ್ನು ಅಳೆದಿದ್ದಾರೆ.

ಸಮ್ಮೇಳನ ಆರಂಭವಾದ ದಿನವೇ 14

> **ಹಿಂದಿನ ಸಂಚಿಕೆಯಲ್ಲಿ ಪುರಸಭೆ ಚುನಾವಣೆಯಲ್ಲಿ ಎಡರಂಗದ ಜಯಭೇರಿ, 18 ವರ್ಷದವರಿಗೆ ಮತದಾನದ ಹಕ್ಕು, ಬಲಗೊಂಡ ಎಡರಂಗ, ಎರಡನೇ ಬಾರಿಗೆ ಎಡರಂಗ ಅಧಿಕಾರಕ್ಕೆ....ಈ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಮಲೋಪರ ಹತ್ಯಾಕಾಂಡದಲ್ಲಿ ಸಿಪಿಐ(ಎಂ)ನ 13 ಕಾರ್ಯಕರ್ತರ ಹತ್ಯೆ, ಕಾಂಗ್ರೆಸ್ಸೇತರ ಐದು ಮುಖ್ಯ ಮಂತ್ರಿಗಳ ಸಮ್ಮೇಳನ, ಕೇಂದ್ರ-ರಾಜ್ಯ ಸಂಬಂಧ ಸುಧಾರಣೆಗೆ ಸರ್ಕಾರಿಯಾ ಆಯೋಗ ರಚನೆ, ಮೂರು ಲಕ್ಷ ಸೆಣಬು ಕಾರ್ಮಿಕರ ಮಷ್ಕರ, ರಾಜ್ಯಪಾಲರ ಹಠಾತ್ ವರ್ಗ, ರಾಜ್ಯಪಾಲರ ವಜಾಕ್ಕೆ ಒತ್ತಾಯಿಸಿ ಎಡಪಕ್ಷಗಳಿಂದ ದೊಡ್ಡ ಆಂದೋಲನ... ಈ ಬಗ್ಗೆ ಓದಿ.**

ಪ್ರತ್ಯೇಕವಾಗಿ ಹೇಳಬೇಕಿಲ್ಲವಷ್ಟೆ.

ಬಿಜೆಪಿ ಮತ್ತು ಲೋಕದಳ ಸಮ್ಮೇಳನದಲ್ಲಿ ಪಾಲ್ಗೊಳ್ಳಲಿಲ್ಲ. ನಾನು ಮೊದಲ ದಿನವೇ ಮಾತನಾಡಿದೆ.

ರಾಜ್ಯಪಾಲರ ಅಧಿಕಾರ ದುರುಪಯೋಗಕ್ಕೆ ಸಂಬಂಧಪಟ್ಟಂತೆ ನಿಲುವನ್ನು ಸ್ಪಷ್ಟಪಡಿಸುವ ಪ್ರಸ್ತಾಪವೊಂದರ ಮೇಲೆ ಸಮ್ಮೇಳನ ಒಮ್ಮತಕ್ಕೆ ಬಂದಿತು.

"ರಾಷ್ಟ್ರಪತಿ ಆಡಳಿತ ಮತ್ತು ಸ್ವತಃ ತಮ್ಮ ಅಧಿಕಾರಗಳ ಬಳಕೆಗೆ ಸಂಬಂಧಿಸಿದಂತೆ ರಾಜ್ಯಪಾಲರು ಕೇಂದ್ರ ಸರಕಾರದ ಸೂಚನೆಗಳಿಗೆ ಅನುಗುಣವಾಗಿ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ ಎಂಬುದನ್ನು ಇತ್ತೀಚಿನ ಇತಿಹಾಸ ಸಾಬೀತುಪಡಿಸಿದೆ. ಸಂಬಂಧಪಟ್ಟ ರಾಜ್ಯವು ಕಳಿಸಿದ ಪಟ್ಟಿಯಿಂದ ಆಯ್ಕೆ ಮಾಡಿ ರಾಷ್ಟ್ರಪತಿಯವರು ರಾಜ್ಯಪಾಲರನ್ನು ನೇಮಿಸುವುದು ಅಗತ್ಯ ಎಂಬುದು ನಮ್ಮ ಅಭಿಮತ. ಸಂವಿಧಾನಿಕ

ಟ್ರೇಡ್‌ಯೂನಿಯನ್‌ಗಳ ರಾಷ್ಟ್ರೀಯ ನಾಯಕತ್ವದಲ್ಲಿ ಮೂರು ಲಕ್ಷ ಸೆಣಬು ಕಾರ್ಮಿಕರು ಅನಿರ್ದಿಷ್ಟ ಮುಷ್ಕರವನ್ನು ಶುರುಮಾಡಿದರು. ಸೆಣಬು ಕೈಗಾರಿಕೆಯ ರಾಷ್ಟ್ರೀಕರಣ, ವೇತನ ಹೆಚ್ಚಳ ಮೊದಲಾದವು ಅವರ ಬೇಡಿಕೆಗಳಲ್ಲಿದ್ದವು. ಇತ್ತೀಚಿನ ಇತಿಹಾಸದಲ್ಲೇ ಅದೊಂದು ಮಹತ್ವದ ವಿದ್ಯಾಮಾನವಾಗಿತ್ತು. 73 ದಿನಗಳ ಮುಷ್ಕರದ ನಂತರ ತ್ರಿಪಕ್ಷೀಯ ಒಪ್ಪಂದವಾಗಿ ಕಾರ್ಮಿಕರು ಕೆಲಸಕ್ಕೆ ಮರಳಿದರು.

ರಾಜ್ಯಪಾಲರ ಹಠಾತ್ ವರ್ಗ

ನಾನು ಶ್ರೀನಗರ ಸಮಾವೇಶದಲ್ಲಿ ಪಾಲ್ಗೊಂಡಿದ್ದಾಗ ಪ.ಬಂಗಾಳದ ರಾಜ್ಯಪಾಲ ಬಿ.ಡಿ. ಪಾಂಡೆಯವರನ್ನು ಹಠಾತ್ತನೆ ಪಂಜಾಬಿಗೆ ವರ್ಗಾಯಿಸಲಾಯಿತು. ಪಂಜಾಬ್ ರಾಜ್ಯಪಾಲ ಅನಂತಪ್ರಸಾದ್ ಶರ್ಮಾ ರಾಜ್ಯದ ರಾಜ್ಯಪಾಲರಾಗಿ 1983 ಅಕ್ಟೋಬರ್ 10 ರಂದು ಅಧಿಕಾರ ಸ್ವೀಕರಿಸಿದರು.

ಈ ಬಗ್ಗೆ ನನ್ನೊಂದಿಗೆ ಕೇಂದ್ರ ಸಮಾಲೋಚಿಸಲೇ ಇಲ್ಲ. ಪ್ಲೇಕಾರ್ಡ್‌ಗಳನ್ನು ಹಿಡಿದಿದ್ದ ಕಾಂಗ್ರೆಸ್ ಕಾರ್ಯಕರ್ತರು ಎಡರಂಗ ವಿರೋಧಿ ಘೋಷಣೆಯನ್ನು ಕೂಗುತ್ತ ವಿಮಾನ ನಿಲ್ದಾಣದಲ್ಲಿ ಶರ್ಮಾರನ್ನು ಸ್ವಾಗತಿಸಿದರು. ಅದೇ ವಿಮಾನದಲ್ಲಿ ನಾನೂ ಮರಳುತ್ತಿದ್ದೆ. ಶರ್ಮಾ ಒಬ್ಬ ಕಟ್ಟಾ ಕಾಂಗ್ರೆಸಿಗರಾಗಿದ್ದರು. ಇದನ್ನು ನಾನು ಶ್ರೀನಗರದಲ್ಲೇ ಸುದ್ದಿಗಾರರಿಗೆ ತಿಳಿಸಿದೆ. ಬಿ.ಡಿ. ಪಾಂಡೆ ಮತ್ತು ಅವರ ಹಿಂದಿನ ರಾಜ್ಯಪಾಲ ತ್ರಿಭುವನ ನಾರಾಯಣ ಸಿಂಗ್ ರಾಜ್ಯಪಾಲರ ಅಧಿಕಾರ ವ್ಯಾಪ್ತಿಯಲ್ಲೇ ಕೆಲಸ ಮಾಡುತ್ತಿದ್ದರು. ನಮಗೆ ಯಾವುದೇ ಸಂಘರ್ಷವಿರಲಿಲ್ಲ, ಆದರೆ ಇಂಥ ಸೌಹಾರ್ದ ವಾತಾವರಣವನ್ನು ಕಾಂಗ್ರೆಸ್ ಇಷ್ಟಪಡಲಿಲ್ಲ.

ಶರ್ಮಾ ಆಡಳಿತ ಅವಧಿಯಲ್ಲಿ ರಾಜಭವನದಲ್ಲಿ ಕಾಂಗ್ರೆಸ್‌ಗೆ ಆಶ್ರಯ ಸಿಕ್ಕಿತು. ನಮ್ಮ ಜತೆ ಕಹಿ ಸಂಬಂಧ ಬೆಳೆಯಿತು. ಅವರು ಹತ್ತಾರು ರಾಜ್ಯದ ರಾಜ್ಯಪಾಲರಾಗಿದ್ದರು. ಅವರು ಅನೇಕ ತಪ್ಪು ಕೆಲಸಗಳನ್ನು ಮಾಡಿದರು. ಕಲ್ಕತ್ತ ಮತ್ತು ಬರ್ಧಮಾನ್ ವಿಶ್ವವಿದ್ಯಾನಿಯಲಗಳ ಕುಲಪತಿ (Vice chanccellor)ಗಳ ನೇಮಕ ಅವರ 'ಸಾಧನೆಯ ಮುಕುಟ' ದಂತಿತ್ತು. ಕಲ್ಕತ್ತ ವಿಶ್ವವಿದ್ಯಾಲಯದ ಸೆನೆಟ್ ಮತ್ತು ಸಿಂಡಿಕೇಟ್ 1983 ಡಿಸೆಂಬರ್ 3 ರಂದು ಡಾ|ರಾಮನ್ ಪೊದ್ದಾರ್ ಹೆಸರನ್ನು ಸೂಚಿಸಿದ್ದವು. ಆದರೆ ರಾಜ್ಯಪಾಲ ಶರ್ಮಾ ಅದನ್ನು ತಿರಸ್ಕರಿಸಿ ಕ್ಯಾಂಪಸ್‌ನಲ್ಲಿ ಮುಂದಿನ ನಾಲ್ಕು ವರ್ಷ ಕಾನೂನುರಹಿತ ಹಾಗೂ ಅರಾಜಕ ಆಡಳಿತ ತಾಂಡವಮಾಡಲು ದಾರಿ ಮಾಡಿಕೊಟ್ಟರು. 1984ರ ಜೂನ್‌ನಲ್ಲಿ ಬರ್ಧಮಾನ್ ವಿವಿಗೆ ಸಂಬಂಧಪಟ್ಟಂತೆ ಕೂಡ ಅವರು ಹೀಗೆಯೇ ಮಾಡಿದರು.

ಈ ನಡುವೆ ಅವರು ಕಲ್ಕತ್ತ ವಿಶ್ವವಿದ್ಯಾಲಯದ ತಿದ್ದುಪಡಿ ಮಸೂದೆಗೆ ಸಹಿ ಮಾಡಲು ನಿರಾಕರಿಸಿ ಅದನ್ನು ನೇರವಾಗಿ ಕೇಂದ್ರಕ್ಕೆ ಕಳಿಸಿಕೊಟ್ಟರು. ವಿಶ್ವವಿದ್ಯಾಲಯ ಆಡಳಿತಕ್ಕೆ ಸಂಬಂಧಿಸಿ ಕೇಂದ್ರ ಸರಕಾರ ಹೇಗೂ ಒಂದು ಮಸೂದೆ ತರಲಿರುವುದರಿಂದ ತಾನು ಅದನ್ನು ನೇರವಾಗಿ ಕೇಂದ್ರಕ್ಕೆ ಕಳಿಸಿದ್ದಾಗಿ ಶರ್ಮಾ ವಿವರಣೆ ನೀಡಿದರು! ವಾಸ್ತವವಾಗಿ ಕೇಂದ್ರ ಸರಕಾರ ಅಂಥ ಯಾವುದೇ ಮಸೂದೆಯ ಸುಳಿವನ್ನು ಕೊಟ್ಟಿರಲಿಲ್ಲ.

ರಾಜ್ಯಪಾಲರ ವಜಾಕ್ಕೆ ಒತ್ತಾಯಿಸಿ ಎಡಪಕ್ಷಗಳು ದೊಡ್ಡ ಆಂದೋಲನವನ್ನು ಆರಂಭಿಸಿದವು. ಕಾಂಗ್ರೆಸ್ ಪಕ್ಷಕ್ಕೆ ಅಪಾಯದ ಸುಳಿವು ಸಿಕ್ಕಿತು. ಶರ್ಮಾ ರಾಜಿನಾಮೆ ನೀಡಿದರು. ಅವರು ಕಾಂಗ್ರೆಸ್ ಅಭ್ಯರ್ಥಿಯಾಗಿ ಬಿಹಾರದಿಂದ ರಾಜ್ಯಸಭೆಗೆ ಸ್ಪರ್ಧಿಸಿದರು. ಇದಕ್ಕೆ ಮುನ್ನ ರಾಜಭವನದಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮವನ್ನು ಎಡರಂಗ ಸಚಿವರು ಮತ್ತು ಮುಖಂಡರು ಬಹಿಷ್ಕರಿಸಿದ್ದರು.

(ಮುಂದಿನವಾರಕ್ಕೆ)

ರೈತ ಕುಟುಂಬದ ಆತ್ಮಹತ್ಯೆ: ಸಾಲದ ಬಲೆಯಿಂದ ರಕ್ಷಿಸದ ಸರ್ಕಾರ

ಬೆಳೆ ಸಾಲ ತೀರಿಸಲಾಗದೇ ಕೋಲಾರ ಜಿಲ್ಲೆಯ ಮಾಲೂರಿನ ದೊಡ್ಡಶಿವಾರದಲ್ಲಿ ಇಡೀ ರೈತ ಕುಟುಂಬವೊಂದು ಆತ್ಮಹತ್ಯೆ ಮಾಡಿಕೊಂಡಿದೆ. ಪಂಪ್‌ಸೆಟ್ ಮೂಲಕ ಆಲೂಗಟ್ಟೆ ಬೆಳೆಯುತ್ತಿದ್ದ ರೈತ ಕೃಷ್ಣಾರೆಡ್ಡಿ(45) ಗ್ರಾಮೀಣ ಬ್ಯಾಂಕ್‌ನಿಂದ 15 ಸಾವಿರ ಹಾಗೂ 1 ಲಕ್ಷದ 40 ಸಾವಿರ ಸಾಹುಕಾರರಿಂದ.... ಹೀಗೆ ಒಟ್ಟು ಎರಡೂವರೆ ಲಕ್ಷ ಸಾಲ ಮಾಡಿದ್ದ. ಆದರೆ ಬೆಳೆಗೆ ಸೂಕ್ತ ಬೆಲೆ ಸಿಗದೇ, ತೀರಿಸಲೂ ಆಗದೇ ಬೆಳೆಯುತ್ತಲೇ ಹೋಗುತ್ತಿರುವ ಸಾಲದ ಭಾರ ತಾಳದೇ ಸ್ವಾಭಿಮಾನಿಯಾದ ಕೃಷ್ಣಾರೆಡ್ಡಿ ಹತಾಶನಾಗಿ ತನ್ನ ಪತ್ನಿ ರಾಮಕ್ಕ(30) ಅಂಬಿಕಾ(8), ಶುಭಾ(6) ಆರು ತಿಂಗಳ ಶ್ರೀನಾಥ್ ಎಂಬ ಮಕ್ಕಳೊಂದಿಗೆ ಜುಲೈ 4 ರಂದು ಸಾವಿಗೆ ಶರಣಾಗಿದ್ದಾನೆ.

ಇತ್ತೀಚಿನ ವರ್ಷಗಳಲ್ಲಿ ಕೃಷಿ ಸಾಲದ ಬವಣೆಯಿಂದ ಆತ್ಮಹತ್ಯೆಗೀಡಾಗುತ್ತಿರುವ ರೈತಾಪಿಗಳ ಸಾವಿನ ಸಂಖ್ಯೆಯೇ ರಾಜ್ಯವೊಂದರಲ್ಲೇ ನೂರರ ಹಂಚನ್ನು ತಲುಪುತ್ತಿದೆ. ಕೃಷಿಯನ್ನುಳಿಸುವ, ರೈತರಿಗೆ ನೆರವಾಗುವ ಹಲವು ಯೋಜನೆಗಳು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಘೋಷಿಸುತ್ತಲೇ ಇದ್ದರೂ ಪರಿಣಾಮ ಮಾತ್ರ ಶೂನ್ಯ. ಫಸಲಿಗೆ ಬೆಲೆಗಳನ್ನು ನ್ಯಾಯಸಮ್ಮತವಾಗಿ ಸಿಗುವಂತೆ ನೋಡಿಕೊಳ್ಳಲು ಸರ್ಕಾರ ವಿಫಲವಾಗಿದೆ. ಮಾರುಕಟ್ಟೆ ಶಕ್ತಿಗಳು ಮನಬಂದಂತೆ ಆಡಲು ಮುಕ್ತ ಅವಕಾಶ ಕೊಡಲಾಗಿದೆ. ಕೃಷಿಗೆ ಒದಗಿಸುವ ಸಾಲ ಬೀಜ, ಗೊಬ್ಬರ ನೀಡಿಕೆ ಕಡಿತಕ್ಕೆ ಒಳಗಾಗಿವೆ. ರೈತರು ಖಾಸಗಿ ಧಣಿಗಳ ಬಾಯಿಗೆ ತುತ್ತಾಗದೆ ಗತ್ಯಂತರವಿಲ್ಲದಂತಾಗಿದೆ.

ಈ ನಡುವೆ ಕೃಷ್ಣರವರ ಸರ್ಕಾರ ಸಹಕಾರಿ ಸಾಲದ ಒಟ್ಟು ಮೂಲ ಮೊತ್ತ ಕಟ್ಟುವವರಿಗೆ ಸುಸ್ತಿ ಬಡ್ಡಿ ಮನ್ನಾ ಮಾಡಲಾಗುವುದು ಎಂದು ಪ್ರಕಟಿಸಿದೆ.



ಇದು ಆತ್ಮಹತ್ಯೆಯಲ್ಲ ಕಗ್ಗೊಲೆ

ಬಡ್ಡಿ ಕಟ್ಟಲೂ ಆಗದ ಸ್ಥಿತಿಯಲ್ಲಿ ಬಹುತೇಕ ರೈತರು ಇರುವಾಗ ಇನ್ನು ಇಡೀ ಸಾಲದ ಮೊತ್ತ ಕಟ್ಟುವುದಾದರೂ ಹೇಗೆ? ಇಂತಹ ಅವಾಸ್ತವಿಕ ನಾಟಕೀಯ ಘೋಷಣೆಗಳನ್ನು ಬಿಟ್ಟು, ಮಧ್ಯಾವಧಿ ಸಾಲಗಳನ್ನು ದೀರ್ಘಾವಧಿ ಸಾಲಗಳನ್ನಾಗಿ ಪರಿವರ್ತಿಸಬೇಕು. ಸಂಕಷ್ಟದಲ್ಲಿರುವ ಸಣ್ಣ ರೈತರ ಕೃಷಿ ಸಾಲಗಳನ್ನು ಮನ್ನಾ ಮಾಡಬೇಕು.

ಎಂದಿನಂತೆ ಕೃಷಿ ಸಚಿವರು, ಸಂಸತ್ ಸದಸ್ಯರು, ಅಧಿಕಾರಿಗಳು ಮಾಲೂರಿಗೆ ಭೇಟಿ ನೀಡಿದ್ದಾರೆ. ಈ ಆತ್ಮಹತ್ಯೆಗೆ ಕಾರಣವನ್ನು ತಿಳಿಯಲು ಕೃಷಿ ಸಚಿವರು ಆದೇಶಿಸಿದ್ದಾರೆ. ಇದಕ್ಕಿಂತ ಬೇಜವಾಬ್ದಾರಿ ನಡವಳಿಕೆ ಇನ್ನೊಂದಿರಲಾರದು. ಈ ಸಾವಿರ ಕಾರಣ ಅರಿಯಲಾರದಷ್ಟು ನಿಗೂಢವೇ? ಕನಿಷ್ಟ ಪರಿಹಾರ ಪ್ರಕಟಣೆಯನ್ನು ಮಾಡಿಲ್ಲ. ಇನ್ನಾದರೂ ಈ ಅನುಕಂಪದ ನಾಟಕವನ್ನು ಸರ್ಕಾರ ಕೈ ಬಿಡಬೇಕು.

ಇಷ್ಟೆಲ್ಲಾ ಸರಣಿಯ ಆತ್ಮಹತ್ಯೆಗಳು ನಡೆಯುತ್ತಿರುವಾಗಲೂ ಕೇಂದ್ರ-ರಾಜ್ಯ ಸರ್ಕಾರಗಳು ಕಣ್ಣು ತೆರೆಯಲಿಲ್ಲ. ವಿನಾಶಕಾರಿ ಮುಕ್ತ ಆಮದು ನೀತಿ-ದಿವಾಳಿಖೋರ ಕೃಷಿ ನೀತಿಗಳನ್ನು ಕೈ ಬಿಡುತ್ತಿಲ್ಲ. ಕೇವಲ **ದೆಹಲಿಯಲ್ಲೇ ಹವಾ ಮಹಲುಗಳಲ್ಲಿ ವಿಶ್ವವಾಣಿಜ್ಯ ಸಂಸ್ಥೆಯ(WTO) ಒಪ್ಪಂದಗಳ ಬಗ್ಗೆ ಚರ್ಚೆಯ ಕಸರತ್ತು ಮಾತ್ರ ನಿಂತಿಲ್ಲ. ಇದು ಜನರ ಕಣ್ಣಿಗೆ ಮಣ್ಣೆರಚುವ, ಆ ದುರುಳ ನೀತಿಗಳನ್ನು ಅಡೆತಡೆಯಿಲ್ಲದೇ ಜಾರಿಗೊಳಿಸುವ ನಾಟಕವಲ್ಲದೇ ಮತ್ತೇನು?** ಇವರು ಜನರ ಜೀವಕ್ಕೆ ಕವಡೆ ಕಿಮ್ಮತ್ತೇನಾದರೂ ನೀಡುತ್ತಿದ್ದಾರಾ? ಈ ಸ್ಥಿತಿಯಲ್ಲಿ ನಾಡಿನ ರೈತಾಪಿ-ಕೃಷಿಕೂಲಿಕಾರರ ಆತ್ಮಹತ್ಯೆಗೆ ಮೊರೆಹೋಗದೇ ಆತ್ಮವಿಶ್ವಾಸದ ಹೋರಾಟವನ್ನು ನಡೆಸಬೇಕಿದೆ. ಆತ್ಮವಿಶ್ವಾಸ ತುಂಬುವುದೂ ಆಗಬೇಕು.

ವಿಫಲ ಮುಂಗಾರು: ಬರದ ದವಡೆಗೆ ಕರ್ನಾಟಕ?


ಈಗ ಮುಂಗಾರು ಮಳೆಗಾಲ. ಆದರೆ ಕರ್ನಾಟಕದ ಅನೇಕ ಜಿಲ್ಲೆಗಳು ಬರದ ದವಡೆಗೆ ನೂಕಲ್ಪಟ್ಟಿವೆ. ಹೊಲಗಳನ್ನು ಹಸನು ಮಾಡಿಟ್ಟು ಬಿತ್ತನೆಗೆ ಕಾದರೂ, ಮಳೆಯಿಲ್ಲದೇ ಗುಲ್ಬರ್ಗಾದಂತಹ ಜಿಲ್ಲೆಗಳಲ್ಲಿ ಇನ್ನೂ ಬೀಜ ಹಾಕಿಲ್ಲ. ಮುಖ್ಯಮಂತ್ರಿಗಳು ಹೇಳಿದಂತೆ ಹೈದ್ರಾಬಾದ್ ಕರ್ನಾಟಕದ ಜಿಲ್ಲೆಗಳ ಬಿತ್ತನೆ ನಡೆದಿದೆ ಎಂದರೂ ಅದು ಕೇವಲಶೇ 1 ರಷ್ಟು ಮಾತ್ರ. ಮೈಸೂರು, ಚಾಮರಾಜನಗರ, ಮಂಡ್ಯ, ಕೋಲಾರ, ತುಮಕೂರು, ಬೆಂಗಳೂರು ನಗರ ಹಾಗೂ ಗ್ರಾಮಾಂತರ, ಕೊಪ್ಪಳ, ಬಿಜಾಪುರ, ಬಳ್ಳಾರಿ, ಬಾಗಲಕೋಟೆ ಜಿಲ್ಲೆಗಳಲ್ಲಿ ಗಮನಾರ್ಹವಾಗಿ ಮಳೆ ಇಲ್ಲವಾಗಿದೆ. ಕಳೆದ 40 ವರ್ಷಗಳಲ್ಲೇ ಈಗಿನದು ಅತಿ ಕಡಿಮೆ ಮಳೆ, ಬಿತ್ತನೆ ಕಳೆದ ವರ್ಷದಲ್ಲಿ 69 ಲಕ್ಷ ಹೆಕ್ಟೇರ್‌ನಲ್ಲಿ. ಈ ಬಾರಿ ಕೇವಲ 8.97 ಲಕ್ಷ ಹೆ. ಮಾತ್ರ(ಶೇ 13 ಮಾತ್ರ). ಭಾರಿ ಮಳೆ ಇರುತ್ತಿದ್ದ ಕೊಡಗಿನಲ್ಲೇ ಮುಂಗಾರು ಮತ್ತಷ್ಟು ದುರ್ಬಲವಾಗಿದೆಯೆಂದು ವರದಿಯಿದೆ.

ಹಲವೆಡೆ ಜೂನ್‌ನ ಆರಂಭದಲ್ಲಿ ಸುರಿದ ಮಳೆಯಿಂದಾಗಿ ಬಿತ್ತನೆಯೂ ನಡೆದಿದೆ. ಆದರೆ ಮೊಳಕೆಯೊಡೆದು ಮೂಡಿದ ಸಸಿಗಳು ಮಳೆಯಿಲ್ಲದೇ ಬಾಡತೊಡಗಿವೆ. ದಿನ ನಿತ್ಯವೂ ಆಕಾಶವನ್ನು ನೋಡುತ್ತಾ ನಿಟ್ಟುಸಿರು ಬಿಡುವುದು ರೈತನ ಕಾಯಕವಾಗಿದೆ. ಇನ್ನೂ ಜೋಳ, ಹತ್ತಿ, ತೊಗರಿ, ಶೇಂಗಾ ಬಿತ್ತಿಲ್ಲ. ಹೀಗಾಗಿ ರಾಜ್ಯ ಆಹಾರ ಹಾಗೂ ವಾಣಿಜ್ಯ ಬೆಳೆಯ ಉತ್ಪಾದನೆಯೇ ಸಂಕಷ್ಟದಲ್ಲಿದೆ. ಈಗಾಗಲೇ ಸಾಲದ ಭಾದೆಯಿಂದ ಬೆಲೆಯಿಲ್ಲದೆ ಬಿಕ್ಕಟ್ಟಿನಲ್ಲಿ ಬಿದ್ದಿರುವ ರೈತರು ಚಿಂತಾಕ್ರಾಂತರಾಗಿದ್ದಾರೆ. ದನಗಳಿಗೆ ಮೇವು, ನೀರಿನ ಸಮಸ್ಯೆ ತಲೆದೋರುತ್ತಿದೆ. ಬರದ ಕರಿನೆರಳು ದಟ್ಟವಾಗುತ್ತಿದೆ.

ಕೃಷಿಕೂಲಿಕಾರರು ಈ ಪರಿಸ್ಥಿತಿಯಲ್ಲಿ ಕೆಲಸವಿಲ್ಲದೇ ಆಗಲೇ ತಂಡತಂಡವಾಗಿ ಕೆಲಸ ಹುಡುಕಿಕೊಂಡು ಗುಳೇ ಹೊರಟಿದ್ದಾರೆ. ಪರಿಸ್ಥಿತಿ ಇಷ್ಟು ಗಂಭೀರವಾಗಿದ್ದರೂ ಸರ್ಕಾರ ಗಮನಕ್ಕೆ ಬಂದರೂ ಅಗತ್ಯ ಕ್ರಮ ವಹಿಸಿಲ್ಲ. ಇನ್ನು ಹೈಟೆಕ್‌ನ ಗುಂಗಿನಲ್ಲೇ ಮಣ್ಣಿನ ಮಗ ಮುಖ್ಯಮಂತ್ರಿಗಳು ತಿರುಗುತ್ತಿದ್ದಾರೆ. ಇಷ್ಟರೊಳಗೆ ಸಮರೋಪಾದಿಯಲ್ಲಿ ಜನ ಹಾಗೂ ದನಗಳ ರಕ್ಷಣೆಗೆ ಧುಮುಕಬೇಕಿತ್ತು. ಜನರ ಜೀವನದ ಬಗ್ಗೆ ಸರ್ಕಾರಕ್ಕಿರುವ ಕಡು ತಿರಸ್ಕಾರ ಖಂಡನೀಯ. ಈ ಕೂಡಲೇ ಸರ್ಕಾರ ಜನರ-ದನಕರುಗಳನ್ನು ಉಳಿಸಲು ಮುಂದಾಗಬೇಕು. ಬರದ ಘೋಷಣೆ ಮಾಡಿ ಬರದ ಕಾಮಗಾರಿಗಳನ್ನು ಆರಂಭಿಸಬೇಕು. ಕೆರೆಹೂಳು ಎತ್ತುವುದು, ರಸ್ತೆ ದುರಸ್ತಿ ಮುಂತಾದ ಕೆಲಸಗಳಲ್ಲಿ ತೊಡಗಿಸಬೇಕು. ಕೂಲಿಗಾಗಿ ಕಾಳು, ರೋಜಗಾರ್ ಯೋಜನೆಗಳಂತಹ ಯೋಜನೆಯನ್ನು ಪೂರ್ಣಪ್ರಮಾಣದಲ್ಲಿ ಜಾರಿಗೊಳಿಸಬೇಕು. ಕುಡಿವ ನೀರಿನ, ಮೇವಿನ ಪೂರೈಕೆಗಾಗಿ ವಿಶೇಷ ಗಮನ ತಕ್ಷಣ ಹರಿಸ ಬೇಕಿದೆ.

ರಾಜ್ಯ ಸರ್ಕಾರ ಬರದ ಕಾಮಗಾರಿಯಾಗಿ ಗುಲ್ಬರ್ಗಾದಂತಹ ಕೆಲವು ಜಿಲ್ಲಾಡಳಿತಗಳು, ಜಿಲ್ಲಾ ಪಂಚಾಯತುಗಳು ಬರ ಪ್ರದೇಶವೆಂದು ಘೋಷಿಸಿ ಕಾಮಗಾರಿಗಳನ್ನು ಆರಂಭಿಸಲು ಹಣ ಬಿಡುಗಡೆ ಮಾಡಲು ರಾಜ್ಯ ಸರ್ಕಾರದ ಮುಂದೆ ಪ್ರಸ್ತಾಪ ಮಂಡಿಸಿದರೂ ಸರ್ಕಾರ ಬಾಯಿ ಮುಚ್ಚಿ ಕುಳಿತಿದೆ. ಹೀಗೆ ಎಷ್ಟು ದಿನ ಸಾಧ್ಯವೋ ಅಷ್ಟು ಕಾಲ ತಳ್ಳುವ ಇರಾದೆ ಮುಖ್ಯಮಂತ್ರಿ, ಕಂದಾಯ ಸಚಿವರಿಗೆ ಇದ್ದಂತಿದೆ. ಈ ವಾರದಲ್ಲಿ ಮಳೆ ಬರದೇ ಹೋದರೆ ರೈತಾಪಿ-ಕೂಲಿಕಾರರು ಕಂಗಾಲಾಗುವ ಸ್ಥಿತಿ ಒದಗಿಬರುತ್ತದೆ. ಪರಿಸ್ಥಿತಿ ಪೂರ್ಣ ಹದಗೆಡುವ ಮುನ್ನ ಸರ್ಕಾರ ರಕ್ಷಣಾ ಕ್ರಮ ವಹಿಸಬೇಕು. ಆಡಳಿತವನ್ನು ಸಜ್ಜುಗೊಳಿಸಬೇಕು.

ಎಲ್ಲಿ ಓಡುವಿರಿ ನಿಲ್ಲಿ ಮೋಡಗಳ ನಾಲ್ಕು ಹನಿಯ ಚೆಲ್ಲಿ



ಪರಿತಾಪದಲ್ಲಿ ಬಳ್ಳಾರಿ ರೈತರು

ಕರ್ನಾಟಕ ಈ ವಾರ

ಒಂದು ನೋಟ

ಎಸ್.ವೈ. ಗುರುಶಾಂತ್

ಅನ್ನಕ್ಕೆ ಅಂತ್ಯ ಹಾಕುವ ಯೋಜನೆ

ಬಡಜನರ ಅನ್ನದಗುಳನ್ನು ಕಿತ್ತುಕೊಂಡು ಪಡಿತರ ವ್ಯವಸ್ಥೆಯನ್ನೇ ನಾಶಗೊಳಿಸುತ್ತಿರುವ ಕೇಂದ್ರ ಸರ್ಕಾರವೀಗ 'ಅಂತ್ಯೋದಯ' ಅನ್ನ ಯೋಜನೆಯನ್ನು ಆರಂಭಿಸಿದೆ. ಇದರಂತೆ ಕಡು ಬಡವರಾದ (ಇದಕ್ಯಾವ ಮಾನದಂಡ?) 4.79 ಲಕ್ಷ ಜನರಿಗೆ ತಿಂಗಳಿಗೆ 25 ಕೆಜಿ ಆಹಾರ ಧಾನ್ಯ ಕಡಿಮೆ ದರಕ್ಕೆ ನೀಡಲಾಗುವುದಂತೆ. ಈಯೋಜನೆಯನ್ನು ಅತ್ಯಂತ ಸಂಭ್ರಮದಿಂದ ಸ್ವಾಗತಿಸಿ ವಿಧಾನಸಭೆಯ ಬಾಂಕ್ವೆಟ್ ಹಾಲ್‌ನಲ್ಲಿ (ಇಲ್ಲೆಂತಹ ಬಡವರು ಎನ್ನಬೇಡಿ) ಉದ್ಘಾಟಿಸಿದ್ದಾರೆ. ಕೇಂದ್ರ ಸಚಿವ ಶಾಂತಕುಮಾರ್‌ರೊಂದಿಗೆ ಮುಖ್ಯಮಂತ್ರಿಗಳೂ ದನಿಗೂಡಿಸಿದ್ದಾರೆ.

ದೇಶದಲ್ಲಿ 6.04 ಲಕ್ಷ ಟನ್ ಆಹಾರ ಧಾನ್ಯ ದಾಸ್ತಾನಿದ್ದುದರಿಂದ ಕರುಣೆಯುಕ್ಕಿ ವಾಜಪೇಯಿಯವರು ಹೀಗೆ ಒಂದು ಕೋಟಿ ಕಡುಬಡವರಿಗೆ ಹಂಚಲು ಆದೇಶಿಸಿದ್ದಾರಂತೆ ಹೀಗೆ ಹಂಚಿಕೊಂಡ 15ನೇ ರಾಜ್ಯ ಕರ್ನಾಟಕ.

ತಮಾಶೆಯ ವಿಚಾರವೆಂದರೆ ಕೇಂದ್ರ ಸರ್ಕಾರವೇ ಹೇಳುವಂತೆ ಬಡತನದ ರೇಖೆಯ ಕೆಳಗೆ ಇರುವ ಬಡವರೇ 38 ಕೋಟಿಗೂ ಅಧಿಕ. ಈಯೋಜನೆ ಅಂತಹ ಬಡವರ ಆಸರೆಗೆ ಬಂದರೂ ಇನ್ನೂ 37 ಕೋಟಿಯಷ್ಟು ಜನರ ಪಾಲಿಗೆ ಇನ್ನೇನು ಗತಿ? ಪಡಿತರ ವ್ಯವಸ್ಥೆಗೆ ಸಬ್ಸಿಡಿ ನಿಲ್ಲಿಸಬೇಕೆಂಬ ಒತ್ತಾಯ ವಿದೇಶಿ ಹಣಕಾಸಿನ ಧಣಿಗಳಿಂದ ಬರುತ್ತಿರುವಂತೆ ಬಡವರ ಪ್ರಮಾಣವನ್ನು ಪೇಪರ್ ದಾಖಲೆಗಳಲ್ಲಿ ಕಡಿಮೆಯಾಗುತ್ತಾ ನಡೆದಿದೆ. ಬಡವರು ಹಾಗೂ ಕಡು ಬಡವರ ವ್ಯಾಖ್ಯಾನವೇ ಇಂತಹ ಪಿತೂರಿಯ ಭಾಗ.

ಇದನ್ನೇ ಅನುಸರಿಸುತ್ತಿರುವ ಕಾಂಗ್ರೆಸ್‌ನ ರಾಜ್ಯ ಸರ್ಕಾರ ಸಹ ಹಿಂದಿನ ರೇಷನ್ ಕಾರ್ಡ್‌ಗಳನ್ನು ರದ್ದುಗೊಳಿಸಿ, ಸಲ್ಲದ ಹೊಸ ನಿಯಮಾವಳಿ ರೂಪಿಸಿ ಸುಮಾರು 70 ಲಕ್ಷದಷ್ಟಿದ್ದ ಕಾರ್ಡುದಾರರನ್ನು 25 ಲಕ್ಷಕ್ಕೆ ಇಳಿಸಿಬಿಟ್ಟಿದ್ದಾರೆ. ಇದುವಾಜಪೇಯಿ ಮತ್ತು ಕೃಷ್ಣರವರು ಬಡತನ ಹಾಗೂ ಬಡವರನ್ನು ನಿರ್ಮೂಲನ ಮಾಡುವ ವಿನೂತನ ಪರಿ! ಹೀಗೆ ಕಡು ಬಡವರ ಉಡಿಗೆ ಹಾಕುವ ಗೋಡಾನ್‌ಗಳಲ್ಲಿ ಇಡಲಾದ ಈ ಧಾನ್ಯಗಳನ್ನು ಕೊಂಡೊಯ್ಯುವ ಶಕ್ತಿಯಾದರೂ ಇದೆಯಾ ಎಂದು ಪರಿಶೀಲಿಸಬೇಕು. ಪಡಿತರ ವಸ್ತುಗಳ ಬೆಲೆಗಳನ್ನು ಗಗನಕ್ಕೇರಿಸಿ ಹತ್ತಿರ ಸುಳಿಯದಂತೆ ಮಾಡುವ, ವಸ್ತುಗಳನ್ನು ಒಂದೊಂದಾಗಿ ಕೈ ಬಿಡುವ (ಸಕ್ಕರೆಯನ್ನು ಇತ್ತೀಚೆಗೆ ಈ ಅಂಗಡಿಯಿಂದ ಕೈ ಬಿಡಲಾಗಿದೆ). ಬಡವರಲ್ಲೇ ಭೇದ ಮಾಡುವ ಸರ್ಕಾರದ ಅಂತಿಮ ಯೋಜನೆ ಅನ್ನ ನೀಡುವುದಲ್ಲ ಮಣ್ಣು ಮುಕ್ಕಿಸುವುದು. ಧಾನ್ಯ ಬೆಳೆದು ಅನ್ನ ಕೊಡುವ ರೈತರೂ ಕಂಗಾಲಾಗಿ ಆತ್ಮಹತ್ಯೆ ಹಾದಿ ಹಿಡಿದಾಗ ಈಬಡವರು ಇನ್ನೆಲ್ಲಿಗೆ ಹೋಗಬೇಕು. ಇಡೀ ದೇಶದ ಎಲ್ಲರಿಗೂ ಪಡಿತರ ವ್ಯವಸ್ಥೆ ಮೂಲಕ ಆಹಾರ ಧಾನ್ಯಗಳು, ವಸ್ತುಗಳು ನೀಡಲೇಬೇಕಿರುವ ಸ್ಥಿತಿಯಿರುವಾಗ **ಈ ಅನ್ನ ಯೋಜನೆಗಳು ಕಿಸೆಗೆ ಕತ್ತರಿ ಹಾಕುವ ಕನ್ನ ಯೋಜನೆಗಳು ಎಂಬುದು ಸ್ಪಷ್ಟ.**

ಬಡ ಜನರಲ್ಲೇ ತಾರತಮ್ಯವೆಬ್ಬಿಸುವುದನ್ನು ನಿಲ್ಲಿಸಬೇಕು. ಹಂತ ಹಂತವಾಗಿ ಪಡಿತರ ವ್ಯವಸ್ಥೆಯನ್ನು ಛಿದ್ರಗೊಳಿಸುವ ಪಿತೂರಿಗಳನ್ನು ಕೈಬಿಡಬೇಕು.

ನಿವೃತ್ತ ಶಿಕ್ಷಕರ ನೇಮಕ: ನಿರುದ್ಯೋಗಿ ಯುವಜನರ ಪಾಲಿಗೆ ಕರಾಳವಾದ ತೀರ್ಮಾನ


ಪ್ರಾಥಮಿಕ ಶಿಕ್ಷಣದ ಹೊಣೆಯನ್ನು ಈಗ ವಿಪ್ರೋದ ಅಜಿಂ ಪ್ರೇಮ್‌ಜಿಯಂತಹ ಕೈಗಾರಿಕೋದ್ಯಮಿಗಳಿಗೆ ಒಪ್ಪಿಸಿ ಕೈತೊಳೆದುಕೊಳ್ಳುತ್ತಿದೆ ಸರ್ಕಾರ. ಉತ್ತರ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ನೀಡುವ, ಅದನ್ನು 'ಸುಧಾರಿಸುವ' ಉದ್ಧಾರಕ ಕಾರ್ಯವನ್ನು ಇತ್ತೀಚೆಗೆ ಕೃಷ್ಣರವರು ಪ್ರೇಮ್‌ಜಿಗೆ ಒಪ್ಪಿಸಿದರು. ಇದರ ಒಪ್ಪಂದದ ಒಳಹೂರಣ ಇನ್ನೂ ಹೊರ ಬರಬೇಕಷ್ಟೆ.

ಆದರೆ ಉತ್ತರ ಕರ್ನಾಟಕದಲ್ಲಿನ ಶಾಲೆಗಳಲ್ಲಿ ಸುಮಾರು 7000 ದಷ್ಟು ಶಿಕ್ಷಕರ ಕೊರತೆಯಿದೆ ಎಂದು ಸರಕಾರ ಅಂದಾಜು ಮಾಡಿದೆ. 12 ಸಾವಿರ ಶಾಲಾ ಕೊಠಡಿಗಳ ಅಗತ್ಯವಿದ್ದು ಈಗ 3000 ನಿರ್ಮಾಣ ಮಾಡಲಾಗುವುದಂತೆ. ಇದಕ್ಕೆ ನಬಾರ್ಡ್ ನಿಂದ 200 ಕೋಟಿ ಸಾಲ ಪಡೆದು ಒದಗಿಸಲಾಗಿದೆಯಂತೆ.

ಈಗ ಕೊರತೆ ಇರುವ 7000 ಶಿಕ್ಷಕರ ಸ್ಥಾನಗಳಿಗೆ ಹೊಸ ನೇಮಕಾತಿಯನ್ನು ಮಾಡಿಕೊಳ್ಳುತ್ತಿಲ್ಲ. ಬದಲಾಗಿ ಈಗಾಗಲೇ ಸೇವೆಯಿಂದ ನಿವೃತ್ತರಾಗಿರುವ ಶಿಕ್ಷಕರನ್ನು 'ನೇಮಕ' ಮಾಡಿಕೊಳ್ಳಲು ನಿರ್ಧರಿಸಲಾಗಿದೆ. ಅಂದರೆ 'ಖಾಯಂ' ನೇಮಕಾತಿಯಲ್ಲ. ಪೂರ್ಣ ಸಂಬಳವಿಲ್ಲ. ಬಳಸಿ ಬಿಸಾಡುವ 'ಉದಾರೀಕರಣ ಮಂತ್ರನ್ನು' ಶಿರಾಸವಹಿಸಿ ಜಾರಿಗೊಳಿಸುತ್ತಿದ್ದಾರೆ ಕ[illegible]ವರು. ಅದೂ ಉದ್ಯಮಪತಿಗಳೊಂದಿಗೆ [illegible]ರಿ. ಹಾಗಾದರೆ ನೌಕರರನ್ನು ವಯೋಮಿತಿ ಆಧಾರದಲ್ಲಿ ನಿವೃತ್ತಿಗೊಳಿಸುವುದಕ್ಕೆ ಏನು ಅರ್ಥವಿದೆಯೆಂದು ಸರ್ಕಾರ ಸ್ಪಷ್ಟಪಡಿಸಬೇಕು. ಶಿಕ್ಷಕರ ತರಬೇತಿ ಪಡೆದು, ಉದ್ಯೋಗಕ್ಕಾಗಿ ಚಾತಕ ಪಕ್ಷಿಗಳಂತೆ ಕಾಯುತ್ತಿರುವ ಹತ್ತಾರು ಸಾವಿರ ನಿರುದ್ಯೋಗಿ ಯುವ ಪದವೀಧರರ ಪಾಡೇನು? ಅವರ ಭವಿಷ್ಯವೇನು? ಯುವಜನರ ಆಶಯಗಳಿಗೆ ಕಲ್ಲು ಚಪ್ಪಡಿ ಎಳೆಯುತ್ತಿದೆ ದ್ರೋಹಿ ಸರ್ಕಾರ. ಅವರ ಭವಿಷ್ಯಕ್ಕೆ ಬೆಂಕಿ ಹಚ್ಚಿದೆ. ಒಂದೆಡೆ ಟಿಸಿಎಚ್, ಬಿಎಡ್‌ಗಳ ತರಬೇತಿಗೆ ಖಾಸಗಿ ಕಾಲೇಜುಗಳ ಆರಂಭಕ್ಕೆ ಎಗ್ಗಿಲ್ಲದೇ ಅನುಮತಿ ನೀಡಿ, ಮನಬಂದಂತೆ ಡೊನೇಶನ್ ಸುಲಿಗೆಮಾಡಲು ಅವಕಾಶ ಕಲ್ಪಿಸುವ ಸರ್ಕಾರ, ತರಬೇತಿ ಪಡೆದು ಹೊರಬಂದರೆ ದಿಕ್ಕೇಡಿಗಳಾಗಿ ಅಂಡಲೆಯಬೇಕಾಗುವ ಸ್ಥಿತಿಯನ್ನು ಬಳುವಳಿಯಾಗಿ ನೀಡುತ್ತಿದೆ.

ಇಂತಹುದೇ ನಿರುದ್ಯೋಗಿಗಳಿಂದ ಹೈಸ್ಕೂಲ್ ಶಿಕ್ಷಕರ ಉದ್ಯೋಗಕ್ಕೆ ಅರ್ಜಿ ಆಹ್ವಾನಿಸಿ ಪ್ರತಿ ಅರ್ಜಿಯೊಂದಿಗೆ 200 ರೂ.ಗಳ ಡಿಮಾಂಡ್ ಡ್ರಾಫ್ಟ್‌ನ್ನು ಸುಲಿದು ಕೋಟ್ಯಾಂತರ ಸಂಪಾದಿಸಿ ಶೋಷಿಸುತ್ತಿದೆ ಸರ್ಕಾರ. ಅದನ್ನೇ ಹತ್ತಾರು ವರ್ಷಗಳ ಕಾಲ ನೇಮಕ ಮಾಡುವ ಕೆಲವೇ ಶಿಕ್ಷಕರಿಗೆ ಸಂಬಳವಾಗಿ ನೀಡಿ ಅಟ್ಟಹಾಸದಿಂದ 'ಸಂಪನ್ಮೂಲ' ಕ್ರೋಢೀಕರಿಸಿದ ಕೀರ್ತಿ ಮಾತನಾಡುತ್ತದೆ ಅಮಾನವೀಯ ಸರ್ಕಾರ.

ಇದು ತೊಲಗಬೇಕು. ಎಲ್ಲರೂ ಇದನ್ನು ಉಗ್ರವಾಗಿ ವಿರೋಧಿಸಬೇಕು. ನಿವೃತ್ತ ಶಿಕ್ಷಕರ ನೇಮಕಾತಿ ಆಗಕೂಡದು. ಆ ಸ್ಥಾನಗಳಿಗೆ ಖಾಯಂ ಹೊಸ ನೇಮಕಾತಿ ಆಗಲೇಬೇಕು. ನಿರುದ್ಯೋಗಿಗಳ ವಿರುದ್ಧ ನಿವೃತ್ತರನ್ನು ಎತ್ತಿಕಟ್ಟುವುದು ನಿಲ್ಲಬೇಕು.



ಕಳೆದ ಜುಲೈ ಒಂದರಂದು ಅಖಿಲ ಭಾರತ ವಿಮಾ ನೌಕರರ ಸಂಘ, ಬೆಂಗಳೂರು ವಿಭಾಗ I-II ಸಂಯುಕ್ತವಾಗಿ 'ಆರ್ಥಿಕ ಅಭಿವೃದ್ಧಿ - ಒಂದು ಪರ್ಯಾಯ ದೃಷ್ಟಿಕೋನ' ಎಂಬ ವಿಚಾರವಾಗಿ ರಾಜ್ಯಮಟ್ಟದ ಸಮಾವೇಶವನ್ನು ಆಯೋಜಿಸಿದ್ದವು. ನಗರದ ಎನ್‌ಜಿಓ ಸಭಾಂಗಣದಲ್ಲಿ ಏರ್ಪಟ್ಟಿದ್ದ ಈ ಸಮಾವೇಶದಲ್ಲಿ ಸಿಪಿಐ(ಎಂ) ನ ಪೊಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿ, ಭಾರತೀದಾಸ್ ವಿಶ್ವವಿದ್ಯಾಲಯ, ತಿರುಚ್ಚಿಯ ಅರ್ಥ ಶಾಸ್ತ್ರದ ಪ್ರಾಧ್ಯಾಪಕ ವೆಂಕಟೇಶ ಆತ್ರೇಯ ಮತ್ತು ಹಿಂದೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ಶೇಷಾದ್ರಿ ಪ್ರಮುಖ ಭಾಷಣಕಾರರಾಗಿದ್ದರು.

ಬಂಡವಾಳಿಗರಿಗೆ ಸಾರ್ವಜನಿಕ ಸ್ವತ್ತಿನ ಹಸ್ತಾಂತರ ಸಲ್ಲದು

ಯೆಚೂರಿ

ಸಮಾವೇಶದ ಪ್ರಥಮ ಭಾಷಣಕಾರರಾಗಿ ಮಾತನಾಡಿದ ಯೆಚೂರಿ ಸ್ವಾತಂತ್ರ್ಯ ನಂತರದ ಆರ್ಥಿಕ ಅಭಿವೃದ್ಧಿಯ ಸ್ಥೂಲ ಚಿತ್ರಣ ನೀಡಿದರು. ದೇಶಕ್ಕೆ ಸ್ವಾತಂತ್ರ್ಯ ಬಂದಾಗ ದೇಶದಲ್ಲಿ ಪ್ರಚಲಿತವಿದ್ದ ಪಾಳೆಯಗಾರಿಯನ್ನು ನಾಶ ಮಾಡದೆಯೇ ಬಂಡವಾಳಶಾಹಿಯನ್ನು ಸ್ಥಾಪಿಸಲಾಯ್ತು. ಇದು ಬಹುತೇಕ ಮಂದಿಯ ಆರ್ಥಿಕ ಬೆಳವಣಿಗೆಯನ್ನು ಇಲ್ಲವಾಗಿಸಿತು. ಈ ಬೆಳವಣಿಗೆಯ ಮಿತಿ ಭಾರತ ಆರ್ಥಿಕ ವ್ಯವಸ್ಥೆಯ ಬಹುದೊಡ್ಡ ದೋಷವೆಂದರೆ ದೇಶದೊಳಗಿನ ಮಾರುಕಟ್ಟೆಯ ನಿಯಂತ್ರಣ ಮತ್ತು ಮಿತಿ. ಇದನ್ನು ಇಲ್ಲವಾಗಿಸಲು ದೇಶದ ಉಳ್ಳವರ ಗ್ರಾಹಕ ವಸ್ತುಗಳ ಉತ್ಪಾದನೆ (Luxury Goods) ಮತ್ತು ರಫ್ತಿನ ಮೇಲೆ ಆರ್ಥಿಕತೆ ಅವಲಂಬಿಸಿದ್ದರಿಂದ ದೇಶ ವಿಶ್ವಬ್ಯಾಂಕ್ ಮತ್ತು ಐಎಂಎಫ್‌ಗಳ ಭದ್ರಮುಷ್ಟಿಯಲ್ಲಿ ಸಿಲುಕುವಂತಾಯ್ತು.

ಇಂದು ಜಗತ್ತಿನ ಶೇ 80 ವಹಿವಾಟನ್ನು ದೊಡ್ಡ



ಬಹುರಾಷ್ಟ್ರೀಯ ಸಂಸ್ಥೆಗಳು ನಿಯಂತ್ರಿಸುತ್ತದೆ. ಬಂಡವಾಳದ ಹೂಡಿಕೆಯ ವಿಚಾರದಲ್ಲಿ ಅವು ತೋರುತ್ತಿರುವ ಚಲನೆ ಆ ಬಂಡವಾಳ ಹೂಡಿಕೆಗೆ ಜೂಜಿನ ಸ್ವರೂಪ ನೀಡಿದೆ. ಸ್ವಾತಂತ್ರ್ಯ ನಂತರ ಸಾರ್ವಜನಿಕ ವಲಯಗಳ ಲಾಭ ಪಡೆದ ಬಂಡವಾಳಗಾರರು ಇಂದು ಈ ಸಾರ್ವಜನಿಕ ಸ್ವತ್ತನ್ನು ತಮಗೆ ಹಸ್ತಾಂತರಿಸುವಂತೆ ಒತ್ತಾಯಿಸುತ್ತಿದ್ದಾರೆ. ಅಂತರ್ರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವ ವಾಣಿಜ್ಯ ಸಂಸ್ಥೆಗಳು ಸಾಮಾನ್ಯ ಜನರ ಬದುಕನ್ನು ನರಕವಾಗಿಸಿವೆ ಎಂದ ಅವರು ಜಾಗತೀಕರಣ ಒಂದು ವಿಶ್ವವ್ಯಾಪಿ ವಿಚಾರ. ಭಾರತ ಅದರಿಂದ ಹೊರಗುಳಿಯಲಾರದೆಂಬ ವಾದವನ್ನು ಪ್ರಸ್ತಾಪಿಸುತ್ತಾ ಅವರು ವಿಶ್ವವಿದ್ಯಮಾನದಲ್ಲಿ ತನ್ನನ್ನು ತೊಡಗಿಸಿಕೊಳ್ಳುವಲ್ಲಿ ದೇಶದ ಅಭ್ಯುದಯ ಮತ್ತು ಹಿತಾಸಕ್ತಿಯೊಂದಿಗೆ ರಾಜಿ ಮಾಡಿಕೊಳ್ಳಬೇಕೆ? ಎಂದು ಪ್ರಶ್ನಿಸಿದರು. ಆರ್ಥಿಕ ಅಭಿವೃದ್ಧಿಗೆ ಮಹತ್ವದ್ದೆಂದರೆ ಆಂತರಿಕ ಮಾರುಕಟ್ಟೆಯ ವಿಸ್ತರಣೆ ಬಡತನದ ರೇಖೆಯಡಿಯ ಜನರಿಗೂ ಕೊಳ್ಳುವ ಶಕ್ತಿ ದೊರೆಯುವಂತಾಗಬೇಕು. ಕಾನೂನಿನ ಪುಸ್ತಕಗಳಲ್ಲಿ ಮಾತ್ರವಿರುವ ಭೂಸುಧಾರಣೆ ಜಾರಿಯಾಗಬೇಕು. ಸರ್ಕಾರ ಬಡವರ ಆಶಯ ಮತ್ತು ಹಿತಾಸಕ್ತಿಗಳನ್ನು ಪ್ರತಿಪಾದಿಸುವಂತಾಗ ಬೇಕೆಂದು ಅಭಿಪ್ರಾಯ ಪಟ್ಟರು. ಹೀಗಾಗ ಬೇಕಾದಾಗ ಜನರ ಚಳುವಳಿ ಮತ್ತು ಹೋರಾಟಗಳು ತೀವ್ರವಾಗಬೇಕು. ನೀವೆಷ್ಟೇ ಹೋರಾಟ ನಡೆಸಿದರೂ ನಿರ್ಧಾರ ತೆಗೆದುಕೊಳ್ಳುವ

ಆರ್ಥಿಕ ಅಭಿವೃದ್ಧಿ - ಪರ್ಯಾಯ ದೃಷ್ಟಿಕೋನ

ಎ.ಐ.ಐ.ಇ.ಎ. ವಿಚಾರಸಂಕಿರಣ

ಅಧಿಕಾರದಲ್ಲಿಲ್ಲದಿದ್ದರೆ ಅದು ಫಲಕಾರಿಯಾಗದು. ಹಾಗಾಗಿ ಜನಪರವಾಗಿರುವವರ ಕೈಗೆ ಅಧಿಕಾರ ನೀಡುವುದು ಬಹಳ ಮುಖ್ಯ. ಆ ನಿಟ್ಟಿನಲ್ಲಿ ಮತದಾರರಾಗಿ ನಿಮ್ಮ ಜವಾಬ್ದಾರಿ ದೊಡ್ಡದಿದೆ ಎಂದರು. ನಂತರ ಮಾತನಾಡಿದ ಶ್ರೀ ವೆಂಕಟೇಶ ಆತ್ರೇಯ ಮಾಧ್ಯಮಗಳನ್ನು ನಂಬುವುದಾದರೆ ಭಾರತ ಭುವಿಯ ಮೇಲಿನ ಸ್ವರ್ಗವಾಗಿರಬೇಕಿತ್ತು. ಆದರೆ ಅಭಿವೃದ್ಧಿ ಎಂಬುದು ಅದರಲ್ಲೂ 1970 ರ ನಂತರದ ಅಭಿವೃದ್ಧಿ ಏಕಮುಖೀಯ ವಾಗಿದ್ದು ಉಳ್ಳವರ ಮತ್ತು ಇಲ್ಲದಿರುವವರ ನಡುವಿನ ಅಂತರವನ್ನು ಇನ್ನಷ್ಟು ಹಿಗ್ಗಿಸಿದೆಯೆಂದರು. ಜನರ ಆಹಾರದ ಭದ್ರತೆಯನ್ನೇ ಇದು ಇಲ್ಲವಾಗಿಸಿದೆ. ದೇಶದ ಉಗ್ರಾಣಗಳಲ್ಲಿ 50 ಮಿಲಿಯನ್ ಟನ್‌ನಷ್ಟು ಆಹಾರಧಾನ್ಯ ತುಂಬಿ ತುಳುಕುತ್ತಿರುವಾಗಲೇ ಹಲವಾರು ಜನ ಹಸಿವಿನಿಂದ ಕಂಗೆಟ್ಟು ಸಾಯುತ್ತಿರುವುದು ವಿಪರ್ಯಾಸವಲ್ಲವೇ? ಎಂದರು. ಬಡವರಿಗೆ ನೀಡುವ ರಿಯಾಯ್ತಿ ಮೊಟಕುಗೊಳಿಸುವ ಸರ್ಕಾರ ಶ್ರೀಮಂತರಿಗೆ ಹಲವಾರು ಹೆಸರಿನಲ್ಲಿ ರಿಯಾಯ್ತಿ ನೀಡುತ್ತದೆ. ವಿಶ್ವಬ್ಯಾಂಕ್ ಮತ್ತು ಐಎಂಎಫ್ ನ ಹಿಡಿತದಿಂದಾಗಿ ದೇಶದ ಸಮಗ್ರತೆ ಮತ್ತು ಪ್ರಜಾಪ್ರಭುತ್ವಕ್ಕೆ ಮಾರಕವಾಗಿದೆ.

ದೇಶದಲ್ಲಿ ಸಮರ್ಥವಾದ ಭೂಸುಧಾರಣೆ ಮತ್ತು ತೆರಿಗೆ ವಸೂಲಾತಿಯ ಅಗತ್ಯವಿದೆ. ಸಣ್ಣ ಮತ್ತು ಮಧ್ಯಮ ಕಾರ್ಖಾನೆಗಳ ಸ್ಥಾಪನೆಯಿಂದ ಉದ್ಯೋಗವಕಾಶಗಳನ್ನು ಹೆಚ್ಚಿಸಬೇಕಿದೆ. ಪ್ರಾಕೃತಿಕ ಸಂಪನ್ಮೂಲಗಳ ಸಮರ್ಥ ಬಳಕೆ ಮತ್ತು ನಷ್ಟಗಳನ್ನು ತಡೆಯುವುದೂ ಅಷ್ಟೇ ಅಗತ್ಯ. ಪ್ರಾಕೃತಿಕ ಸಂಪನ್ಮೂಲ ವೆಂಬುದು ನಮ್ಮ ಮುಂದಿನ ಜನಾಂಗಕ್ಕೆ ಉಳಿಸಿಕೊಡ ಬೇಕಾದ ಕೊಡುಗೆ ಎಂದವರು ವಿವರಿಸಿದರು.

ಡಾ|| ಶೇಷಾದ್ರಿ ಮಾತನಾಡುತ್ತಾ ಹೊಸ ಆರ್ಥಿಕ ನೀತಿ ನಮ್ಮನ್ನು ಸಾಮಾಜಿಕ ಡಾರ್ವಿನ್ ವಾದದತ್ತ ತಳ್ಳುತ್ತಿದೆಯೆಂದರೆ 1990 ರ ದಶಕದಲ್ಲಿ ಆಡಳಿತ ನಿರ್ಮಿತ ಅಭಿವೃದ್ಧಿಯಿಂದ ನಾವು ಮಾರುಕಟ್ಟೆ ನಿರ್ಮಿತ ಅಭಿವೃದ್ಧಿಯೆಡೆಗೆ ಸಾಗಿದ್ದೇವೆ. ಇದರಿಂದಾಗಿ ಕೆಲವೇ ಮಂದಿ ಶ್ರೀಮಂತರಾಗಿ ಹಲವು ಮಂದಿ ಬಡವರಾಗುತ್ತಿದ್ದಾರೆ. ಮಾರುಕಟ್ಟೆ ಮತ್ತು ಸಂಸ್ಕೃತಿ, ಪ್ರಜಾಪ್ರಭುತ್ವ ಜೊತೆ ಜೊತೆಯಾಗಿರಲಾರವು. ಏಕೆಂದರೆ ಜಾಗತೀಕರಣವೆಂಬುದು ಜನರ ನಡುವೆ ಆರ್ಥಿಕ, ಸಾಮಾಜಿಕ ಮತ್ತು ಲಿಂಗಾಧಾರಿತ ತಾರತಮ್ಯ ಉಂಟುಮಾಡುತ್ತದೆ. ಅಭಿವೃದ್ಧಿಶೀಲ/ಅಭಿವೃದ್ಧಿ ಹೊಂದಿದ್ದ ದೇಶಗಳ ಕೆಲವೇ ಮಂದಿ ಇತರ ದೇಶಗಳ ಒಟ್ಟು ಜನಸಂಖ್ಯೆಗಿಂತ ಹೆಚ್ಚಿನ ಸಂಪನ್ಮೂಲ ಬಳಸುತ್ತಾರೆ. ಸಂಪನ್ಮೂಲಗಳ ನ್ಯಾಯಯುತ ಬಳಕೆ ಅಭಿವೃದ್ಧಿಗೆ ಬಹಳ ಮುಖ್ಯವಾದುವು ಎಂದರು. ಜನರ ಬಡತನ, ಹಸಿವು ಮತ್ತು ನೋವು ಅಭಿವೃದ್ಧಿಯನ್ನು ಪರ್ಯಾಯ ದೃಷ್ಟಿಕೋನದಿಂದ ಪರಾಮರ್ಶಿಸುವುದನ್ನು ಅಗತ್ಯವಾಗಿಸಿದೆ ಎಂದರು. ಭೂಸುಧಾರಣೆ, ಆಡಳಿತದ ವಿಕೇಂದ್ರೀಕರಣ ಮತ್ತು ಔದ್ಯೋಗಿಕ ಅವಕಾಶಗಳ ಸೃಷ್ಟಿಯೇ ಇಂತಹ ಬದಲಾದ ದೃಷ್ಟಿಕೋನದ ಗುರಿಯಾಗಬೇಕೆಂದು ಅವರು ಅಭಿಪ್ರಾಯ ಪಟ್ಟರು. ಸಶಕ್ತ, ಚಲನಶೀಲ ಮಧ್ಯಮವರ್ಗ ಮತ್ತು ರೈತಾಪಿ ಜನರು ಒಂದಾಗಿ ಹೋರಾಟ ನಡೆಸಿದಾಗ ಮಾತ್ರವೇ ಈ ಗುರಿಯ ಸಾಕಾರವಾಗಬಲ್ಲದು ಎಂದವರು ಪ್ರತಿಪಾದಿಸಿದರು.

ಅಖಿಲ ಭಾರತ ವಿಮಾ ನೌಕರರ ಸಂಘದ ಸಹಕಾರ್ಯದರ್ಶಿಯವರಾದ ಕಾಂ.ಗೋವಿಂದ ರಾಜನ್ ಅಧ್ಯಕ್ಷತೆ ವಹಿಸಿ ಕಾರ್ಯಕ್ರಮ ನಿರ್ವಹಿಸಿದರು.

ಆರಂಭದಲ್ಲಿ ದಕ್ಷಿಣ ವಲಯ ವಿಮಾ ನೌಕರರ ಒಕ್ಕೂಟದ ಅಧ್ಯಕ್ಷರಾದ ಕಾಂ. ಅಮಾನುಲ್ಲಾ ಖಾನ್ ಸ್ವಾಗತ ಕೋರಿದರೆ ಕೊನೆಯಲ್ಲಿ ಕಾಂ. ನಾಗರಾಜ್, ಕಾರ್ಯದರ್ಶಿ ವಿಮಾ ಕಾರ್ಪೋರೇಷನ್ ನೌಕರರ ಸಂಘ, ಬೆಂಗಳೂರು ವಿಭಾಗ-1 ವಂದಿಸಿದರು.

ನೌಕರರ ಸಂಘವೊಂದು ಆಯೋಜಿಸಿದ್ದ ಈ ಕಾರ್ಯಕ್ರಮ ಕೇವಲ ವಿಚಾರದ ದೃಷ್ಟಿಯಿಂದ ಮಾತ್ರವಲ್ಲ, ಹಲವಾರು ದೃಷ್ಟಿಯಿಂದ ವಿಶಿಷ್ಟಪೂರ್ಣವಾಗಿತ್ತು. ರಜಾ ದಿನವೊಂದರಲ್ಲಿ 500 ಕ್ಕೂ ಮೀರಿ ಭಾಗವಹಿಸಿದ ನೌಕರರು, ಮುಖ್ಯವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದ ಮಹಿಳೆಯರು, ಇತರ ಸಂಘಟನೆಗಳ ಸದಸ್ಯರು ಈ ಎಲ್ಲರೂ ಸಮಾವೇಶದ ಯಶಸ್ಸಿನಲ್ಲಿ ತಮ್ಮ ವೈಶಿಷ್ಟಪೂರ್ಣ ಪಾತ್ರ ವಹಿಸಿದವು.

ವರದಿ - **ಗೀತಾ ಕೆ.ಎಸ್.**

ಇದೇ ಸಂದರ್ಭದಲ್ಲಿ ಯೆಚೂರಿಯವರು ಎನ್.ಎಂ.ಸುಂದರಂ ರವರು ಬರೆದ ಕಿರುಪುಸ್ತಕವೊಂದನ್ನು ಬಿಡುಗಡೆ ಮಾಡಿದರು



ನಾಚಿಕೆಗೇಡಿನ ವಾಜಪೇಯಿ ಸರ್ಕಾರ

ಸಂವಿಧಾನದ ಮಿತಿಗಳ ನಿರ್ಲಜ್ಜ ಉಲ್ಲಂಘನೆ

ತಮಿಳುನಾಡಿನಲ್ಲಿ ಎದ್ದಿದ್ದ ಕೋಲಾಹಲವೀಗ ನಾಟಕೀಯವಾಗಿ ಕೊನೆಗೊಂಡಿದೆ. ಕಿಡಿಕಾರುವ ಬಿರುಸಿನ ಮಾತುಗಳು ತಾತ್ಕಾಲಿಕವಾದರೂ ಮರೆಯಾಗಿವೆ. ಐದು ದಿನಗಳ ಕೇದ್ರ ಕಾರಾಗೃಹ ವಾಸದಿಂದ ಮಾಜಿ ಮುಖ್ಯಮಂತ್ರಿ ಕರುಣಾನಿಧಿ ಬಿಡುಗಡೆಯಾಗಿದ್ದಾರೆ. ಹಾಗೆಯೇ ಕೇಂದ್ರದ ಸಚಿವರುಗಳಾದ ಟಿ.ಆರ್.ಬಾಲು, ಮುರಸೋಳಿ ಮಾರನ್‌ರವರ ಮೇಲಿನ ಮೊಕದ್ದಮೆಗಳು ವಾಪಸಾಗಿ ಹೊರಬಂದಿದ್ದಾರೆ. ಇನ್ನೇನು ಈ ವಿವಾದ ತಣ್ಣಗಾಯಿತು ಎಂಬಂತೆ ಕಂಡರೂ ಉಭಯ ನಾಯಕರ ಮನದೊಳಗೆ ಹೆಡೆ ಎತ್ತಿರುವ ಹಗೆ ಇಲ್ಲಿಗೆ ಮುಗಿಯಿತು ಎಂದು ಭಾವಿಸುವುದು ಕಷ್ಟವೇ. ಬಿಡುಗಡೆಗೊಂಡ ಕರುಣಾನಿಧಿಯವರು 'ಇದು ವಿಶ್ವದ ಎಲ್ಲಾ ತಮಿಳಿಗರಿಗೆ ಸಂದ ಜಯ' ಎಂದು ಬಣ್ಣಿಸಿದ್ದಾರೆ.

ಚೆನ್ನೈನಲ್ಲಿ ನಿರ್ಮಿಸಲಾದ ಫ್ಲೈಓವರ್‌ನಲ್ಲಿ ನಡೆದಿದೆಯೆನ್ನಲಾದ ಹಗರಣಗಳಿಗೂ, ಇವರ ಬಂಧನ-ಬಿಡುಗಡೆಗೂ ವಿಶ್ವದ ತಮಿಳರಿಗೂ



ಕರುಣಾನಿಧಿಯವರು 'ಇದು ವಿಶ್ವದ ಎಲ್ಲಾ ತಮಿಳಿಗರಿಗೆ ಸಂದ ಜಯ' ಎಂದು ಬಣ್ಣಿಸಿದ್ದಾರೆ. ಚೆನ್ನೈನಲ್ಲಿ ನಿರ್ಮಿಸಲಾದ ಫ್ಲೈಓವರ್‌ನಲ್ಲಿ ನಡೆದಿದೆಯೆನ್ನಲಾದ ಹಗರಣಗಳಿಗೂ, ಇವರ ಬಂಧನ-ಬಿಡುಗಡೆಗೂ ವಿಶ್ವದ ತಮಿಳರಿಗೂ ಎಲ್ಲಿಯ ಸಂಬಂಧ?

ಎಲ್ಲಿಯ ಸಂಬಂಧ ಎಂಬುದನ್ನು ಬಹುಶಃ ಕರುಣಾನಿಧಿಯವರೂ ವಿವರಿಸಲಾರರು.

ಮಧ್ಯರಾತ್ರಿಯಲ್ಲಿ ಕರುಣಾನಿಧಿ ಬಂಧನ, ಅನುಸರಿಸಿದ ವಿಧಾನಗಳು ಜನರ ಕ್ರೋಧಕ್ಕೆ ಕಾರಣವಾಯಿತು. ಕೇಂದ್ರದ ಸಚಿವರುಗಳನ್ನು ಕಾರಾಗೃಹಕ್ಕೆ ತಳ್ಳಿದ್ದು, ಕೇಂದ್ರ ರಾಜ್ಯ ಸರ್ಕಾರಗಳ ನಡುವೆ ಸಂಘರ್ಷ ತೀವ್ರಗೊಳ್ಳಲು ಸಾಕಾಯಿತು.

ಭ್ರಷ್ಟಾಚಾರದ ಹಗರಣದ ಭಾಗಿಯಾದವರು ಯಾರೇ, ಎಂತಹವರೇ, ಪ್ರಧಾನಿ-ಮುಖ್ಯಮಂತ್ರಿಗಳೇ ಆಗಲಿ ಕಾನೂನು ಕ್ರಮಕ್ಕೆ ಒಳಗಾಗಲೇಬೇಕು. ಇದರಲ್ಲಿ ಸಾಮಾನ್ಯ ಪ್ರಜೆಗಳಿಗೂ, ಆಳುವ ನಾಯಕರಿಗೂ ಒಂದೇ ಕಾನೂನು. ಡಿಎಂಕೆ ನಾಯಕರೂ ಸಹ ಇದಕ್ಕೆ ತಲೆಬಾಗಬೇಕು ಎಂದು ಕನಿಷ್ಟ ಅರಿವೂ ಇರಬೇಕಿತ್ತು. ಆದರೆ ಜಯಲಲಿತಾ ಸರ್ಕಾರ ನಡೆದುಕೊಂಡ ಬಗೆಯಿಂದ ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳು ಅತಿಕ್ರಮಣ ಮನೋಭಾವದಿಂದ ನಡೆದುಕೊಳ್ಳಲು ಅವಕಾಶ ಕಲ್ಪಿಸಿಬಿಟ್ಟಿತು.

ಕೇಂದ್ರ ಇಲ್ಲಿಯು ಸಚಿವರ ಮೇಲಿನ ಮೊಕದ್ದಮೆಗಳನ್ನು ಹಿಂತೆಗೆದುಕೊಂಡಿದ್ದರಿಂದ ಕೇಂದ್ರ-ರಾಜ್ಯ ನಿರ್ಣಯಗಳು ನಡುವಿನ ಸಂಘರ್ಷದ ತೀವ್ರತೆಯ ಸಾಧ್ಯತೆ ಕಡಿಮೆಯಾಗಿದೆ. ಆದರೆ ತಮಿಳುನಾಡು ಸರ್ಕಾರದ ವಿರುದ್ಧ ವಾಜಪೇಯಿ ಸರ್ಕಾರ, ಎನ್‌ಡಿಎ ನಡೆದುಕೊಂಡ ಬಗೆ ಅತ್ಯಂತ ಖಂಡನೀಯ.

ಈ ಪ್ರಕರಣದಲ್ಲಿ ಏನೂ ಪಾತ್ರವೇ ಇಲ್ಲದ ರಾಜ್ಯಪಾಲೆ ಶ್ರೀಮತಿ ಫಾತೀಮಾ ಬೀವಿಯವರನ್ನು ವಜಾಗೊಳಿಸಲು ವಾಜಪೇಯಿ ಸರ್ಕಾರ ಸನ್ನಾಹ ನಡೆಸಿತು. ತಮ್ಮ ದುಷ್ಟ ಆಟಕ್ಕೆ ತಕ್ಕಂತೆ ರಾಜ್ಯಪಾಲರು ಕುಣಿಯಬೇಕು, ತಮಗೆ ಮೆಚ್ಚುಗೆಯಾಗುವಂತಹ ವರದಿಯನ್ನು ತಮಿಳುನಾಡು ಸರ್ಕಾರದ ವಿರುದ್ಧ ಕಳುಹಿಸಬೇಕು ಎಂಬುದನ್ನು ತಿರಸ್ಕರಿಸಿ. ವಸ್ತುನಿಷ್ಟವಾಗಿ ವರದಿ ಮಾಡಿದ್ದು ಅಪರಾಧ ವೆಂಬಂತೆ ಕೇಂದ್ರದ ನಾಯಕರು ಕಂಡರು. ಸಂವಿಧಾನ, ಕಾನೂನುಗಳನ್ವಯ ಸಮಚಿತ್ತದಿಂದ ನಡೆದುಕೊಂಡ ಫಾತೀಮಾ ಬೀವಿಯವರು ಕೊನೆಗೆ 'ರಾಜೀನಾಮೆ' ನೀಡಬೇಕಾಗಿ ಬಂತು. "ತಾನು ಅಂತಹ ರಾಜಕಾರಣಿ ಅಲ್ಲವೆಂದೂ, ಅವರಂತೆ ಮನಬಂದಂತೆ ನಡೆದುಕೊಳ್ಳಲಾಗದೆಂದೂ, ಮನಸಾಕ್ಷಿಯಾಗಿ ನಡೆದುಕೊಂಡ ತೃಪ್ತಿ ಇದೆಯೆಂದು'' ಬೀವಿ ಹೇಳಿ ತನ್ನನ್ನು ಸಮರ್ಥಿಸಿಕೊಂಡಿದ್ದಾರೆ. ಕರುಣಾನಿಧಿಯವರ ಸಮ್ಮತಿಯಿಂದಲೇ ಇವರನ್ನು ರಾಜ್ಯಪಾಲರಾಗಿ ಆಯ್ಕೆ ಮಾಡಲಾಗಿತ್ತು ಎಂದು ಮಾಧ್ಯಮಗಳು ತಿಳಿಸಿವೆ. ಅಂತೂ ರಾಜ್ಯಪಾಲರು ಘನತೆಯನ್ನು ಕಾಯ್ದುಕೊಂಡಿದ್ದಾರೆ.




ಪೋಲೀಸರ ಕಾನೂನು ಜಾರಿಗೆ ಅವಕಾಶ ನೀಡದೆ ಅವರೊಂದಿಗೆ ವಾಗ್ವಾದಕ್ಕಿಳಿದು ಇಷ್ಟೆಲ್ಲಾ ರಂಪಾಟಕ್ಕೆ ಕಾರಣರಾದ ಕೇಂದ್ರ ಮಂತ್ರಿಗಳು ಬಾಲು - ಮಾರನ್.

ಇಷ್ಟಾದ ನಂತರ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟವು ಕುಖ್ಯಾತ ಜಾರ್ಜ್ ಫರ್ನಾಂಡೀಸ್‌ನ ನೇತೃತ್ವದಲ್ಲಿ ತಂಡವನ್ನು ಕಳಿಸಿತು. ತಮಿಳುನಾಡಿನಲ್ಲಿ ಕಾನೂನು ಮತ್ತು ಸುವ್ಯವಸ್ಥೆಯ ಬಗ್ಗೆ ವರದಿ ಮಾಡುವುದು ಇವರ ಕೆಲಸ. ಆದರೆ ಕೇಂದ್ರ ಸರ್ಕಾರಕ್ಕೆ ವರದಿ ನೀಡಲು, ಇದಕ್ಕೆ ಯಾವ ಸಂವಿಧಾನಾತ್ಮಕ ಹಕ್ಕನ್ನು ಹೊಂದಿದೆ? ಅದೂ ತೆಹಲ್ಕಾದಂತಹ ಭಾರೀ ರಕ್ಷಣಾ ಹಗರಣದಲ್ಲಿ ಭಾಗಿಯಾಗಿ ದೇಶದ್ರೋಹಿಯಾಗಿ ರಕ್ಷಣಾ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟ ಜಾರ್ಜ್ ಫರ್ನಾಂಡೀಸ್‌ನಿಂದ ವಾಜಪೇಯಿ ಸರ್ಕಾರ ದಿವಾಳಿಯಾದ ನಿದರ್ಶನ ಇನ್ನಾವುದು ಇರಲಾರದು.

'ಸಂಕಷ್ಟ ನಿವಾರಕ' ಫರ್ನಾಂಡೀಸ್ ಈ ಹಿಂದೆ ಕೊಟ್ಟಿರುವ ವರದಿಗಳು ಯಾರಿಗೆ ತಿಳಿದಿಲ್ಲ, ಸದಾ ಸತ್ಯವನ್ನು ಕೊಲೆಗೈದು ರಾಜಕೀಯ ದ್ವೇಷದ ಪೂರ್ವಗ್ರಹಗಳ ವರದಿ ನೀಡಲು ಖ್ಯಾತನಲ್ಲವೇ?

ಬಿಹಾರ, ಪ.ಬಂಗಾಳ ಈಗ ತಮಿಳುನಾಡು.....

ಇಂತಹ 'ಧ್ಯೇಯ ನಿಷ್ಠ'ನ ಪಾತಕದ ವರದಿ ಆಧರಿಸಿಯೇ ತಮಿಳುನಾಡು ಸರ್ಕಾರವನ್ನು ವಜಾಗೊಳಿಸಲು ವಾಜಪೇಯಿಯವರ ಸರ್ಕಾರ ಕಾತರಿಸಿತ್ತು ಎಂಬುದು ಅತ್ಯಂತ ನಾಚಿಕೆಗೇಡಿನ, ಹೀನ ಯೋಜನೆಯಾಗಿತ್ತು. ಇವರಿಗೆ



ಭ್ರಷ್ಟಾಚಾರಕ್ಕೆ ಕಾರಣವಾದ ಚೆನ್ನೈನ ಮೇಲು ಸೇತುವೆ

ಪುಟ 10 ಕ್ಕೆ

ಬಿಜೆಪಿಯ ರಾಮರಾಜ್ಯ ಮತ್ತು ದಲಿತರ ಮೇಲೆ ಅಮಾನವೀಯ ಹಲ್ಲೆಗಳು

ಉತ್ತರ ಪ್ರದೇಶದ ಬಿಜೆಪಿಯ ಮಾದರಿ ರಾಮರಾಜ್ಯದಲ್ಲಿ ದಲಿತರ ಮೇಲೆ ನೂರಾರು ಹಲ್ಲೆಗಳು, ದಲಿತರ ಕೊಲೆಗಳು, ಅತ್ಯಾಚಾರಗಳು ಭಾರೀ ಪ್ರಮಾಣದಲ್ಲಿ ನಡೆಯುತ್ತಲಿವೆ.

ಕಳೆದ ಜೂನ್ ತಿಂಗಳೊಂದರಲ್ಲೇ ಈ ರೀತಿ ಅನೇಕ ಪ್ರಕರಣಗಳು ಬೆಳಕಿಗೆ ಬಂದಿವೆ. ಅಲೀಘಡ ಜಿಲ್ಲೆಯಲ್ಲಿ ಠಾಕೂರರು ಮೂವರು ಮಹಿಳೆಯರು, ಒಬ್ಬ ಬಾಲಕ ಹತ್ತು ವರ್ಷದ ಬಾಲಕ ಸೇರಿ ಐವರನ್ನು ಬಂದೂಕಿನಿಂದ ಸುಟ್ಟಿದ್ದಾರೆ. ಫತೇಪುರ ಜಿಲ್ಲೆಯ ದಲಿತ ಕುಟುಂಬದ ಐವರನ್ನು ಲಾಠಿಗಳಿಂದ ಥಳಿಸಿ ಕೊಲ್ಲಲಾಗಿದೆ. ಜಲೌನಾ ಜಿಲ್ಲೆಯ ಕುಸುಮಾಪುರ ಎಂಬ ಗ್ರಾಮದ ಮಹಿಳೆಯನ್ನು ಚುನಾವಣಾ ವಿವಾದಕ್ಕೆ ಸಂಬಂಧಿಸಿ ಜೀವಂತ ಸುಡಲಾಗಿದೆ. ಈ ರೀತಿಯ ಅಮಾನವೀಯ ಘಟನೆಗಳು ಉತ್ತರ ಪ್ರದೇಶದಲ್ಲಿ ದಿನನಿತ್ಯ ಎಂಬಂತೆ ನಡೆಯುತ್ತಲಿವೆ.

ದಲಿತರನ್ನು ತುಳಿಸುವ ವ್ಯವಸ್ಥಿತ ಸಂಚುಗಳು ಯು.ಪಿ.ಯಲ್ಲಿ ನಡೆದಿವೆ. ಇಡೀ ದೇಶದಲ್ಲಿ ಮಹಿಳೆಯರ ಮೇಲೆ ಜರುಗುವ ಅತ್ಯಾಚಾರ ಪ್ರಕರಣಗಳಲ್ಲಿ ಅರ್ಧಕ್ಕಿಂತ ಹೆಚ್ಚು ಯು.ಪಿ.ಯಲ್ಲಿ ನಡೆದಿರುವುದು ದಿಗ್ಭ್ರಮೆ ಹುಟ್ಟಿಸುವ ಅಂಶವಾಗಿದೆ. ಕೊಲೆ, ಅತ್ಯಾಚಾರಗಳು, ಸಾಮಾಜಿಕ ಬಹಿಷ್ಕಾರಗಳಂತಹ ಪ್ರಕರಣಗಳು ಲೆಕ್ಕಕ್ಕೂ ಸಿಲುಕದಂತಾಗಿವೆ. ಇತ್ತೀಚಿಗೆ ಅಜಮಘಡ್ ಜಿಲ್ಲೆಯ ಸರಾಯ್ ಮೋಹನ್ ಎಂಬ ಗ್ರಾಮದ ಮಹಿಳಾ ಪ್ರಧಾನಳೊಬ್ಬಳನ್ನು ಸಾರ್ವಜನಿಕವಾಗಿ ಅವಮಾನಗೊಳಿಸಿದ, ಆಕೆಯ ಗಂಡನನ್ನು ದೈಹಿಕವಾಗಿ ಹಿಂಸಿಸಿದ ಘಟನೆ ವರದಿಯಾಗಿದೆ.



ಅಮಾನುಷ ಧಾಳಿಗಳಿಂದ ಭಯಭೀತರಾಗಿರುವ ದಲಿತ ಮಹಿಳೆಯರು

ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಗಳು ಸಮೀಪಿಸುತ್ತಿರುವ ಈ ದಿನಗಳಲ್ಲಿ ಈ ಘಟನೆಗಳು ಹೆಚ್ಚಾಗುತ್ತಿವೆ. [illegible]ಲ್ ಜಾತಿಯ ಠಾಕೂರರು ಮತ್ತಿತರರಿಗೆ ಹಲ್ಲೆಗಳನ್ನು ನಡೆಸಲು ರಾಜನಾಥ ಸಿಂಗ ಸರಕಾರ ಪೂರ್ಣ ಲೈಸೆನ್ಸ್ ನೀಡಿದಂತೆ ಕಾಣುತ್ತದೆ.

ದಲಿತರು ಮತ್ತು ಗ್ರಾಮೀಣ ಬಡವರ ಮೇಲೆ ನಡೆಸುತ್ತಿರುವ ದಬ್ಬಾಳಿಕೆ ಪ್ರಕರಣಗಳ ಬಗ್ಗೆ ಕ್ರಮ ಕೈಗೊಳ್ಳಲು ರಾಜ್ಯ ಆಡಳಿತ ನಿರಾಕರಿಸುತ್ತಿದೆ. ಹಾಡು ಹಗಲು ಘಟನೆಗಳು ನಡೆಯುತ್ತಿದ್ದರೂ ಪೋಲೀಸ್ ಇಲಾಖೆ ಪ್ರಕರಣಗಳನ್ನು ದಾಖಲೆ ಮಾಡಿಕೊಳ್ಳುತ್ತಿಲ್ಲ. ರಾಜ್ಯದ ಪ.ಜಾತಿ/ಪ.ಪಂಗಡ ಆಯೋಗ ಕಳೆದ 1999-2000 ವರ್ಷವೊಂದರಲ್ಲೇ 16,219 ದೂರುಗಳನ್ನು ಸ್ವೀಕರಿಸಿದೆ..

ಉತ್ತರ ಪ್ರದೇಶದಲ್ಲಿ ನಡೆಯುತ್ತಿರುವ ಈ ಹೀನ ಕೃತ್ಯಗಳ ಬಗ್ಗೆ ಕೇಂದ್ರದ ವಾಜಪೇಯಿ ಸರಕಾರ ತಲೆಕೆಡಿಸಿಕೊಳ್ಳುತ್ತಿಲ್ಲ. ಈ ಘಟನೆಗಳಿಗೆ ಕಾರಣರಾಗಿರುವ ಮೇಲ್ವರ್ಗದ ಜಾತಿಗಳ ಜನರ ಮಧ್ಯೆ ಬಿಜೆಪಿ ತನ್ನ ಪ್ರಭಾವ ದಕ್ಕಿಸಿಕೊಳ್ಳುವ ಯತ್ನದಲ್ಲಿದ್ದಂತೆ ಕಾಣುತ್ತದೆ. ಈ ರೀತಿಯ ಘಟನೆಗಳು ಬೇರೆ ರಾಜ್ಯಗಳಲ್ಲಿ ನಡೆದಿದ್ದರೆ ಗೃಹಸಚಿವ ಅಡ್ವಾಣಿ ಕೇಂದ್ರ ಸರಕಾರದ ತಂಡವನ್ನೇ ಕಳಸಿ ವರದಿ ನೀಡಲು ಆದೇಶ ಮಾಡುತ್ತಿದ್ದರು. ತನ್ನದೇ ಪಕ್ಷದ ಸರಕಾರ ಇರುವ ಯು.ಪಿ.ಯಲ್ಲಿ ನಡೆಯುತ್ತಿರುವ ಅಮಾನವೀಯ ಘಟನೆಗಳಿಗೆ ಸಂಬಂಧಿಸಿ ಅವರು ಕಣ್ಣು, ಕಿವಿ ಮುಚ್ಚಿದ್ದಾರೆ.


ಕೇಂದ್ರದ ಗೃಹ ಸಚಿವಾಲಯ ಈ ರೀತಿ ತಣ್ಣಗೆ ಕುಳಿತಿರುವುದು ಅಕ್ಷಮ್ಯ ಅಪರಾಧವಾಗಿದೆ. ರಾಷ್ಟ್ರೀಯ ಎಸ್.ಟಿ/ಎಸ್‌ಟಿ ಆಯೋಗವು ಒಂದು



ತಂಡವನ್ನು [illegible] ಪರಿಸ್ಥಿತಿಯ ಅಧ್ಯಯನಕ್ಕೆ ಅಲ್ಲಿಗೆ ಕಳುಹಿ[illegible]. ಉತ್ತರ ಪ್ರದೇಶದ ಎಲ್ಲಾ ಪ್ರಜಾಪ್ರಭು[illegible] ಮತ್ತು [illegible]ತ್ಯಾತೀತ ಶಕ್ತಿಗಳು ದಲಿತರ [illegible] ನಡೆಸುತ್ತಿರುವ ಈ ನಾಚಿಕೆಗೇಡಿ[illegible]ಗಳ ವಿರುದ್ಧ ಧ್ವನಿ ಎತ್ತಿ ಅಪರಾಧಿಗ[illegible] ಕಾನೂನು ಕ್ರಮ ಜರುಗುವಂ[illegible]ಬೇಕು.

ಶೇರು ಬಜಾರಿನಲ್ಲಿ ಉಳಿಕೆದಾರರ ಹಣ ಗುಳುಂ

ಜಾಗತೀಕರಣದ ಭರಾಟೆಯಲ್ಲಿ, ನಮ್ಮ ದೇಶದ ಆರ್ಥಿಕ ಕ್ಷೇತ್ರಕ್ಕೆ ಒಂದಾದ ಮೇಲೊಂದರಂತೆ ಬಲವಾದ ಹೊಡೆತಗಳೇ ಬೀಳುತ್ತಿವೆ. ಪ್ರತಿ ಹೊಡೆತ ಬಿದ್ದಾಗಲೂ, ಒಂದಲ್ಲ ಒಂದು ವಲಯ ತೀವ್ರವಾದ ಸಂಕಷ್ಟಕ್ಕೀಡಾಗುತ್ತಿರುವ ಪರಿಸ್ಥಿತಿ ದಿನನಿತ್ಯ ಎಂಬಂತೆ ಎದುರಾಗುತ್ತಿದೆ. ಆರ್ಥಿಕ ಬೆಳವಣಿಗೆಗಿಂತಲೂ ಹಗರಣಗಳ ಬೆಳವಣಿಗೆಯೇ ಕಂಡುಬರುತ್ತಿದೆ. ಹಗರಣಗಳ ಸರಮಾಲೆಗೆ ಮತ್ತೊಂದು ಸೇರ್ಪಡೆ, ಇತ್ತೀಚಿನ ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ ಘೋಷಿಸಿದ ಯುಎಸ್-64ರ ವಹಿವಾಟು ಸ್ಥಗಿತದ ನಿರ್ಧಾರ. ವಿತ್ತೀಯ ಮಾರುಕಟ್ಟೆಯನ್ನು ತಲ್ಲಣಗೊಳಿಸುವ ಈ



ಪಿ.ಎಸ್.ಸುಬ್ರಹ್ಮಣ್ಯಂ

ಹಗರಣದ ದುಷ್ಪರಿಣಾಮಗಳನ್ನು ಸೀಮಿತಗೊಳಿಸುವ ಪ್ರಯತ್ನಗಳು ನಡೆದಿವೆ ಎಂದು ವರದಿಗಳು ತಿಳಿಸುತ್ತವೆ. ಈ ಮಧ್ಯೆ ಯೂಟಿಐನ ಅಧ್ಯಕ್ಷ ಪಿ.ಎಸ್.ಸುಬ್ರಹ್ಮಣ್ಯಂ ಅವರಿಂದ ಬಲವಂತ ರಾಜೀನಾಮೆ ಪಡೆಯಲಾಗಿದೆ. ಇಷ್ಟಕ್ಕೂ ಈ ಹಗರಣದ ಹಿನ್ನೆಲೆ ಏನು ಮತ್ತು ಯಾಕಾಗಿ ಈ ತಲ್ಲಣ ಎಂಬ ಬಗ್ಗೆ ಸ್ವಲ್ಪ ವಿವರಣೆ ಅಗತ್ಯ.

ಯೂನಿಟ್ ಟ್ರಸ್ಟ್ ಆಫ್ ಇಂಡಿಯಾ ಸುಮಾರು ಅರ್ಧ ಶತಮಾನಗಳಷ್ಟು ಹಳೆಯದಾದ ಒಂದು ಸಾರ್ವಜನಿಕ ವಲಯದ ವಿತ್ತೀಯ ಸಂಸ್ಥೆ. ಶೇರು ಮಾರುಕಟ್ಟೆಯಲ್ಲಿ ನೇರವಾಗಿ ವ್ಯವಹರಿಸುವ ಚಾಣಾಕ್ಷತನ ಮತ್ತು ಧೈರ್ಯ ಇಲ್ಲದ ಮಧ್ಯಮವರ್ಗದ ಜನಕ್ಕೆ, ಉಳಿತಾಯ ಯೋಜನೆಗಳ ಮೂಲಕ ಹಣ ಹೂಡಲು ಅವಕಾಶ ಮಾಡಿಕೊಡುವುದು ಇದರ ಮುಖ್ಯ ಕಾರ್ಯ.

ಸಾರ್ವಜನಿಕರು'ಯೂನಿಟ್'ಗಳಲ್ಲಿ ತೊಡಗಿಸಿದ ಹಣವನ್ನು ಆಯ್ದ ಕೆಲವು ಪ್ರತಿಷ್ಠಿತ ಮತ್ತು ಲಾಭದಾಯಕ ಷೇರುಗಳಲ್ಲಿ ಹೂಡಿ, ಅದರಿಂದ ಬಂದ ಆದಾಯವನ್ನು ಹೂಡಿಕೆದಾರರಿಗೆ ಹಂಚುತ್ತದೆ. ಆಯ್ದ ಷೇರುಗಳಲ್ಲಿ ಮಾತ್ರ ಹಣ ಹೂಡುವುದರಿಂದಾಗಿ, ಷೇರು ಮಾರುಕಟ್ಟೆಯ ವಿಷವರ್ತುಲಗಳ ಸೆಳೆತವನ್ನು ಮೀರಿ ನಿಲ್ಲುವ ಮತ್ತು ನಿರಂತರ ಲಾಭಗಳಿಸುತ್ತಲೇ ಇರುವ ಹೂಡಿಕೆಯಾಗಿ 'ಯೂನಿಟ್' ಬೆಳೆದುಕೊಂಡು ಬಂದಿದೆ. ಸಾರ್ವಜನಿಕರು ಮಾತ್ರವಲ್ಲದೆ, ಬ್ಯಾಂಕುಗಳು, ಹಣಕಾಸು ಸಂಸ್ಥೆಗಳು, ಭವಿಷ್ಯನಿಧಿ ದತ್ತಿಗಳು, ನಿವೃತ್ತಿವೇತನ ನಿಧಿ ದತ್ತಿಗಳಲ್ಲದೆ ಖಾಸಗೀ ಸಂಸ್ಥೆಗಳೂ ಕೂಡಾ ಇದರಲ್ಲಿ ಹೇರಳವಾಗಿ ಹಣ ಹೂಡುತ್ತವೆ. 'ಯೂನಿಟ್'ನ ಪ್ರತಿಷ್ಠೆ ಎಷ್ಟಿದೆಯೆಂದರೆ, ಅದರ ಹಣವನ್ನು ತಮ್ಮ ಷೇರುಗಳಲ್ಲಿ ತೊಡಗಿಸುವಂತೆ ಮಾಡಲು ಉದ್ಯಮಗಳು ದೊಡ್ಡ ಪ್ರಯತ್ನವನ್ನೇ ಮಾಡುತ್ತವೆ.

ಯೂನಿಟ್‌ಗಳಲ್ಲಿ ತೊಡಗಿಸಿದ ಹಣ ದಿನೇ ದಿನೇ ವೃದ್ಧಿಯಾಗಿ, ಹೂಡಿಕೆದಾರನಿಗೆ ಬಹಳಷ್ಟು ಲಾಭವನ್ನು ತಂದುಕೊಡುತ್ತಿತ್ತು. ವರ್ಷಕ್ಕೊಮ್ಮೆ ನಿಗದಿತ ಕೆಲವೊಂದು ದಿನಗಳಲ್ಲಿ ಯೂನಿಟ್‌ಗಳನ್ನು ಹೂಡಿಕೆದಾರನಿಂದ ಮರುಖರೀದಿ ಮಾಡಲು ಅವಕಾಶವಿದೆ. ಅಗತ್ಯ ಬಿದ್ದಾಗ ಹೂಡಿಕೆದಾರ ತನ್ನಲ್ಲಿರುವ ಯೂನಿಟ್‌ಗಳನ್ನು ನಗದಾಗಿ ಪರಿವರ್ತಿಸಿಕೊಳ್ಳಲು ಇದು ಸಹಾಯಕವಾಗುತ್ತದೆ.

ಎಲ್ಲವನ್ನೂ ಆವರಿಸುತ್ತಿರುವ ಜಾಗತೀಕರಣದ ಪ್ರಭಾವ ಯೂಟಿಐ ಮೇಲೂ ಬೀಳಲು ತಡವಾಗಲಿಲ್ಲ. ಬಲೂನಿನಂತೆ ಉಬ್ಬಿದ ಷೇರು ಮಾರುಕಟ್ಟೆಯ ಆಕರ್ಷಣೆಯಿಂದ ತಪ್ಪಿಸಿಕೊಳ್ಳಲು, ಯೂಟಿಐ ನಂತ ಅತ್ಯಂತ ಅನುಭವೀ ಸಂಸ್ಥೆಗೆ ಸಾಧ್ಯವಾಗಲಿಲ್ಲ. ಆಯ್ದ ಷೇರುಗಳಲ್ಲಿ ಮಾತ್ರ ಹಣ ಹೂಡುವ ಪರಂಪರೆಯನ್ನು ಕೈ ಬಿಟ್ಟು ಹೊಸ ಹೊಸ ಷೇರುಗಳಲ್ಲಿ ಹಣ ತೊಡಗಿಸಲಾಯಿತು. ತಂತ್ರಜ್ಞಾನ ಕ್ಷೇತ್ರದ ಷೇರುಗಳ ಬೆಲೆ ಹಿಮಾಲಯದೆತ್ತರಕ್ಕೆ ಏರಿ ವಿಜೃಂಭಿಸುತ್ತಿದ್ದ ಕಾಲಘಟ್ಟದಲ್ಲಿ, ಅಂತಹ ಷೇರುಗಳಲ್ಲೂ ಹಣ ಹೂಡಲಾಯಿತು. ಆದರೆ ದೂರದ ಅಮೇರಿಕೆಯಲ್ಲಿ ಷೇರು ಮಾರುಕಟ್ಟೆಯ ಕುಸಿತ ಭಾರತದ ಷೇರು ಪೇಟೆಗೆ ದೊಡ್ಡ ಆಘಾತವನ್ನೇ ನೀಡಿತು. ಲಾಭವೊ ಲಾಭ ಎಂದು ಬೀಗುತ್ತಿದ್ದ ಷೇರು ಮಾರುಕಟ್ಟೆ ಭಾರಿ ಹಿನ್ನಡೆ ಮತ್ತು ತೀವ್ರ ಕುಸಿತದ ಆತಂಕಕಾರೀ ಪರಿಸ್ಥಿತಿಗೆ ಒಳಗಾಯಿತು.

ಭರಣಿ

ಇದರಿಂದಾಗಿ, ಯೂಟಿಐ ಕೂಡಾ ತನ್ನ ಹೂಡಿಕೆಗಳ ಮೌಲ್ಯದಲ್ಲಿ ತೀವ್ರ ಕುಸಿತವನ್ನು ಅನುಭವಿಸಬೇಕಾಯಿತು. ಹಿಂದೊಮ್ಮೆ ಅಂದರೆ 1999ರಲ್ಲಿ ಇಂತಹುದೇ ಪರಿಸ್ಥಿತಿ ಎದುರಾಗಿದ್ದಾಗ,



ಯಶವಂತ್ ಸಿನ್ಹಾ



ಅರುಣ್ ಶೌರಿ

ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ಕುಸಿತವನ್ನು ತಡೆಗಟ್ಟಲು ಕೆಲವು ಕ್ರಮಗಳನ್ನು ಕೈಗೊಂಡಿದ್ದರಿಂದ, ಆಗಬಹುದಾಗಿದ್ದ ಅನಾಹುತ ಸ್ವಲ್ಪದರಲ್ಲೇ ತಪ್ಪಿತ್ತು. ಆ ನಂತರ, ಯೂಟಿಐ ಪುನಃ ಬೆಳವಣಿಗೆಯ ಹಾದಿಯನ್ನು ಕ್ರಮಿಸುತ್ತಿದೆ ಎಂದು ಭಾವಿಸಲಾಗಿತ್ತು.

ಪ್ರಸಕ್ತ ಹಗರಣಕ್ಕೆ ಮುಖ್ಯ ಕಾರಣ ಷೇರು ಮಾರುಕಟ್ಟೆಯ ತೀವ್ರ ಕುಸಿತದ ಹಿನ್ನೆಲೆಯಲ್ಲಿ ಯೂಟಿಐ ಕೂಡಾ ಮತ್ತೊಮ್ಮೆ ಗಂಡಾಂತರಕಾರಿ ಪರಿಸ್ಥಿತಿ ಎದುರಿಸಬೇಕಾಗಬಹುದು ಮತ್ತು ಅಂತಹುದೇನಾದರೂ ಸಂಭವಿಸಿದಲ್ಲಿ, ತಮ್ಮ ಹೂಡಿಕೆಗಳಿಗೆ ಸಂಚಕಾರ ತಪ್ಪಿದ್ದಲ್ಲ ಎಂದು ಭಾವಿಸಿ, ಯೂನಿಟ್‌ಗಳಲ್ಲಿ ಭಾರೀ ಪ್ರಮಾಣದ ಹಣ ತೊಡಗಿಸಿದ್ದ ವಿತ್ತೀಯ ಮತ್ತು ಔದ್ಯೋಗಿಕ ಸಂಸ್ಥೆಗಳು, ಆತುರಾತುರವಾಗಿ ಕಳೆದ 3-4 ತಿಂಗಳುಗಳಲ್ಲಿ ಯೂನಿಟ್‌ಗಳನ್ನು ನಗದೀಕರಿಸುವ ಪ್ರಕ್ರಿಯೆಯಲ್ಲಿ ತೊಡಗಿದ್ದು, ವಿಡಿಯೋಕಾನ್‌ನಂತಹ ಖಾಸಗೀ ಉದ್ಯಮಗಳು ಕೂಡಾ ಇದರಲ್ಲಿ ಸೇರಿವೆ.

ಒಂದೆಡೆ ತನ್ನ ಹೂಡಿಕೆಗಳ ಮೌಲ್ಯದಲ್ಲಿ ತೀವ್ರ ಕುಸಿತ ಮತ್ತು ಇನ್ನೊಂದೆಡೆ ಭಾರೀ ಪ್ರಮಾಣದಲ್ಲಿ ಯೂನಿಟ್‌ಗಳನ್ನು 'ಮರುಖರೀದಿ' ಮಾಡುವ ಒತ್ತಡ- ಇವೆರಡರಿಂದಾಗಿ ಯೂಟಿಐ ಕಂಗಾಲಾಯಿತು. ಹೂಡಿಕೆ ವಾಪಸ್ಸು ಕೊಡಲು ಹಣದ ಮುಗ್ಗಟ್ಟು ಅಡ್ಡಿಯಾಗಬಹುದಾದ ಆತಂಕ ಎದುರಾಯಿತು.

ಇದರ ಪರಿಣಾಮವೇ ಯೂನಿಟ್ 64ರ ವಹಿವಾಟಿನ ಸ್ಥಗಿತದ ನಿರ್ಧಾರ. ಇದರಿಂದಾಗಿ ಅತೀವ ಸಂಕಷ್ಟಕ್ಕೊಳಗಾದವರು ಸುಮಾರು ಎರಡು ಕೋಟಿಯಷ್ಟು ಸಣ್ಣ ಹೂಡಿಕೆದಾರರು. ಜೀವಮಾನವಿಡಿ ಗಳಿಸಿದ್ದರಲ್ಲಿ ಉಳಿಸಿದ್ದನ್ನು ಭವಿಷ್ಯದ ದಿನಗಳಿಗೆ ಬೇಕಾಗುತ್ತದೆ ಎಂಬ ಮುಂದಾಲೋಚನೆಯ ಪಿಂಚಣಿದಾರರು; ಮಗಳ ಮದುವೆಗೋ ಮಗನ ವಿದ್ಯಾಭ್ಯಾಸಕ್ಕೋ ಅನುಕೂಲವಾಗಲಿ ಎಂಬ ಆಸೆಯಿಂದ ಹೂಡಿಕೆ ಮಾಡಿದ್ದ ಸಾಮಾನ್ಯ ಜನ; ಸುಂದರ ಕನಸುಗಳನ್ನು ಹೆಣೆಯುತ್ತಾ ನಾಳಿನ ದಿನಗಳನ್ನು ಸಾಕಾರಗೊಳಿಸಲು ಕಾತರರಾಗಿರುವ ಮಧ್ಯಮವರ್ಗದ ಜನ- ಇಂತಹವರೆಲ್ಲಾ ಯೂನಿಟ್‌ಗಳಲ್ಲಿ ಹಣ ತೊಡಗಿಸಿದವರು.

ತಮ್ಮಲ್ಲಿದ್ದ ಯೂನಿಟ್‌ಗಳನ್ನು ನಗದಾಗಿ ಪರಿವರ್ತಿಸಿಕೊಳ್ಳಲು ಇದ್ದ ಅವಕಾಶದಿಂದ ಹಠಾತ್ತಾಗಿ ವಂಚಿತರಾಗಿದ್ದು ಮತ್ತು ಅದರೊಂದಿಗೇ, ಮುಂದಿನ ದಿನಗಳಲ್ಲಿ ತಾವೂ ಹೂಡಿದ್ದ ಹಣ ಎಲ್ಲಿ ಕರಗಿ ಹೋಗುವುದೋ ಎಂಬ ಅತೀವ ಆತಂಕದಿಂದಾಗಿ ಈ ವರ್ಗದ ಜನ ತತ್ತರಿಸಿದ್ದಾರೆ.

ಪುಟ 7 ಕ್ಕೆ



ಇದೀಗ ಇನ್ನೊಂದು ಮಾರಾಟ ಏರ್ ಇಂಡಿಯಾ

ದೊಡ್ಡ ವ್ಯಾಪಾರಸ್ಥರಿಗೂ ಕೈಗಾರಿಕೋದ್ಯಮಿಗಳಿಗೂ ನೇತಾರನಾದ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರಕಾರ ಇನ್ನೊಂದು ಪ್ರತಿಷ್ಠಿತ ಸಂಸ್ಥೆಯನ್ನು ಮಾರಾಟಕ್ಕೆ ಇಟ್ಟಿದೆ. ದೇಶದೇಶಗಳೊಂದಿಗೆ ಸಂಚಾರ ಸಂಪರ್ಕ ಕಲ್ಪಿಸುವ ಏರ್ ಇಂಡಿಯಾ ಇನ್ನು ಕೆಲವೇ ದಿನಗಳಲ್ಲಿ ಖಾಸಗೀಯವರ ಪಾಲಾಗಲಿದೆ. ಪ್ರಜಾಪ್ರಭುತ್ವ ದೇಶದ ಅತ್ಯುನ್ನತ ಸಂಸ್ಥೆಯಾದ ಸಂಸತ್ತು ಆರಂಭಗೊಳ್ಳುವ 3 ವಾರಗಳ ಮೊದಲೇ ಮಾರಾಟವನ್ನು ಅಂತಿಮಗೊಳಿಸಲು ಹವಣಿಸುತ್ತಿದ್ದಾರೆ.

ಅಂದರೆ ಲಾಭದಾಯಕ ಉದ್ದಿಮೆಯಾದ ಬಾಲ್ಕೊವನ್ನು ಮಾರಾಟ ಮಾಡಿದ ರೀತಿಯಲ್ಲೇ ಏರ್ ಇಂಡಿಯಾ ಮಾರಾಟವಾಗುತ್ತಿದೆ. ಕೇಂದ್ರ ಸರಕಾರದ ಕ್ಯಾಬಿನೆಟ್ ಸಮಿತಿ ಈಗಾಗಲೇ ಒಪ್ಪಿಗೆ ನೀಡಿದೆ. ಜುಲೈ 6ನೇ ತಾರೀಕಿನ 'ಇಕೋನೋಮಿಕ್ ಟೈಮ್ಸ್' ಪತ್ರಿಕೆಯ ಪ್ರಕಾರ ಟಾಟಾ ಏರ್‌ಲೈನ್ಸ್ ಮತ್ತು ಸಿಂಗಾಪುರ ಏರ್ ಲೈನ್ಸ್, ಸಂಸ್ಥೆಗಳು ಜಂಟಿಯಾಗಿ ನಿರ್ಮಿಸಿಕೊಂಡ ಟಾಟಾ-ಸಿಂಗಾಪುರ್ ಏರ್ ಲೈನ್ಸ್‌ಗೆ ಏರ್ ಇಂಡಿಯಾದ ಆಸ್ತಿ ಮಾರಾಟ ಆಗಲಿದೆ. ಅಂದರೆ ದೇಶದ ಅತಿ ಸೂಕ್ಷ್ಮ ವಿದೇಶಿ ಸಂಚಾರ ವ್ಯವಸ್ಥೆಯುನ್ನು ವಿದೇಶಿಯರಿಗೆ ತೆರೆಟ್ಟಂತಾಗಿದೆ. 'ಸ್ವದೇಶಿ' ಭಂಜಕರ ವಿದೇಶಿ ವ್ಯಾಮೋಹಕ್ಕೆ ಇನ್ನೊಂದು ಉದಾಹರಣೆ!.

ಇದನ್ನು ಮಾರಾಟ ಮಾಡುವ ಒಟ್ಟು ಮೌಲ್ಯ ಇನ್ನೂ ನಿರ್ಧಾರವಾಗಿಲ್ಲ. ಮೌಲ್ಯ ನಿರ್ಧಾರ ಮಾಡಲು ವಿದೇಶಿ ಕಂಪೆನಿಯಾದ ಜೆ.ಎಂ. ಮೊರ್ಗನ್ ಸ್ಟಾನ್‌ಲಿ ಎಂಬ ಕಂಪೆನಿಗೆ



ನೀಡಲಾಗಿದೆ. ಈ ಕಂಪೆನಿಗೆ ಆಪ್ತರಾದ ನಿಮೇಶ್ ಕಂಪಾನಿ ಎನ್ನುವವರು ಟಾಟಾಗ್ರೂಪ್ ಕಂಪೆನಿಯಾದ ಇಂಡಿಯನ್ ಹೋಟೆಲ್ಸ್‌ನ ಡೈರೆಕ್ಟರ್ ಕೂಡಾ ಆಗಿದ್ದರು. ಇದರಲ್ಲಿ ಏರ್ ಇಂಡಿಯಾದ ಒಟ್ಟು ಮೌಲ್ಯವನ್ನು ನಿರ್ಧರಿಸುವ ಕಂಪೆನಿಗೂ ಅದನ್ನು ಖರೀದಿ ಮಾಡುವ ಕಂಪೆನಿಗೂ 'ನೆಕ್ಸಸ್'ಗೂ ಅನೀತಿಯುತ ಸಂಬಂಧ ಇದ್ದಂತೆ ಮೇಲುನೋಟಕ್ಕೆ ಕಾಣುತ್ತದೆ.

ಏರ್ ಇಂಡಿಯಾವನ್ನು ಖರೀದಿಸಲು ಒಟ್ಟು ಒಂದೊಂದಾಗಿ ದೇಶದ ಲಾಭದಾಯಕ ಕಂಪೆನಿಗಳನ್ನು ಮಾರಾಟ ಮಾಡುತ್ತಿರುವ ಎನ್.ಡಿ.ಎ ಸರಕಾರದ ವಿರುದ್ಧ ಜನತೆ ತೀವ್ರ ಪ್ರತಿಭಟನೆಯನ್ನು ಮಾಡಬೇಕಾಗಿದೆ. ಸದ್ಯದಲ್ಲೇ ಆರಂಭವಾಗಲಿರುವ ಸಂಸತ್ ಅಧಿವೇಶನದಲ್ಲಿ ಮುಕ್ತವಾಗಿ ಚರ್ಚಿಸಿದ ನಂತರವೇ ಮುಂದಿನ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಬೇಕಾಗಿದೆ.

ಹತ್ತು ವರ್ಷಗಳ ಸುಧಾರಣೆ-ಬಡತನದ ರಾಷ್ಟ್ರೀಕರಣ

ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ - ಕಳೆದ ಹತ್ತು ವರ್ಷಗಳಿಗಿಂತಲೂ ಹೆಚ್ಚಾಗಿ ಕೇಂದ್ರ ಮತ್ತು ಹೆಚ್ಚಿನ ರಾಜ್ಯ ಸರ್ಕಾರಗಳು ಅನುಸರಿಸಿಕೊಂಡು ಬಂದ ನೀತಿ. ದೇಶದಲ್ಲೆಲ್ಲಾ 'ರಾಮರಾಜ್ಯ'ದ ಸ್ಥಾಪನೆಯಾಗಿ ಎಲ್ಲಾ ಜನರು ಸುಭಿಕ್ಷೆಯಲ್ಲಿರುತ್ತಾರೆ, ಬಡತನ ಎಂಬುದು ದೂರಾಗಿ ಶ್ರೀಮಂತ-ಬಡವರ ನಡುವಿನ ಅಂತರ ಕಡಿಮೆಯಾಗುತ್ತದೆ, ಖಾಸಗೀಕರಣದಿಂದಾಗಿ ಸರಕಾರಿ ಕ್ಷೇತ್ರದಲ್ಲಿ ಉದ್ಯೋಗಿಗಳ ಸಂಖ್ಯೆ ಕಡಿಮೆಯಾದರೂ, ಖಾಸಗಿ ಕ್ಷೇತ್ರದಲ್ಲಿ ಉದ್ಯೋಗಿಗಳ ಸಂಖ್ಯೆ ಹೆಚ್ಚಿ ಬಹುಸಂಖ್ಯಾತ ಜನರಿಗೆ ಉದ್ಯೋಗ ಸಿಗುತ್ತದೆ - ಹೀಗೆ ಕನಸುಗಳ ಸರಮಾಲೆಯನ್ನೇ ಜನರ ಮುಂದಿಟ್ಟಾಗಿತ್ತು.

ಆದರೆ ಒಂದು ದಶಕದ ಸುಧಾರಣೆ ಈ ಕನಸುಗಳನ್ನು ನುಚ್ಚು ನೂರು ಮಾಡಿದೆ. ಬಡವ-ಶ್ರೀಮಂತರ ನಡುವಿನ ಅಂತರ ಕಡಿಮೆಯಾಗುವುದರ ಬದಲಾಗಿ ಇನ್ನಷ್ಟು ಹೆಚ್ಚಾಗುತ್ತಲಿದೆ. ತಾವು ಮಧ್ಯಮವರ್ಗದ ಜನ ಎಂದು ಎದೆ ತಟ್ಟಿಕೊಂಡು, ಮೇಲಕ್ಕೆ ಹೋಗಬೇಕೆಂದು ಹವಣಿಸುತ್ತಿದ್ದವರಲ್ಲಿ ಒಂದು ಚಿಕ್ಕ ವಿಭಾಗಕ್ಕಷ್ಟೆ ಅಲ್ಪಸ್ವಲ್ಪ ಲಾಭವಾಗಿದೆ. ಬಹುದೊಡ್ಡ ವಿಭಾಗಕ್ಕೆ ತನ್ನ ಜೀವನ ಮಟ್ಟ ಕಾಪಾಡಿಕೊಳ್ಳಲಾಗದೆ, ತಾನು ಬಡವ ಎನ್ನುವ ಹಣೆಪಟ್ಟಿಯನ್ನು ಹಚ್ಚಿಕೊಳ್ಳಲಾಗದೆ ಆತ್ಮಹತ್ಯೆಯ ದಾರಿ ಕಾಣುತ್ತಿದ್ದಾನೆ.

ಮಾಲೂರಿನ ರೈತ ಕೃಷ್ಣರೆಡ್ಡಿ ತಾನು ಆತ್ಮಹತ್ಯೆ ಮಾಡಿಕೊಂಡಿದ್ದು ಮಾತ್ರವಲ್ಲದೆ ತನ್ನ ಮೂರು ಮುದ್ದು ಹಸುಗೂಸುಗಳನ್ನು ಸೇರಿದಂತೆ ತನ್ನ ಪತ್ನಿಯನ್ನು ಸಾಯಿಸಿದ. ಸುಧಾರಣೆ ಪರ ಪ್ರಚಾರದ ಅಬ್ಬರದಿಂದ ತಾನು ಬೆಳೆದ ಬೆಳೆಗೆ ಫಲ ಸಿಗುವುದೆಂದು ಬಯಸಿ 2 ಲಕ್ಷಕ್ಕೂ ಮಿಗಿಲಾಗಿ ಸಾಲ ಮಾಡಿದ. 2 ಲಕ್ಷದಷ್ಟು ಸಾಲ ಪಡೆಯಬೇಕಾದರೆ - ನೀಡಬೇಕಾದರೆ ಆತ ಬಡರೈತನೇನೂ ಆಗಿರಲಿಲ್ಲ. ಮಧ್ಯಮವರ್ಗದ ರೈತನೇ ಆಗಿದ್ದ. ಆದರೆ ಅವನ ಕನಸುಗಳು ನುಚ್ಚು ನೂರಾಗಿದ್ದವು. ಮುಂದಿನ ದಾರಿ ಕಾಣದಾಯಿತು. ದಾರಿ ತೋರಿಸುವ ಪ್ರಜಾಪ್ರಭುತ್ವ ಶಕ್ತಿಗಳು ದುರ್ಬಲವಾಗಿದ್ದವು. ಆದ್ದರಿಂದ ಆತ್ಮಹತ್ಯೆಯೇ ಅವರು ಕಂಡುಕೊಂಡ ದಾರಿ.



ಹೆಚ್ಚು ಕಡಿಮೆ ಇದೇ ಕಥೆ ಬೆಂಗಳೂರಿನ ಸುರದೇನಪುರದ ರೈತನದ್ದು. ಕುಂದಾಪುರ ತಾಲೂಕಿನ ರಘುರಾಮ ಶೆಟ್ಟರದ್ದು ಅಥವಾ ಧಾರವಾಡ ರೈತರದ್ದು.

ಬಡರೈತ ಕೃಷಿ ಕೂಲಿಕಾರರ ಪರಿಸ್ಥಿತಿ ಇನ್ನಷ್ಟು ಕಂಗಾಲು. ದುಡಿಮೆ ಇಲ್ಲದೆ ವಲಸೆ ಹೋಗುತ್ತಿರುವ ವರದಿಗಳು ಬಿಜಾಪುರ, ಗುಲ್ಬರ್ಗಾ, ಬೀದರ್‌ನಿಂದ ಬರುತ್ತಿವೆ. ಆದರೆ ವಲಸೆ ಹೋಗುವುದು ಎಲ್ಲಿಗೆ? ದೇಶದಾದ್ಯಂತ ಎಲ್ಲಿ ಹೋದರೂ ಇದೇ ಪರಿಸ್ಥಿತಿ.

ರೈತರ ಪರಿಸ್ಥಿತಿ ಹೀಗಾದರೆ ಕಾರ್ಮಿಕರ ಪರಿಸ್ಥಿತಿ? ಆಳರಸರ ಕಾಲದಲ್ಲೇ ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್ ಮುಂತಾದ ಮೇಧಾವಿಗಳ ಮುಂದಾಳುತನದಲ್ಲಿ ಸಾರ್ವಜನಿಕ ಒಡೆತನದಲ್ಲಿ ವಿದ್ಯುಚ್ಛಕ್ತಿ, ಕಬ್ಬಿಣ ಮತ್ತು ಇತರೆ ಕಾರ್ಖಾನೆಗಳು ಸ್ಥಾಪನೆಗೊಂಡವು. ಸ್ವಾತಂತ್ರ್ಯ ಸಿಕ್ಕಿದ ನಂತರ, ಬೆಳವಣಿಗೆಯನ್ನು ಬಯಸಿದ ಅಂದಿನ ಕೇಂದ್ರ ಸರ್ಕಾರ ಜನತೆಯ, ಎಡಪಕ್ಷಗಳ ಒತ್ತಾಯದ ಮೇರೆಗೆ ಸಾರ್ವಜನಿಕ ಉದ್ದಿಮೆಗಳನ್ನು ಅಸ್ತಿತ್ವಕ್ಕೆ ತಂದಿತು. ಅವುಗಳ ಫಲವಾಗಿ ಹೆಸರಾಂತ ಹೆಚ್‌ಎಎಲ್, ಬಿಹೆಚ್‌ಇಎಲ್, ಬಿಇಎಲ್, ಬಿಇಎಂಎಲ್ ಮುಂತಾದ ಕಾರ್ಖಾನೆಗಳು ಹುಟ್ಟಿಕೊಂಡವು. ಸಾವಿರಾರು ಸಂಪರ್ಕ ಘಟಕಗಳು ಹುಟ್ಟಿಕೊಂಡವು. ರಾಜ್ಯ ಸರಕಾರಿ ಒಡೆತನದ ಮೈಸೂರು ಲ್ಯಾಂಪ್ಸ್, ಎನ್‌ಜಿಇಎಫ್ ಮುಂತಾದ ಕಾರ್ಖಾನೆಗಳು ಸಾವಿರಾರು ಜನರಿಗೆ ಉದ್ಯೋಗ ನೀಡಿದುದು ಮಾತ್ರವಲ್ಲ ಅತ್ಯುತ್ತಮ ವಸ್ತುಗಳನ್ನು ಜನರಿಗೆ ನೀಡಿದವು. ಆದರೆ ಇಂದು ಅವುಗಳ ಪರಿಸ್ಥಿತಿ?

ಒಂದೊಂದು ಕೈಗಾರಿಕೆಯಲ್ಲೂ ನೂರಕ್ಕೆ ಇಪ್ಪತ್ತೈದರಷ್ಟು ಉದ್ಯೋಗಿಗಳ ಸಂಖ್ಯೆ ಕಡಿಮೆಯಾಗಿದೆ. ಅಂದರೆ ಹಿಂದೆ 20,000 ಕ್ಕಿಂತಲೂ ಹೆಚ್ಚು ಉದ್ಯೋಗಿಗಳನ್ನು ಹೊಂದಿದ್ದ ಐಟಿಐ ಇಂದು 5000 ಕ್ಕಿಂತಲೂ ಕಡಿಮೆ ಉದ್ಯೋಗಿಗಳನ್ನು ಹೊಂದಿದೆ. ಮೈಸೂರು ಲ್ಯಾಂಪ್ಸ್, ಎನ್‌ಜಿಇಎಫ್, ಕೋಲಾರದ ಚಿನ್ನದ ಗಣಿ ಮುಂತಾದ ಕೈಗಾರಿಕೆಗಳು ಮುಚ್ಚುವ ಹಂತದಲ್ಲಿವೆ. ಕಾರ್ಮಿಕ ಸಂಘಟನೆಗಳ ತೀವ್ರ ಪ್ರತಿರೋಧದ ನಂತರ ಮುಚ್ಚುವ ವೇಗವನ್ನು ಕಡಿಮೆ ಮಾಡಲಾಗಿದೆ.

ಹಾಗಾದರೆ ಸಾರ್ವಜನಿಕ ಉದ್ದಿಮೆಗಳು ನಡೆಸುತ್ತಿದ್ದ ಅಷ್ಟೊಂದು ಕೆಲಸವನ್ನು ಈಗ ಯಾರು ಮಾಡುತ್ತಿದ್ದಾರೆ? ಖಾಸಗಿ ಕ್ಷೇತ್ರದಲ್ಲಿ ಉದ್ಯೋಗಿಗಳ ಸಂಖ್ಯೆ ಜಾಸ್ತಿಯಾಗಿರಬೇಕಲ್ಲ? ಇಲ್ಲ, ಖಾಸಗಿ ಕ್ಷೇತ್ರದಲ್ಲಿ ಉದ್ಯೋಗಿಗಳ ಸಂಖ್ಯೆ ಜಾಸ್ತಿ ಆಗಿಲ್ಲ. ಬದಲಾಗಿ, ವಿದೇಶದಿಂದ, ವಿದೇಶಿ ಕಂಪನಿಗಳಿಂದ ಕಡಿಮೆ ದರದಲ್ಲಿ ವಸ್ತುಗಳು ಬರಲಾರಂಭಿಸಿವೆ. ಆ ಮೂಲಕ ಇಲ್ಲಿನ ಕೈಗಾರಿಕೆಗಳು ನಾಶವಾಗಿವೆ. ಕಾರ್ಮಿಕರು ಕೆಲಸದಿಂದ ವಂಚಿತರಾಗಿದ್ದಾರೆ.

ಆದ್ದರಿಂದಲೇ ಶೇ 6.1 ರಷ್ಟು ಆರ್ಥಿಕ ಬೆಳವಣಿಗೆ ಎಂದು ಬಜೆಟ್‌ನಲ್ಲಿ ನಿರೀಕ್ಷಿಸಲಾಗಿದ್ದರೂ, ಕೇಂದ್ರ ಅಂಕಿಅಂಶ ಸಂಸ್ಥೆ(ಸಿಎಸ್‌ಜಿ) ಪ್ರಕಾರವೇ 2000-2001 ರಲ್ಲಿ ಆರ್ಥಿಕ ಬೆಳವಣಿಗೆ ಶೇ 5.2 ಮಾತ್ರ.

ಜನರ ಕೈಯಲ್ಲಿ ಹಣವಿದ್ದರೆ ಮಾತ್ರ ಖರೀದಿ ಮಾಡಬಹುದು. ಇವತ್ತು ಅಗ್ಗದ ಬೆಲೆಗೆ ವಿವಿಧ ವಸ್ತುಗಳು ಸಿಗುತ್ತವೆ ಎಂಬ ಜಾಹೀರಾತಿಗೆ ಕೊರತೆ ಇಲ್ಲ. ಆದರೆ ಹಣ ಎಲ್ಲಿ? ಜಾಹೀರಾತನ್ನು ನೋಡಿ ಕನಸಿನ ಗೋಪುರ ಕಟ್ಟಬೇಕಷ್ಟೆ.

ಆದ್ದರಿಂದಲೇ ಸುಧಾರಣೆಗಳು ಆರಂಭವಾಗುವ ಮೊದಲು ಅಂದರೆ 1980 ರ ದಶಕದಲ್ಲಿ ಶೇ 2.10 ರಷ್ಟು ಉದ್ಯೋಗ ದೊರಕುತ್ತಿದ್ದರೆ ಈಗ ಕೇವಲ ಶೇ 0.8 ಉದ್ಯೋಗ ದೊರಕುತ್ತಿದೆ. ಅಂದರೆ ಆರ್ಥಿಕ ಸುಧಾರಣೆಗಳು ಆರಂಭವಾಗುವ ಮೊದಲು ಸಾವಿರಕ್ಕೆ 21 ಜನರಿಗೆ ಉದ್ಯೋಗ ದೊರಕುತ್ತಿದ್ದರೆ, ಈಗ 8 ಜನಕ್ಕೆ ಮಾತ್ರ ಉದ್ಯೋಗ ದೊರಕುತ್ತಿದೆ. ಸುಧಾರಣೆಗಳು ಹೆಚ್ಚಾದಂತೆಲ್ಲ ಉದ್ಯೋಗದ ಅವಕಾಶ ಇನ್ನಷ್ಟು ಕಡಿಮೆಯಾಗುತ್ತಿದೆ.

ಕೇಂದ್ರ ಯೋಜನಾ ಆಯೋಗದ 9ನೇ ಪಂಚವಾರ್ಷಿಕ ಯೋಜನೆಯ ಮಧ್ಯಾವಧಿ ಬೆಳವಣಿಗೆಯನ್ನು ಪರಿಶೀಲಿಸಿದಾಗ ಆಶ್ಚರ್ಯಕರವಾದ ವಿಷಯ ಬೆಳಕಿಗೆ ಬಂದಿದೆ. ಕೇಂದ್ರ ಸರ್ಕಾರದ ಮಂತ್ರಿಗಳು ಕೃಷಿ ಉತ್ಪಾದನೆ ಜಾಸ್ತಿ ಆಗಿರುವುದರಿಂದ ಬೆಳೆಗಳ ಬೆಲೆ ಕಡಿಮೆ ಆಗುತ್ತಿದೆ ಎಂದು ಸುಳ್ಳು ಹೇಳುತ್ತಿದ್ದಾರೆ. ನಿಜವೇನೆಂದರೆ, ಪ್ರತಿಯೊಬ್ಬ ವ್ಯಕ್ತಿಗೆ ದೊರಕುತ್ತಿದ್ದ ಬೇಳೆ ಕಾಳುಗಳ ಪ್ರಮಾಣದಲ್ಲಿ ಶೇ 0.28 ಕಡಿಮೆ ಆಗಿದೆ. ಇದು ಕೇಂದ್ರ ಸರಕಾರವೇ ನೇಮಿಸಿದ ಯೋಜನಾ ಆಯೋಗ ನೀಡಿದ ಅಂಕಿ ಅಂಶ.

ಇಂತಹ ಘೋರ ಧೋರಣೆಗಳ ವಿರುದ್ಧ ಒಂದಾಗಿ ಹೋರಾಡದೆ ಬೇರೆ ದಾರಿಯೇ ಇಲ್ಲ. ರೈತ-ಕಾರ್ಮಿಕರಲ್ಲದೆ ಇತರೆ ಜನವಿಭಾಗವೂ ಈ ಹೋರಾಟಕ್ಕೆ ಕೈ ಜೋಡಿಸಬೇಕಾಗಿದೆ. ಸಾಮೂಹಿಕ ಹೋರಾಟವೊಂದೇ ಈ ಸರಕಾರವು ಸಾಗುತ್ತಿರುವ ದಿಕ್ಕನ್ನು ಬದಲಾಯಿಸಬಲ್ಲದು.

- ಬಾಲಕೃಷ್ಣ ಶೆಟ್ಟಿ

........ಹಗರಣಗಳಿಗೆ ಬರವಿಲ್ಲ

ಪುಟ 6 ರಿಂದ

ತಮ್ಮ ಪ್ರಾಮಾಣಿಕ ಮತ್ತು ಶ್ರಮದ ದುಡಿಮೆಯಲ್ಲಿ ಉಳಿತಾಯ ಮಾಡಿದ್ದನ್ನು ಕಷ್ಟಕಾಲಕ್ಕೆ ನೆರವಾದೀತೆಂಬ ಆಶಯದಿಂದ ಯೂನಿಟ್‌ಗಳಲ್ಲಿ ಹೂಡಿದ್ದ ಈ ಜನ ಇಂದು ತಮ್ಮ ಕನಸಿನ ಗೋಪುರಗಳು ಉರುಳುತ್ತಿರುವುದನ್ನು ಕಂಡು ವಿಹ್ವಲರಾಗಿದ್ದಾರೆ.

ವಾಸ್ತವವಾಗಿ ಯೂಟಿಐನ ವ್ಯವಹಾರಗಳಲ್ಲಿ, ಅದರಲ್ಲೂ ಮುಖ್ಯವಾಗಿ, ಅದು ತಾನು ಸಾರ್ವಜನಿಕರಿಂದ ಸಂಗ್ರಹಿಸಿದ್ದ ಹಣವನ್ನು ಷೇರುಮಾರುಕಟ್ಟೆಯಲ್ಲಿ ತೊಡಗಿಸುವ ಪ್ರಮುಖ ವ್ಯವಹಾರದಲ್ಲಿ ಪಾರದರ್ಶಿಕತೆಯ ಕೊರತೆ ಇದ್ದುದನ್ನು ಕುಖ್ಯಾತ ಹರ್ಷದ್ ಮೆಹ್ತಾ ಷೇರು ಹಗರಣದ ತನಿಖೆ ನಡೆಸಿದ ಜಂಟೀ ಸಂಸದೀಯ ಸಮಿತಿ ಈ ಮೊದಲೇ ಎತ್ತಿ ತೋರಿಸಿತ್ತು. ಯೂಟಿಐನ ಹೂಡಿಕೆ ಮತ್ತು ವ್ಯವಹಾರಗಳ ಮೇಲೆ ನಿಗಾ ಇಡುವಂತಹ ಕ್ರಮಗಳನ್ನು ಕೂಡಲೇ ತೆಗೆದುಕೊಳ್ಳಬೇಕು ಎಂದು ಶಿಫಾರಸ್ಸು ಕೂಡಾ ಮಾಡಲಾಗಿತ್ತು. ಆದರೆ ಸರ್ಕಾರ ಅಂತಹ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ ಮಾತ್ರವಲ್ಲ ಯೂನಿಟ್ಟಿನ ಕೆಲವು ಪ್ರಮುಖ ಯೋಜನೆಗಳನ್ನು ಷೇರು ಮಾರುಕಟ್ಟೆಯನ್ನು ನಿಯಂತ್ರಿಸುವ ಅಧಿಕಾರ ಹೊಂದಿರುವ ಎಸ್.ಇ.ಬಿ.ಐ(ಸೆಬಿ)ಯ ನಿಯಮಗಳಿಗೆ ಈಡು ಮಾಡಲಿಲ್ಲ. ಪರಿಣಾಮವಾಗಿ, ಯೂಟಿಐನ ವ್ಯವಹಾರಗಳು ಯಾವುದೇ ಅಡೆತಡೆಯಿಲ್ಲದೆ ಮುಂದುವರಿಯಲು ಅವಕಾಶ ನೀಡಿದಂತಾಯಿತು.

ಈಗಿನ ಹಗರಣದಿಂದಾಗಿ ಸಣ್ಣ ಹೂಡಿಕೆದಾರರಷ್ಟೇ ಅಲ್ಲ, ಯೂನಿಟ್‌ಗಳಲ್ಲಿ ಭಾರೀ ಹೂಡಿಕೆ ಮಾಡಿದ್ದ, ಸಾರ್ವಜನಿಕ ವಲಯದ ಹಣಕಾಸು ಸಂಸ್ಥೆಗಳೂ ಸಹ ತೀವ್ರತರದ ಸಂಕಷ್ಟಕ್ಕೆ ಒಳಗಾಗಿವೆ.

ಯೂಟಿಐನ ಉನ್ನತ ಅಧಿಕಾರಿಗಳು ಖಾಸಗೀವಲಯದ ತಿಮಿಂಗಿಲಗಳ ಜತೆ ಕೈ ಜೋಡಿಸಿರುವುದು ಈ ಹಗರಣದಲ್ಲಿ ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಾಣಬರುತ್ತಿದೆ. ತಮ್ಮ ಹೂಡಿಕೆಗಳಿಂದಾಗಿ ಅಪಾರವಾದ ಲಾಭವನ್ನು ಖಾಸಗೀವಲಯ ಈಗಾಗಲೇ ಮಾಡಲು ಸಾಧ್ಯವಾಗಿರಬೇಕಾದರೆ, ಬರಲಿರುವ ಅನಾಹುತದ ಬಗ್ಗೆ ಅವರಿಗೆ ಸಾಕಷ್ಟು ಮೊದಲೇ ಮುನ್ಸೂಚನೆಗಳು ಲಭ್ಯವಾಗಿದ್ದವು ಎಂಬುದು ವೇದ್ಯ. ಎಲ್ಲ ಕಡೆಯಿಂದಲೂ, ಎಲ್ಲ ರೀತಿಯಲ್ಲೂ ಮತ್ತು ಎಲ್ಲಾ ಕಾಲದಲ್ಲೂ ಸಂಪತ್ತನ್ನು ಲೂಟಿ ಹೊಡೆಯುವ ಲಾಭಪಿಪಾಸು ಖಾಸಗೀ ವಲಯಕ್ಕೆ, ಯೂಟಿಐನ್ನು ಕೂಡಾ ತಮ್ಮ ಧೂರ್ತ ಉದ್ದೇಶಗಳಿಗೆ ಬಳಸುವುದು ಕಷ್ಟವಾಗಲಿಲ್ಲ ಎಂದರೆ, ಈ ದೇಶದ ಅರ್ಥ ವ್ಯವಸ್ಥೆ ಯಾವ ವಿನಾಶಕಾರೀ ಹಂತಕ್ಕೆ ತಲುಪಿದೆಯೆಂಬುದು ಮನದಟ್ಟಾಗುತ್ತದೆ.

ಯಾವುದೇ ವಿಳಂಬವಿಲ್ಲದೇ, ಈ ಹಗರಣವನ್ನು ತೀವ್ರವಾದ ಮತ್ತು ಸಮಗ್ರ ತನಿಖೆಗೆ ಒಳಪಡಿಸಬೇಕಾಗಿದೆ. ತಪ್ಪಿತಸ್ಥರನ್ನು ಶೀಘ್ರ ವಿಚಾರಣೆಯ ಮೂಲಕ ಕಠಿಣ ಶಿಕ್ಷೆಗೆ ಗುರಿಪಡಿಸುವುದು ಅಗತ್ಯ. ಎಲ್ಲಕ್ಕಿಂತ ಹೆಚ್ಚಾಗಿ, ಡೋಲಾಯಮಾನ ಪರಿಸ್ಥಿತಿಯಲ್ಲಿರುವ ಎರಡು ಕೋಟಿಗೂ ಹೆಚ್ಚು ಸಣ್ಣ ಹೂಡಿಕೆದಾರರ ಉಳಿತಾಯದ ಹಣ ಅವರಿಗೆ ಶೀಘ್ರ ಮರುಪಾವತಿಯಾಗುವಂತೆ ಗಟ್ಟಿ ಕ್ರಮಗಳನ್ನು ಸರ್ಕಾರ ಕೂಡಲೇ ತೆಗೆದುಕೊಳ್ಳಬೇಕಾಗಿದೆ.

ಕಥೆ

ಗೋಸುಂಬೆ

ಆ್ಯಂಟನ್ ಚೆಕಾವ್

1884 - ಚಮೇಲಾನ್ ಕಥೆ

ಅನು: ಎಸ್.ವಿ.ರಂಗಣ್ಣ

ಪೋಲೀಸ್ ಅಧಿಕಾರಿ ಓಚುಮೆಲಾವ್ ಹೊಸದಾದ ದೊಡ್ಡಂಗಿಯನ್ನು ಧರಿಸಿ ಕೈಯಲ್ಲೊಂದು ಗಂಟನ್ನು ಹಿಡಿದುಕೊಂಡು ಮಾರುಕಟ್ಟೆಯನ್ನು ದಾಟಿ ನಡೆದ. ಅವನ ಹಿಂದೆಯೇ ಕೆಂಪು ಕೂದಲಿನ ಒಬ್ಬ ಪೋಲೀಸ್ ಪ್ಯಾದೆ ಅಂಚಿನವರೆಗೂ ಗೂಸ್‌ಬೇರಿ ಹಣ್ಣು ತುಂಬಿದ್ದ ಒಂದು ಜರಡಿಯನ್ನು ಹೊತ್ತುಕೊಂಡು ಅಡಿಯಿಡುತ್ತಿದ್ದ. ಸುತ್ತಮುತ್ತಲೆಲ್ಲ ನಿಶ್ಶಬ್ದ.... ಮಾರುಕಟ್ಟೆಯಲ್ಲಿ ಒಂದು ಪಿಳ್ಳೆಯೂ ಇರಲಿಲ್ಲ..... ಸಣ್ಣ ಪುಟ್ಟ ಮಳಿಗೆಗಳ ಮತ್ತು ಪಾನದಂಗಡಿಗಳ ಬಾಗಿಲುಗಳು ಹಸಿದ ದವಡೆಗಳೋ ಎಂಬಂತೆ ದೇವರ ಪ್ರಪಂಚದ ಕಡೆ ನಿರುತ್ಸಾಹದಿಂದ ಬಾಯಿತೆರೆದುಕೊಂಡಿದ್ದವು. ಅವುಗಳ ಬಳಿ ಒಬ್ಬೊಬ್ಬ ಭಿಕ್ಷುಕರು ಕೂಡ ನಿಂತಿರಲಿಲ್ಲ.

ಇದ್ದಕ್ಕಿದ್ದ ಹಾಗೆ ಒಂದು ಮಾತಿನ ದನಿ ಓಚುಮೆಲಾವನ ಕಿವಿಗೆ ಬಡಿಯಿತು. 'ಕಚ್ಚಬೇಕು ನೀನು, ಅಲ್ಲವೇ, ಕುನ್ನಿ! ಬಿಡಬೇಡಿ ಅದನ್ನು, ಹೈದರೆ! ಈ ಕಾಲದಲ್ಲಿ ಕಚ್ಚುವುದಕ್ಕೆ ಅಪ್ಪಣೆಯಿಲ್ಲ. ಹಿಡಿದುಕೊಳ್ಳಿ ಅದನ್ನು! ಓವ್!"

ಒಂದು ನಾಯಿಯ ಕುಂಯ್‌ಗುಟ್ಟು , ಕೇಳಿಬಂತು. ಆ ಸದ್ದು ಬಂದ ದಿಕ್ಕಿಗೆ ತನ್ನ ನೋಟವನ್ನು ಬೀರಿದ ಓಚುಮೆಲಾವ್: ಅವನು ದೃಷ್ಟಿಸಿದ್ದು ಇದು: ವ್ಯಾಪಾರಿ ಪಿಚುಗಿನ್ನನ ಚೌಬೀನೆ ಅಂಗಳದಿಂದ ತನ್ನ ಮೂರು ಕಾಲುಗಳಿಂದ ಓಡುತ್ತಿದ್ದ ಒಂದು ನಾಯಿಯನ್ನು ಬೆನ್ನಟ್ಟಿಕೊಂಡು ಗಂಜಿಯಲ್ಲಿ ಅದ್ದಿ ಚಿತ್ರಿತವಾದ ಜುಬ್ಬವನ್ನೂ ಗುಂಡಿಬಿಚ್ಚಿದ ಸಣ್ಣ ಅಂಗಿಯನ್ನೂ ಧರಿಸಿದ್ದ ಒಬ್ಬ ಮನುಷ್ಯ ತನ್ನ ದೇಹವನ್ನು ಪೂರ್ತಿ ಮುಂದಕ್ಕೆ ಬಗ್ಗಿಸಿ ಕೊಂಡು ಬಂದ. ಆ ಮನುಷ್ಯ ಮುಗ್ಗರಿಸಿ ಬಿದ್ದ; ನಾಯಿಯ ಹಿಂಗಾಲುಗಳಲ್ಲಿ ಒಂದನ್ನು ಹಿಡಿದುಕೊಂಡ. ಇನ್ನೊಂದು ಕೊರಗು ನಾಯಿಯಿಂದ; ಪುನಃ "ಬಿಟ್ಟುಗೊಟ್ಟೇರಿ ಅದನ್ನ!" ಎಂಬ ಕಿರಿಚಲು. ಮಂಪರ ಕೂಡಿದ ಮುಖಗಳು ಅಂಗಡಿಗಳಿಂದ ಹೊರಚಾಚಲ್ಪಟ್ಟವು. ಒಂದು ಕ್ಷಣದಲ್ಲಿ ಭೂಮಿಯಿಂದ ಒಡೆದೆದ್ದು ಬಂದಿತೋ ಎಂದು ತೋರುತ್ತಿದ್ದ ಒಂದು ಜನಗುಂಪು ಚೌಬೀನೆ ಅಂಗಳದ ಸುತ್ತ ನೆರೆಯಿತು.

"ಸಾರ್ವಜನಿಕ ಗಲಭೆಯಂತೆ ತೋರುತ್ತದೆ, ಮಹಾಸ್ವಾಮಿ!" ಎಂದು ಹೇಳಿದ ಪ್ಯಾದೆ.

ಓಚುಮೆಲಾವ್ ತಿರುಗಿದ, ಗುಂಪಿನ ಬಳಿಗೆ ನಡೆದ. ಅಂಗಳದ ಗೇಟಿನ ಮುಂದೆ ನೇರವಾಗಿ ಮೇಲೆ ವರ್ಣಿಸಿದ ಗ[illegible] ಬಿಚ್ಚಿದ ಸಣ್ಣಂಗಿಯ ಅಸಾಮಿ ನಿಂತುಕೊಂಡು[illegible]ತನ್ನ ಬಲಗೈಯನ್ನು ಮೇಲಕ್ಕೆತ್ತಿ, ರಕ್ತಸೋರುತ್ತಿದ್ದ ಬೆರಳೊಂದನ್ನು ಗುಂಪಿಗೆ ಪ್ರಕಾಶಗೊಳಿಸುತ್ತಿದ್ದ.

"ತಕ್ಕ ಶಾಸ್ತಿ ಮಾಡುತ್ತೇನೆ ನಿನಗೆ ಪಿಶಾಚಿಯೇ!" ಎಂಬ ವಾಕ್ಯ ಅವನ ಅಮಲೇರಿದ ವದನದ ಮೇಲೆ ಬರೆದಂತಿದ್ದಿತು; ತಾನೊಂದು ವಿಜಯ ಪತಾಕೆಯಂತೆ ತೋರುತ್ತಿದ್ದಿತು ಅವನ ಬೆರಳು.. ಆ ಅಸಾಮಿ ಅಗಸಾಲೆ ಖ್ರಿಯುಕಿನ್ ಎಂದು ಓಚುಮೆಲಾವ್ ತಿಳಿದ.

ಗುಂಪಿನ ನಟ್ಟನಡುವೆ ಮುಂಗಾಲುಗಳನ್ನು ಅಗಲಿಸಿಕೊಂಡು, ಕಳೇಬರ ಪೂರ್ತ ನಡನಡುಗುತ್ತ ಕುಳಿತಿತ್ತು ಅಪರಾಧಿ - ಚೂಪಾದ ಮೂತಿಯಿಂದಲೂ ಬೆನ್ನಿನ ಮೇಲೆ ಹಳದಿ ಮಚ್ಚೆಯಿಂದಲೂ ಕೂಡಿದ ಒಂದು ಬಿಳಿಯ 'ಬೋರ್ಜಾಯ್' ನಾಯಿಮರಿ. ಅಶ್ರುಪೂರಿತವಾದ ಅದರ ಕಣ್ಣುಗಳಿಂದ ಭಯಭೀತಿಯ ಮತ್ತು ಸಂಕಟದ ನೋಟ ಹೊಳೆಯುತ್ತಿತ್ತು.

"ಏತಕ್ಕಿಷ್ಟು ಗಲಾಟೆ?" ಎಂದು ಪ್ರಶ್ನಿಸಿದ ಓಚುಮೆಲಾವ್, ಗುಂಪನ್ನು ತಳ್ಳಿಕೊಂಡು ಮಧ್ಯಕ್ಕೆ ನಡೆದು. "ಏನು ಮಾಡುತ್ತಿದ್ದೀರಿ ಇಲ್ಲಿ? ನಿನ್ನ ಬೆರಳನ್ನೇಕೆ ಮೇಲಕ್ಕೆ ಎತ್ತಿ ಹಿಡಿದಿದ್ದೀಯೆ? ಕೂಗಿದವರಾರು?"

"ಕುಂಬರಿಯಂತೆ ತೆಪ್ಪಗೆ ನಡೆದು ಹೋಗುತ್ತಿದ್ದೆ, ಮಹಾಸ್ವಾಮಿ," ಎಂದು ಹೇಳಲಾರಂಭಿಸಿದ ಖ್ರಿಯುಕಿನ್, ತನ್ನ ಮುಷ್ಟಿಯೊಳಗೆ ಕೆಮ್ಮುತ್ತ. "ಯಾವುದೋ ಮರಮುಟ್ಟಿನ ವಿಚಾರವಾಗಿ ಈ ಮಿತ್ರ ಮಿಟ್ರಿಚ್ಚಿನೊಡನೆ ನನಗೆ ಕೆಲಸವಿತ್ತು. ಹಠಾತ್ತಾಗಿ, ವಿನಾಕಾರಣ, ಆ ಪೀಡೆ ನನ್ನ ಬೆರಳನ್ನು ಕಡಿಯಿತು. ಮನ್ನಿಸಿ ನನ್ನನ್ನ, ನಾನೊಬ್ಬ ಜೀತಗಾರ.... ನನ್ನದು ಅತಿ ಸೂಕ್ಷ್ಮವಾದ ವೃತ್ತಿ. ನನಗೆ ಪರಿಹಾರ ಕೊಡುವಂತೆ ಅವರಿಗೆ ಒತ್ತಾಯ ಮಾಡಿ.... ಬಹುಶಃ ಒಂದು ವಾರ ಈ ಬೆರಳನ್ನು ಅಲುಗಾಡಿಸಲಾಗುವುದಿಲ್ಲ. ಹಿಂಸ್ರ ಜಂತುಗಳನ್ನು ನಾವು ಹೇಗೋ ಸಹಿಸಿಕೊಳ್ಳಬೇಕೆಂದು ಕಾನೂನಿನಲ್ಲಿ ನಿರೂಪಿಸಿಲ್ಲ, ಮಹಾಸ್ವಾಮಿ. ಪ್ರತಿಯೊಬ್ಬನೂ ಕಚ್ಚುವುದಕ್ಕೆ ಶುರುಮಾಡಿದರೆ, ಬದುಕು ನಿಷ್ಪ್ರಯೋಜಕವಾದೀತು..."

"ಹೂಂ..... ಸರಿ" ಗದ್ದರಿಸಿದ ಓಚುಮೆಲಾವ್, ಕೆಮ್ಮುತ್ತ, ಹುಬ್ಬುಗಳನ್ನು ಕುಣಿಸುತ್ತ, ಸರಿ, ಸರಿ..... ಯಾರ ನಾಯಿ ಇದು?. ಇಷ್ಟಕ್ಕೆ ಈ ವಿಚಾರವನ್ನು ಬಿಡುವುದಿಲ್ಲ ನಾನು. ತಮ್ಮ ನಾಯಿಗಳನ್ನು ಸಿಕ್ಕಾಪಟ್ಟೆ ಬಿಟ್ಟುಬಿಡುವುದನ್ನು ಕಲಿಸುತ್ತೇನೆ ಜನಗಳಿಗೆ! ನಿಯಮಗಳನ್ನು ಪಾಲಿಸಲು ಇಷ್ಟವಿಲ್ಲದ ಮಹನೀಯರೆದುರು ಏನನ್ನಾದರೂ ಸ್ವಲ್ಪ ಕ್ರಮ ಕೈಗೊಳ್ಳಬೇಕಾದ ಗಳಿಗೆ ಒದಗಿದೆ ಈಗ. ದೊಡ್ಡ ದಂಡವನ್ನು ತೆರಬೇಕಾಗತ್ತದೆ, ಆ ಪುಂಡ ಬಗೆ ಬಗೆಯ ನಾಯಿಗಳನ್ನೂ ದನಗಳನ್ನೂ ಸ್ವೇಚ್ಛೆಯಾಗಿ ಅಡ್ಡಾಡಲು ಬಿಡುವುದರ ಪರಿಣಾಮವನ್ನು ಅವನಿಗೆ ಕಲಿಸಿ ಕೊಡುತ್ತೇನೆ! ಇದೇನು ಅದೇನು ಎಂಬುದನ್ನು ಹಿಡಿಯುತ್ತೇನೆ ಅವನ ಕಣ್ಣಿನ ಮುಂದೆ! ಎಲ್ದಿರಿನ್" ಎಂದು ಮುಂದುವರೆದು, ಪ್ಯಾದೆಯ ಕಡೆಗೆ ತಿರುಗಿ

"ಇದಾರ ನಾಯಿಯೆಂದು ಕಂಡುಹಿಡಿ, ಒಂದು ವರದಿಯನ್ನು ಬರೆ. ನಾಯಿಯನ್ನು ಕೊಂಚವೂ ವಿಳಂಬಮಾಡದೆ ಕೊಲ್ಲಬೇಕು. ಪ್ರಾಯಶಃ ಅದು ಹುಚ್ಚುನಾಯಿ..... ಯಾರ ನಾಯಿ ಇದು ಹೇಳಿ?"

"ಅದು ಸೇನಾಧಿಪತಿ ಜೀಗಲಾವ್‌ಗೆ ಸೇರಿದ್ದೆಂದು ನನ್ನ ಅಭಿಪ್ರಾಯ" ಗುಂಪಿನಿಂದ ಒಂದು ಕಂಠ ಉಸುರಿತು.

"ಸೇನಾಧಿಪತಿ ಜೀಗಲಾವ್!? ಹೂಂ. ನನ್ನ ದೊಡ್ಡಂಗಿಯನ್ನು ಕಳಚು, ಎಲ್ದಿರಿನ್... ಪ್ಯ, ಎಷ್ಟೊಂದು ಸೆಖೆಯಾಗಿದೆ! ಮಳೆ ಬಿದ್ದೇ ಬೀಳುತ್ತದೆ" ಮತ್ತು ಬದಲಿಸತೊಡಗಿದ ಖ್ರಿಯುಕಿನ್ನನ ಕಡೆಗೆ ಅವನು ತಿರುಗಿದ: "ಒಂದು ಸಂಗತಿ ನನಗೆ ಅರ್ಥವಾಗಿಲ್ಲ - ನಿನ್ನನ್ನು ಕಚ್ಚಲು ಅದಕ್ಕೆ ಹೇಗೆ ಸಾಧ್ಯವಾಯ್ತು? ನಿನ್ನ ಬೆರಳನ್ನು ಅದು ಎಟುಕಿಸಿಕೊಂಡದ್ದು ಎಂತು? ಇಷ್ಟು ಚಿಕ್ಕ ನಾಯಿ, ನೀನಾದರೋ ಅಷ್ಟು ದಢೂತಿಯವ! ಎಲ್ಲಿಯೋ ಒಂದು ಮೊಳೆಯಿಂದ ನಿನ್ನ ಬೆರಳನ್ನು ಗೀರಿಕೊಂಡಿರಬೇಕು, ನಂತರ ಆದಕ್ಕೆ ಪ್ರತಿಫಲವನ್ನು ಪಡೆದುಕೊಳ್ಳುವ ಹಂಬಲ ನಿನ್ನ ಮೆದುಳಿಗೆ ತಟ್ಟಿರಬೇಕು. ನಿಮ್ಮಂಥ ಗೆಣೆಯರನ್ನು ನಾ ಬಲ್ಲೆ! ಪಿಶಾಚಿಗಳ ತಂಡ!"

"ಹೊತ್ತಿಸಿದ ಸಿಗರೇಟಿನಿಂದ ಅವರ ಮೂಗಿನ ತುದಿಯನ್ನು ಸುಟ್ಟುಬಿಟ್ಟ, ಕುಚೋದ್ಯಕ್ಕಾಗಿ, ಮಹಾಸ್ವಾಮಿ; ಅದೇನು ಹೆಡ್ಡನಂತಿರುತ್ತದೆಯೇ ಅದು, ಹಲ್ಲಿನಿಂದ ಚುಚ್ಚಿಯೇ ಬಿಟ್ಟಿತು! ಈ ಖ್ರಿಯುಕಿನ್ ಏನಾದರೂ ಚೇಷ್ಟೆಯಲ್ಲಿ ತೊಡಗಿಯೇ ಇರುತ್ತಾನೆ, ಮಹಾಸ್ವಾಮಿ!"

"ನಿನ್ನ ಸುಳ್ಳುಗಳಿಗೆ ಅಗತ್ಯವಿಲ್ಲ, ಮೆಳ್ಳೆಗಣ್ಣ! ನಾನು ಹಾಗೆ ಮಾಡಿದ್ದನ್ನು ನೋಡಿಲ್ಲ ನೀನು, ಸುಳ್ಳು ಹೇಳುವುದೇಕೆ? ಮಹಾಸ್ವಾಮಿಯವರು ಬುದ್ಧಿವಂತರು; ಯಾರು ಸುಳ್ಳು ಹೇಳುತ್ತಿದ್ದಾರೆ, ಯಾರು ದೈವಸಾಕ್ಷಿಯಾಗಿ ನಿಜ ಹೇಳುತ್ತಿದ್ದಾರೆ, ಎಂಬುದು ಅವರಿಗೆ ಗೊತ್ತು. ನಾನು ಸುಳ್ಳುಗಾರನಾದರೆ ಶಾಂತಿಪಾಲಕ ನ್ಯಾಯಾಧೀಶ ನನ್ನನ್ನು ವಿಚಾರಣೆ ಮಾಡಲಿ! ಕಾನೂನಿನಲ್ಲಿ ಹೇಳಿದೆ..... ಮನುಷ್ಯರೆಲ್ಲರೂ ಸಮಾನ ಈಗ. ನನ್ನೊಬ್ಬ ಸಹೋದರನೇ ಪೋಲೀಸ್ ಇಲಾಖೆಯಲ್ಲಿ ಇದ್ದಾನೆ ತಿಳಿದುಕೊಳ್ಳಿ"

"ವಾದಿಸಬೇಡ!"

"ಅಲ್ಲ, ಅದು ಸೇನಾಧಿಪತಿಯ ನಾಯಿಯಲ್ಲ" ಎಂದು ಗಂಭೀರವಾಗಿ ನಿರೂಪಿಸಿದ ಪ್ಯಾದೆ. "ಇಂಥ ನಾಯಿಯೊಂದನ್ನೂ ಸೇನಾಧಿಪತಿ ಇಟ್ಟುಕೊಂಡಿಲ್ಲ. ಅವನ ನಾಯಿಯೆಲ್ಲ ಬೇಟೆ ನಾಯಿಗಳು"

"ಅದನ್ನು ಬಲ್ಲೆಯಾ ನೀನು?"

"ಚೆನ್ನಾಗಿ ಬಲ್ಲೆ, ಮಹಾಸ್ವಾಮಿ"

"ನೀನು ಹೇಳುವುದು ಸರಿ, ಸೇನಾಧಿಪತಿಯ ನಾಯಿಗಳು ತುಂಬಾ ಬಲೆಯ, ಚಲೋ ತಳಿಯ ನಾಯಿಗಳು; ಇದಾದರೋ-ನೋಡಿ ಅದನ್ನ! ಕುರೂಪವಾಗಿ ಖಜ್ಜಿ ಹಿಡಿದ ಕಂತ್ರಿ! ಈ ತೆರದ ನಾಯಿಯನ್ನು ಯಾರಾದರೂ ಸಾಕಬಹುದೆ? ನಿನಗೇನು ಅರೆ ಹುಚ್ಚೋ? ಇಂತ ನಾಯಿಯೊಂದು ಮಾಸ್ಕೋದಲ್ಲಾಗಲೀ, ಪೀಟರ್ಸ್ ಬರ್ಗೋದಲ್ಲಾಗಲೀ ಕಂಡು ಬಂದರೆ, ಅದಕ್ಕೆ ಏನು ಪ್ರಾಪ್ತಿಯಾಗುತ್ತದೆ ಗೊತ್ತೆ? ಕಾನೂನಿನ ಪ್ರಸ್ತಾಪವನ್ನು ತೆಗೆಯುವುದಿಲ್ಲ ಯಾರೊಬ್ಬರೂ. ಒಂದೇ ನಿಮಿಷದಲ್ಲಿ ನಾಶಗೈಯುತ್ತಾರೆ. ನೀನೊಬ್ಬ ಬಲಿಬಿದ್ದ ಪ್ರಾಣಿ, ಖ್ರಿಯುಕಿನ್; ಜೋಕೆ, ಅದನ್ನು ಅಷ್ಟಕ್ಕೇ ಬಿಟ್ಟುಬಿಡಬೇಡ. ಅವನಿಗೆ ಬುದ್ಧಿ ಕಲಿಸಬೇಕು! ಆದಷ್ಟು ಬೇಗ...."

"ನಾವು ಏನು ಬೇಕಾದರೂ ಎನ್ನಬಹುದು, ಸೇನಾಧಿಪತಿಗೆ ಸೇರಿದ್ದೋ ಏನೋ ನಾಯಿ" ಪ್ಯಾದೆ ನುಡಿದ, ತನ್ನ ಅಂತರಂಗವನ್ನು ಬಹಿರಂಗಗೊಳಿಸುತ್ತ. "ಅದರ ಹೊರತೋರ್ಕೆಯನ್ನು ಭಾವಿಸಿ ಏನನ್ನೂ ನಿರ್ಧರಿಸುವಂತಿಲ್ಲ. ಅದರಂಥಹುದೇ ಆದ ಒಂದನ್ನು ಮೊನ್ನೆ ಮೊನ್ನೆ ಅವನ ಮನೆಯಂಗಳದಲ್ಲಿ ನಾ ಕಂಡೆ"

"ಹೌದು, ಸೇನಾಧಿಪತಿಯದಲ್ಲದೇ ಮತ್ತೇನು!", ಗುಂಪಿನಿಂದ ಸ್ವರ ಎದ್ದುಬಂದಿತು.

"ಹೂಂ! ನನ್ನ ದಪ್ಪಂಗಿಯನ್ನು ತೊಡಿಸು, ಎಲ್ದಿರಿನ್... ಶೀತಗಾಳಿ ಬೀಸಿದಂತೆ ತೋರುತ್ತೆ, ನನಗೆ ಚಳಿ ಚಳಿ. ಸೇನಾಧಿಪತಿಯ ಮನೆಗೆ ಅದನ್ನು ಕೊಂಡೊಯ್ಯು, ಅಲ್ಲಿನವರಲ್ಲಿ ವಿಚಾರಿಸು. ನನಗೆ ಅದು ಸಿಕ್ಕಿತೆಂದೂ ನಾನು ಅದನ್ನು ಕಳಿಸಿದೆನೆಂದೂ ಶ್ರುತಪಡಿಸು. ಹಾಗೂ ಅದನ್ನು ಹೊರಗಡೆಗೆ ಬಿಡಬಾರದೆಂದು ಹೇಳು. ಪ್ರಾಯಶಃ ಬೆಲೆಯುಳ್ಳ ನಾಯಿ ಅದು; ಅದರ ಮೂಗಿಗೆ ಹೊತ್ತಿಸಿದ ಸಿಗರೆಟನ್ನುಹಿಡಿಯಬಹುದೆಂದು ಹೋಗಿಬಿಡುತ್ತದೆ. ನಾಯಿ ಮೃದುಸ್ವಭಾವದ ಪ್ರಾಣಿ, ಏ ಮುಟ್ಠಾಳ, ಕೆಳಗಿಳಿಸು ನಿನ್ನ ಕೈಯನ್ನ! ನಿನ್ನ ಮಂಕು ಬೆರಳನ್ನು ಎಲ್ಲರಿಗೂ ತೋರಿಸುವುದನ್ನು ನಿಲ್ಲಿಸು. ತಪ್ಪು ನಿನ್ನದೇ...."

"ಸೇನಾಧಿಪತಿಯ ಮುಖ್ಯ ಅಡಿಗೆಯವರ ಇತ್ತ ಬರುತ್ತಿದ್ದಾನೆ, ಅವನನ್ನು ಕೇಳೋಣ.. ಹೋ. ಅಲ್ಲಿ ಪ್ರೋಖಾರ್! ಇಲ್ಲಿ ಬಾ, ಮಿತ್ರ! ಈ ನಾಯಿಯನ್ನು ನೋಡು... ನಿಮ್ಮದೇ ಅದು?"

"ಮುಂದೇನು! ಇಂತಹದನ್ನು ನಮ್ಮ ಜೀವನದಿವಸಗಳಲ್ಲಿ ಎಂದೂ ನಾವು ಸಾಕಲಿಲ್ಲ!"

"ಹೆಚ್ಚು ತನಿಖೆ ಮಾಡುವ ಅಗತ್ಯವಿಲ್ಲ" ಎಂದ ಓಚುಮೆಲಾವ್. "ಅದೊಂದು ಅಬ್ಬೇಪಾರಿ. ಸುಮ್ಮನೆ ಇಲ್ಲಿ ಹರಟುತ್ತ ನಿಂತಲ್ಲಿ ಉಪಯೋಗವೇನು? ಅದೊಂದು ಅಬ್ಬೇಪಾರಿಯೆಂದು ನಿಮಗೆ ಹೇಳಿದ್ದಾಯ್ತು, ಆದ್ದರಿಂದ ಅದೊಂದು ಅಬ್ಬೇಪಾರಿ. ಅದನ್ನು ಕೊಂದುಹಾಕಿ, ಈ ಪ್ರಸಂಗವನ್ನು ಮುಗಿಸಿಬಿಡಿ"

"ಅದು ನಮ್ಮದಲ್ಲ" ಮುಂದುವರೆದ ಪ್ರೋಖಾರ್ "ಅದು ಕೊಂಚಕಾಲದ ಹಿಂದೆ ಇಲ್ಲಿಗೆ ಬಂದ ಸೇನಾಧಿಪತಿಯ ಸಹೋದರನಿಗೆ ಸೇರಿದ್ದು. ನಮ್ಮ ಸೇನಾಧಿಪತಿಗೆ ಬೋರ್ಜಾಯ್‌ಗಳಲ್ಲಿ ಏನೇನೂ ಅಭಿರುಚಿಯಿಲ್ಲ. ಆತನ ಸಹೋದರನಾದರೋ, ಅವನಿಗೆ ಇಷ್ಟ....."


"ಏನು, ಸೇನಾಧಿಪತಿಯ ಸಹೋದರ ಬಂದಿದ್ದಾನೆಯೇ? ವ್ಲಾಡಿಮಿರ್ ಐವನ್ವಿಚ್?' ಒದರಿದ ಓಚುಮೆಲಾವ್, ಪರಮಾನಂದದ ನಗು ಅವನ ಮುಖವನ್ನೆಲ್ಲಾ ಆವರಿಸಿಕೊಳ್ಳುತ್ತಿರಲು "ಎಂಥ ಕೌತುಕ! ನನಗೆ ಅದು ಗೊತ್ತಾಗಲೇ ಇಲ್ಲ. ಇಲ್ಲಿ ತಂಗುವುದಕ್ಕೆ ಬಂದಿದ್ದಾನೆಯೇ?"

"ಹೌದು, ಅದಕ್ಕಾಗಿಯೇ"

"ಕೌತುಕ ಆಹಾ ! ಎಂತಹ ಸಹೋದರನನ್ನು ನೋಡಬೇಕೆಂಬ ತವಕ! ಅದು ನನಗೆ ಗೊತ್ತಾಗಲಿಲ್ಲ. ಅಂತೂ, ಇದು ಆತನ ನಾಯಿ? ಬಹಳ ಸಂತೋಷ! ತೆಗೆದುಕೊ... ದಿಟವಾಗಿ ಅಂದವಾದ ಪುಟ್ಟದಾದ ಮರಿನಾಯಿ! ಅವನ ಬೆರಳಿಗೆ ಹಲ್ಲು ತಾಕಿಸುವುದೇ? ಹ, ಹ, ಹ! ಬಾ, ಬಾ, ನಡುಗಬೇಡ! ಗ್ರ, ಗ್ರ..... ಪುಟ್ಟ ಪಟಿಂಗನಿಗೆ ಸಿಟ್ಟು ಬಂದಿದೆ. ...... ಎಂಥ ನಾಯಿಮರಿ!"

ಪ್ರೋಖಾರ್ ನಾಯಿಯನ್ನು ಕೂಗಿ ಕರೆದು ಅದರೊಡನೆ ಚೌಬೀನೆ ಅಂಗಳದಿಂದ ಆಚೆ ಹೊರಟುಹೋದ. ಗುಂಪು ಖ್ರಿಯುಕಿನ್ನನನ್ನು ಅಪಹಾಸ್ಯ ಮಾಡಿತು.

"ಮುಂದಾದರೂ ನಿನ್ನನ್ನು ಬಿಟ್ಟೇನೆ!" ಓಚುಮೆಲಾವ್ ಅವನಿಗೆ ಬೆದರಿಕೆಯನ್ನು ಕೊಟ್ಟು, ತನ್ನ ದಪ್ಪಂಗಿಯನ್ನು ಮೈಸುತ್ತ ಹೊದ್ದು ಮಾರುಕಟ್ಟೆಯ ಮೂಲಕ ಹಾದಿ ಹಿಡಿದ.



ಕತ್ತಲೆಯಿಂದ ಬೆಳಕಿಗೆ

ಇದು ಕಥೆಯಲ್ಲ... ಗ್ರಾಮ ಪ್ರವೇಶಿಸಲೂ ಹೆದರುತ್ತಿದ್ದ ಲಂಬಾಣಿ ಜನಾಂಗಕ್ಕೆ ಸೇರಿರುವ ಬಾಲಾಜಿ ಅಲ್ಲಿಯ ಜಮೀನ್ದಾರರ ಅಟ್ಟಹಾಸ, ಕುತಂತ್ರಗಳಲ್ಲಿಯೂ ಎದ್ದು ನಿಂತದ್ದು ಒಂದು ಸಾಹಸಗಾಥೆಯೇ ಸರಿ. ಚುನಾವಣೆ, ಭೂಮಿಗಾಗಿ ಹೋರಾಟ, ಜೈಲುವಾಸ ... ಈಗ ಆತ ನಗುತ್ತಾ ಹೇಳುತ್ತಾನೆ 'ಹಮ್ ಬೀ ಜಮೀನ್ದಾರ್ ಹೈ' . ಬೀದರ್ ಜಿಲ್ಲೆಯ ಜಮೀನ್ದಾರರ ಸುಪರ್ದಿನಲ್ಲಿ ಅಲ್ಲಿಯ ಸಾಮಾಜಿಕ, ಆರ್ಥಿಕ ಮಗ್ಗಲುಗಳನ್ನು ತೆರೆದಿಟ್ಟಿದ್ದಾರೆ ಖ್ಯಾತಪತ್ರಕರ್ತ

ಪಿ. ಸಾಯಿನಾಥ್

ಬೀದರ್ ಜಿಲ್ಲೆಯ ಬವಲ್‌ಗಾಂನಲ್ಲಿ 1990 ನೆ ಇಸವಿಯಲ್ಲಿ ಮೊದಲು ಕತ್ತೆಯ ಮೇಲೆ ಉಪ್ಪಿನ ಮೂಟೆ ಹಾಕಿಕೊಂಡು ಹಳ್ಳಿಗಾಡಿನಲ್ಲಿ ವ್ಯಾಪಾರ ಮಾಡುವ ಬಾಲಾಜಿ ರಾಮರಾವ್ ನಾಯಕ್ ಗ್ರಾಮಗಳಲ್ಲಿ ಉಪ್ಪಿನ ವ್ಯಾಪಾರ ಮಾಡುವಾಗ ಗ್ರಾಮಗಳಿಗೆ ಪ್ರವೇಶ ಮಾಡಲು ಭಯಪಡುತ್ತಿದ್ದರು. ಆ ಕಾಲದಲ್ಲಿ ಹಳ್ಳಿಯ ಟೀ ಅಂಗಡಿಗಳಲ್ಲಿ ಅಥವಾ ಗ್ರಾಮದ ಮನೆಗಳಲ್ಲಿ ನಮಗೆ ಲೋಟದಲ್ಲಿ ತಂದು ನೀರನ್ನು ಮೇಲಕ್ಕೆ ಎತ್ತಿ ಹಾಕುತ್ತಿದ್ದರು, ಯಾರೂ ಕೂಡ ನೀರಿನ ಗ್ಲಾಸನ್ನು ನಮ್ಮ ಕೈಗೆ ಕೊಡುತ್ತಿರಲಿಲ್ಲ. ಈ ಗ್ರಾಮದ ಜನರು ನಮ್ಮನ್ನು ಊರಿನ ಪ್ರಜೆ ಎಂದು ಅಂಗೀಕರಿಸಿಲ್ಲ. ಯಾವುದೇ ಸಹಾಯ ಬೇಕಾದರೂ ಗ್ರಾಮದ ಜಮೀನ್ದಾರರ ಮನೆ ಮುಂದೆ ಇರುವ ಗೋಡೆಗಳ ಮೇಲೆ, ಕಟ್ಟೆಯ ಮೇಲೆ ಕುಕ್ಕರುಗಾಲಿನಲ್ಲಿ ಕೂತುಕೊಳ್ಳಬೇಕಾಗಿತ್ತು. ನಾವು ಸಂಘವನ್ನು ಸೇರಿದ ನಂತರ ನಮಗೆ ಧೈರ್ಯ ಬಂದಿತು. ನಮ್ಮ ಹೋರಾಟ ನಡೆದು ನಮಗ ಧೈರ್ಯ ಬಂದಿತು.

'ಅವಿರೋಧ ಆರಿಸುತ್ತೇವೆ'

ಮೊದಲ ಬಾರಿಗೆ ಬಾಲಾಜಿ ರಾಮರಾವ್ ನಾಯಕ್ ಪಂಚಾಯತಿ ಚುನಾವಣೆಗೆ ಸ್ಪರ್ಧಿಸಿದಾಗ ಆ ಪಂಚಾಯತಿಯಲ್ಲಿನ ಜಮೀನ್ದಾರರು "ನೂಮ್ಮೆ ಚಾಲ ಮಂಚಿವಾಡಿವಿ', 'ಅನಿ ವಾರನ್ನಾರು' 'ನಿನ್ನು ಪೋಟಿ ಲೇಕುಂಡ ಎನ್ನಕಯ್ಯೆಲಾ ಚೂಸ್ತಾಂ' 'ನಾಮಿನೇಷನ್ ಚೇಸಿ, ವಿಷಯಂಲೋ ನೂವ್ವೇಮಿ ಬಾದಪಡುವದ್ದು. ನೀಕು ವ್ಯತಿರೇಕಂಗಾ ಎವ್ವರು ನಿಲಬಡಕುಂಡಾ ಚೂಸ್ತಾಮು'

"ಬಾಲಾಜಿ ನೀನು ಬಹಳ ಒಳ್ಳೆಯ ಮನುಷ್ಯ. ನಿನ್ನನ್ನು ಅವಿರೋಧವಾಗಿ ಆರಿಸುತ್ತೇವೆ. ನಾಮಿನೇಷನ್ ಹಾಕಲು ನೀನೇನು ತೊಂದರೆ ಪಡಬೇಡ. ನಿನ್ನ ವಿರುದ್ಧ ಯಾರೂ ನಿಲ್ಲದಂತೆ ನಾವು ನೋಡಿಕೊಳ್ಳುತ್ತೇವೆ". ಜಮೀನ್ದಾರರ ಮಾತನ್ನು ನಂಬಿ ಬಾಲಾಜಿ ನಾಮಿನೇಷನ್ ಸಲ್ಲಿಸಲಿಲ್ಲ. ಪಂಚಾಯತ್ ಚುನಾವಣೆಯಲ್ಲಿ ಬೇರೆ ಅಭ್ಯರ್ಥಿಯನ್ನು ಅವಿರೋಧವಾಗಿ ಆರಿಸಿದರು. ಔರಾದ್ ತಾಲ್ಲೂಕಿನಲ್ಲಿರುವ ಈ ಗ್ರಾಮದಲ್ಲಿ ವಾಸವಾಗಿರುವವರು ಆಂಧ್ರ ಪ್ರದೇಶದ ಲಂಬಾಣಿ ಜನರು. ಇವರನ್ನು ಕರ್ನಾಟಕದಲ್ಲಿ ಗಿರಿಜನರೆಂದು ಕರೆಯುತ್ತಾರೆ. ಪರಿಶಿಷ್ಟ ವರ್ಗ(ST)ಕ್ಕೆ ಸೇರುತ್ತಾರೆ. ಈ ಗಿರಿಜನರು ಅವಿದ್ಯಾವಂತರು, ಅಮಾಯಕರು ಆಗಿದ್ದರಿಂದ ಪಂಚಾಯತಿ ಸದಸ್ಯರಾಗಬೇಕಾದದ್ದು ತಪ್ಪಿಹೋಯಿತು.

ನಾಮಿನೇಷನ್: ಇದರಿಂದಾಗಿ ನಾಮಿನೇಷನ್ ಹಾಕುವ ಅವಶ್ಯಕತೆ ಏನೆಂದು ಬಾಲಾಜಿಗೆ ತಿಳಿಯಿತು. ಈ ವೇಳೆಗೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಚುನಾವಣೆ ಸಮೀಪಿಸಿತು. ಈ ಚುನಾವಣೆಗೆ ಸ್ಪರ್ಧಿಸಲು ನಾಮಿನೇಷನ್ ಹಾಕಲು ಬಾಲಾಜಿ ನಿರ್ಧರಿಯುಸಿದನು. ನಾಮಿನೇಷನ್ ಸಲ್ಲಿಸಲು 28 ಕಿಮಿ. ನಡೆದುಕೊಂಡು ಹೋದನು. ಬೆಟ್ಟಗುಡ್ಡಗಳನ್ನು, ಕಲ್ಲು ಮುಳ್ಳಿನಿಂದ ಕೂಡಿದ ದಸ್ತೆಯಲ್ಲಿ ನಡೆದು ತುಂಬಾ ಸುಸ್ತಾಯಿತು. ನಾಮಿನೇಷನ್ ಸಲ್ಲಿಸಲು ಒಂದು ನಿಮಿಷ ತಡವಾಯಿತು. ಅಲ್ಲಿದ್ದ ಚುನಾವಣಾಧಿಕಾರಿ ತುಂಬ ಒಳ್ಳೆಯ ಅಧಿಕಾರಿ. ನಾಮಿನೇಷನ್ ಸಲ್ಲಿಸಲು ತಿಳಿಸಿದರು. ಇದನ್ನು ನೋಡಿದ ಆ ಗ್ರಾಮದ ಮಹಾಜನರು ಚುನಾವಣೆ ನಾಮಪತ್ರ ಸಲ್ಲಿಕೆಯ ವೇಳೆ ಬಗ್ಗೆ ಗೊಂದಲ ಎಬ್ಬಿಸಿದರು. ಗಲಾಟೆ ಮಾಡಿದರು. ನಾಮಿನೇಷನ್ ಸಲ್ಲಿಸದಂತೆ ತಡೆದರು.

'ಆರು ಓಟಿನಿಂದ ಸೋತೆ ಸಾರ್'

ಈ ವರ್ಷ ನಡೆದ ಪಂಚಾಯತಿ ಚುನಾವಣೆಯಲ್ಲಿ ಚುನಾವಣೆಗೆ ನಿಲ್ಲುವ ಅನುಭವ ಪಡೆದು ಬಾಲಾಜಿ ಬಹಳ ಹುಷಾರಾಗಿ ಪಂಚಾಯತಿಗೆ ಸೇರಿದ ಒಂಭತ್ತು ಲಂಬಾಣಿ ತಾಂಡಗಳಿಗೆ ಭೇಟಿ ಕೊಟ್ಟು ಆ ಮತದಾರರನ್ನು ಒಂದು ಗೂಡಿಸಿದರು. ಚುನಾವಣಾ ಪ್ರಚಾರಕ್ಕೆ 11 ಜನರ ಒಂದು ಕಮಿಟಿಯನ್ನು ರಚಿಸಿದರು. ಬಾಲಾಜಿ ಎಸ್‌ಸಿ ರಿಜರ್ವ್ ಅಭ್ಯರ್ಥಿಯೂ ಆದರು. ಆದರೆ ರಿಜರ್ವೇಷನ್ ಅಭ್ಯರ್ಥಿ(ಎಸ್‌ಸಿ)ಯಾಗಿ ಬೇರೊಬ್ಬನನ್ನು ಆರಿಸಿದರು. ಇಷ್ಟೆಲ್ಲಾ ಮಾಡಿದರು ಈ ಸಾರಿಯೂ ಗೆಲ್ಲುವ ಫಲಿತಾಂಶ ಸಿಗಲಿಲ್ಲ. ಬಹಳ ಜನರು ದೂರಪ್ರದೇಶದಲ್ಲಿ ಕಬ್ಬಿನ ಕಟಾವು ಮಾಡಲು ಹೊರಟರು. ಅವರೆಲ್ಲರು ಮಹಾರಾಷ್ಟ್ರ ಪ್ರದೇಶಕ್ಕೆ ಹೋಗ್ತಾರೆ. ಚುನಾವಣೆ ದಿವಸ ಮಧ್ಯಾಹ್ನ ಮತದಾನ ಮಾಡಲು ಲಂಬಾಣಿಗಳನ್ನು ಕರೆದು ತರಲು ಒಂದು ಟ್ರಕ್ಕನ್ನು ಕಳುಹಿಸಿದರು. ನಮ್ಮ ಬಾಲಾಜಿಗೆ ಓಟುಹಾಕಲು ಓಟಿನ ಸಮಯಕ್ಕೆ ಅವರನ್ನು ಕರೆದುಕೊಂಡು ಬರುತ್ತೇವೆಂದು ಹೇಳಿದರು. ಪ್ರಥಮ ಬಾರಿ ಲಂಬಾಣಿ ಜನರು ಒಗ್ಗಟ್ಟಾಗಿ ಮತ ನೀಡಲು ಬರುತ್ತಿರುವುದನ್ನು ಗಮನಿಸಿದರು. ಆ ಜನರನ್ನು ತುಂಬಿಕೊಂಡು ಬಂದ ಟ್ರಕ್ಕನ್ನ ಒಂದು ಬಾರ್ ಹತ್ತಿರ ನಿಲ್ಲಿಸಿದರು. ಅವರಿಗೆ ಕಂಠಪೂರ್ತಿ ಕುಡಿಸಿದರು, ಬಹಳ ಜನರನ್ನು ಬಾಲಾಜಿಗೆ ಓಟು ಕೊಡದ ಹಾಗೆ ಮಾಡಿದರು. ಈ ರೀತಿ ಮಾಡಿದ್ದರಿಂದ ಇತರರೂ ಕೂಡ ಬಹಳ ಗೊಂದಲಕ್ಕೆ ಈಡಾದರು. ಕುಡಿದ ಮತ್ತಿನಲ್ಲಿ ಕೆಲವರು ಬೇರೆ ಅಭ್ಯರ್ಥಿಗೆ ಓಟನ್ನು ಕೊಟ್ಟರು. ಅಂದರೆ ಶ್ರೀಮಂತ ಜಮೀನುದಾರರು ನಿಲ್ಲಿಸಿದ ಅಭ್ಯರ್ಥಿಗೆ ಓಟನ್ನು ಕೊಟ್ಟರು ಎಂಬ ಮಾತು ಕೇಳಿಬಂತು. "ಆರು ಓಟಿನ ಕಡಿಮೆಯಿಂದ ಸೋತು ಹೋದೆ. ಕೇವಲ 6 ಓಟಿನಿಂದ ಸೋತುಹೋದೆ ಸಾರ್!' ಎನ್ನುತ್ತಾನೆ ಬಾಲಾಜಿ.

ಹೋರಾಟದ ಫಲವಾಗಿ ಸರ್ಕಾರ ಭೂಮಿಯನ್ನು ಬಡ ರೈತರಿಗೆ ಹಂಚಿತು. 110 ಕುಟುಂಬಗಳಿಗೆ ತಲಾ 3.9 ಎಕರೆ ಜಮೀನು ಮಂಜೂರು ಮಾಡಿತು. ಅನೇಕ ಕಷ್ಟಗಳನ್ನು ಅನುಭವಿಸಿ ಹೋರಾಡಿ ಬಾಲಾಜಿ, ಆತನ ಸ್ನೇಹಿತರು ವಿಜಯ ಸಾಧಿಸಿದರು. ಲಂಬಾಣಿ ಜನರು ತುಂಡು ಭೂಮಿಯನ್ನು ಪಡೆದರು.

'ಲಂಬಾಣಿ ಜನ ಅಭಿವೃದ್ಧಿಯತ್ತ'

ಈ ಸಾರಿ ಬಾಲಾಜಿ ಪೂರ್ತಿಯಾಗಿ ಚುನಾವಣೆಗೆ ನಿಲ್ಲಲು ತಮ್ಮ ಕೆಲಸವನ್ನು ಕೇಂದ್ರೀಕರಿಸಿದರು. ಈ ಪ್ರದೇಶದಲ್ಲಿ ಯಾರೂ ಕೂಡ ಲಂಬಾಣಿ ಜನರ ಅಭಿವೃದ್ಧಿಗೆ ಪ್ರಯತ್ನಿಸುತ್ತಿಲ್ಲ. ಬೆಟ್ಟಗುಡ್ಡಗಳಲ್ಲಿ ವಾಸಿಸುವ ಗಿರಿಜನರಿಗೆ ಆ ಪ್ರದೇಶದಲ್ಲಿ ಕುಡಿಯುವ ನೀರಿಲ್ಲ. ನೀರಿನ ಒಂದು ಬೋರ್‌ವೆಲ್ ಕೂಡ ಇಲ್ಲ. ಕುಡಿಯುವ ನೀರಿಗಾಗಿ ಹೋರಾಟ ಮಾಡಬೇಕಾಗಿ ಬಂತು. ಬೋರ್‌ವೆಲ್ ಹಾಕುತ್ತೇವೆ ಎಂದು ಅನೇಕ ಬಾರಿ ಗೆದ್ದವರು ವಾಗ್ದಾನ ಮಾಡಿದ್ದರು. ವಾಗ್ದಾನ ಒಂದು ಸಾರಿ ಕೂಡ ನೆರವೇರಲಿಲ್ಲ. ನೀರಿಗಾಗಿ ಉಪವಾಸ ಸತ್ಯಾಗ್ರಹ ಮಾಡಬೇಕಾಗಿ ಬಂತು. ಸತ್ಯಾಗ್ರಹ ಮಾಡಿದ ನಂತರ ಬೋರ್‌ವೆಲ್ ಹಾಕಲು ಅಧಿಕಾರಿಗಳು ಒಪ್ಪಿದರು. ಆದರೆ ಬೋರ್‌ವೆಲ್ ಹಾಕಲೇ ಇಲ್ಲ. ಬಾಲಾಜಿ 2ನೇ ಬಾರಿ ಪ್ರಯತ್ನ ಮಾಡಿದರು. ಈ ಬಾರಿ ತಾಲ್ಲೂಕು ಪಂಚಾಯತ್ ಮುಂದೆ ನೀರಿಗಾಗಿ ಉಪವಾಸ ಸತ್ಯಾಗ್ರಹ ಪ್ರಾರಂಭಿಸಿದರು. ಈ ಬಾರಿ ಅಧಿಕಾರಿಗಳು ಮೋಸ ಮಾಡಲು ಸಾಧ್ಯವಾಗಲಿಲ್ಲ. ಗಿರಿಜನರು ವಾಸಿಸುವ ಕಾಲೋನಿಗೆ ಬೋರ್ ಕೊರೆಯುವ ಲಾರಿ ಬರುವವರೆವಿಗೂ ಉಪವಾಸ ಸತ್ಯಾಗ್ರಹ ಮುಂದುವರೆದಿದ್ದರಿಂದ ಅಧಿಕಾರಿಗಳು ಕಛೇರಿಯಿಂದ ಕೆಳಗೆ ಇಳಿದು ಬಂದರು. ಬೋರ್‌ವೆಲ್ ಗ್ರಾಮಕ್ಕೆ ಬಂದಾಗ ಊರಿನ ಜನ ಬಾಲಾಜಿಯನ್ನು ಅಭಿನಂದಿಸಲು ಸಭೆ ಸೇರಿದರು. ಜನರಿಗಾಗಿ ಒಳ್ಳೆ ಕೆಲ್ಸ ಮಾಡಿದ್ದಾರೆ ಎಂದು ಜನರು ಕೊಂಡಾಡಿದರು. ಗುಡ್ಡದ ಮೇಲೆ ಬೋರವೆಲ್ ಕೊರೆಯಲು ಲಾರಿ ಹೋದರೆ ಲಾರಿ ಹಿಂದಕ್ಕೆ ಬಂದು ಬೀಳುತ್ತದೆ. ಅದು ಕೆಲ್ಸಕ್ಕೆ ಬರುವುದಿಲ್ಲ. ಆದರೆ ಅಧಿಕಾರಿಗಳು ಬೋಲ್‌ವೆಲ್‌ನ್ನು ಗುಡ್ಡದಲ್ಲಿ ಹಾಕಲು ಪ್ರಾರಂಭಿಸಿದರು. ಗ್ರಾಮದ ಯಜಮಾನರು ಈ ಕಾರ್ಯವನ್ನು ಕೊಂಡಾಡಿದರು. ಆದರೆ ಈ ಬೋರ್‌ವೆಲ್ ಕೊರೆದ ನಂತರ ಒಂದು ಹನಿ ನೀರು ಕೂಡ ಬರಲಿಲ್ಲ.

30 ವರ್ಷ ವಯಸ್ಸಿನ ಬಾಲಾಜಿ ತನ್ನ ಜೀವಿತಕಾಲದಲ್ಲಿ ಹೋರಾಟ ನಡೆಸಿ ವಿಫಲರಾದರು. ಇದರ ಕಥೆಯನ್ನು ಜನರು ಕೇಳಿ ಕೇಳಿ ನಗುತ್ತಿದ್ದರು. ಆದರೂ ಇವರು 15 ವರ್ಷಗಳಿಂದ ಲಂಬಾಣಿಯವರಿಗಾಗಿ ಅನೇಕ ಹೋರಾಟಗಳನ್ನು ನಡೆಸಿದ್ದಾರೆ. ಇದರಲ್ಲಿ ಮುಖ್ಯವಾದ ಹೋರಾಟ ಭೂಮಿಗಾಗಿ ನಡೆದದ್ದು. ಅಲ್ಲದೆ ಬೀದರ, ಗುಲ್ಬರ್ಗ ಜಿಲ್ಲೆಗಳಲ್ಲಿ ಲೆಕ್ಕವಿಲ್ಲದಷ್ಟು ಹೋರಾಟಗಳು ನಡೆದವು. ಗ್ರಾಮೀಣ ಬಡವರ ಸಾಮಾನ್ಯ ಭೂಮಿಗಾಗಿ ಹೋರಾಟ, ಈ ಪ್ರದೇಶದ ಹೋರಾಟದ ವಿಚಿತ್ರವೇನೆಂದರೆ ಈ ಹೋರಾಟಗಳು ತ್ರಿಕೋನವಾಗಿರುತ್ತದೆ. ತ್ರಿಕೋಣದಲ್ಲಿ 3ನೇ ಕೋನಯಾವುದು ಎಂದು ನಮಗೆ ಕಾಣಿಸಿಗದು. ಇಲ್ಲಿಯ ಹೋರಾಟ ಭೂಮಿ ಇಲ್ಲದ ಬಡ ರೈತರು ಮತ್ತು ಸರ್ಕಾರದ ಮಧ್ಯ ನಡೆಯುವುದಾಗಿ ತಿಳಿದು ಬಂದಿದೆ. ಗ್ರಾಮದ ಜಮೀನ್ದಾರರ ನೇರಹಸ್ತಕ್ಷೇಪ ಇದರಲ್ಲಿದೆ. ಜಮೀನ್ದಾರರು ತೆರೆಯ ಹಿಂದೆ ಇರುತ್ತಾರೆ. ಬಹಿರಂಗವಾಗಿ ಬರದೆ ಜಾಗ್ರತೆಯಾಗಿ ಇರುತ್ತಾರೆ. ಮೌನವಾಗಿದ್ದರೂ ಇವರೆ ಪ್ರಧಾನರಾಗಿರುತ್ತಾರೆ. ಸ್ವಯಂ ಸೇವಾ ಸಂಸ್ಥೆಗೆ ಸೇರಿದ ಸೋಫನ್ ಸೂರ್ಯವಂಶಿ ಎಂಬ ಡಾಕ್ಟರು ಲಂಬಾಣಿ ಜನರ ಭೂಮಿಗಾಗಿ ಹೋರಾಡಲು ಬಾಲಾಜಿ ಜೊತೆ ಸೇರಿದರು. ಹೋರಾಟ ಮುಂದುವರಿಸಿದರು. ಗ್ರಾಮೀಣ ಅಖಿಲಕಾರ್ಮಿಕ ಸಂಘ ಎಂಬ ಹೆಸರಲ್ಲಿ. ಅಂದರೆ ಈ ಸಂಘ ಒಂದು ಪ್ರಜಾಸಂಘವಾಗಿದೆ. ಇದರ ಜೊತೆ ಬೀದರ್‌ಗೆ ಸೇರಿದ ದೃಷ್ಟಿ ಎಂಬ ಸಂಸ್ಥೆ ಸೇರಿತು. ನಾವು ಸಂಘಟನೆ ಕಟ್ಟಿದ್ದರಿಂದ ನಮ್ಮ ಕಾಲಿನ ಮೇಲೆ ನಾವು ನಿಲ್ಲುವಂತಾಯಿತು.

ಬೆಳನಾಶಮಾಡಿದ ಜಮೀನ್ದಾರರು

ಲಂಬಾಣಿಗರು ವ್ಯವಸಾಯ ಮಾಡುತ್ತಿದ್ದ ಭೂಮಿ ಬಂಜರು ಭೂಮಿ. ಈ ಭಂಜರು ಭೂಮಿಯಲ್ಲಿ ದನ ಕುರಿಗಳನ್ನು ಮೇಯಿಸಲು ಜಮೀನ್ದಾರರು ತೀರ್ಮಾನಿಸಿದರು. ಬಂಜರು ಭೂಮಿ ಲಂಬಾಣಿಗರ ಸ್ವಾಧೀನದಲ್ಲಿತ್ತು. ಬೆಳೆಯನ್ನು ಬೆಳೆಯುತ್ತಿದ್ದರು. ಇವರು ಸ್ವಾಧೀನದಲ್ಲಿರುವುದರಿಂದ ಇದನ್ನು ತಪ್ಪಿಸಲು ಜಮೀನ್ದಾರರು ಹಲವಾರು ಪ್ರಯತ್ನಗಳ ಮೂಲಕ ದಾಳಿ ದಬ್ಬಾಳಿಕೆ ನಡೆಸುತ್ತಿದ್ದರು. ಇನ್ನೊಂದೆಡೆ ಲಂಬಾಣಿ ಜನರು ಭೂಮಿಯನ್ನು ಸಾಗುವಳಿ ಮಾಡುತ್ತಿರುವುದು ನಮಗೆ ಸಂತೋಷವಾಗುತ್ತಿದೆ ಎಂದು ಡಿಸಿಸಿ ಬ್ಯಾಂಕ್ ಛೇರ್‌ಮನ್‌ರವರು ಹೇಳುತ್ತಿದ್ದರು. ಬಂಜರು ಭೂಮಿಯನ್ನು ಬಡ ರೈತರಿಗೆ ಹಂಚಿರಿ! ರೈತರೆ ಒಂದಾಗಿ ಹೋರಾಟಕ್ಕೆ ಮುಂದಾಗೀ ಘೋಷಣೆಗಳೊಂದಿಗೆ ಲಂಬಾಣಿಗರು ಹೋರಾಟಕ್ಕೆ ಇಳಿದಾಗ ಸಾಗುವಳಿ ಮಾಡುತ್ತಿದ್ದ ನಮ್ಮನ್ನು ಪೋಲೀಸಿನವರು ಬಂಧಿಸಿದಾಗ ನಮ್ಮನ್ನು ಬಿಡಿಸಲು ಯಾರು ಮುಂದೆ ಬರಲಿಲ್ಲ. ಅರೆಸ್ಟ್ ಮಾಡಿದ ರೈತರ ಬೆಳೆಯನ್ನು ನಾಶ ಮಾಡಿದರು.

ತೀವ್ರ ಹೋರಾಟ - ದಬ್ಬಾಳಿಕೆ, ಸೆರೆಮನೆವಾಸ

ಅನೇಕ ಸಾರಿ ವರ್ಷವೆಲ್ಲಾ ಕಷ್ಟಪಟ್ಟು ಬೆಳೆದ ಬೆಳೆಯನ್ನು ನಾಶ ಮಾಡುತ್ತಿದ್ದ ಇವರು ಡಿ.ಸಿ.ಸಿ. ಬ್ಯಾಂಕಿನಲ್ಲಿ ಸಾಲ ಸಿಗದ ಹಾಗೆ ನೋಡಿ

ಪುಟ 10 ಕ್ಕೆ

ನಯಾಪೈಸೆ ಚಳುವಳಿ

ಇತಿಹಾಸದ ಪುಟಗಳಿಂದ

ಒಂದು ನಯಾಪೈಸೆ ಚಳುವಳಿ! ಇದೇನಿದು ಒಂದು ನಯಾಪೈಸೆಗೂ ಚಳುವಳಿಯೇ? ಹೌದು. ಮೊದಲಬಾರಿಗೆ ಕೆಂಬಾವುಟದಡಿಯಲ್ಲಿ ಉತ್ತರ ಕನ್ನಡದ ಸಾವಿರಾರು ಜನ ಸೇರಿದ್ದು, ಹೋರಾಡಿದ್ದು, ಯಶ ಪಡೆದಿದ್ದು ಈಗ ಚರಿತ್ರೆಯ ವಿಷಯ. ಅನ್ಯಾಯದ ವಿರುದ್ಧ ಪ್ರತಿಭಟಿಸುವ ಛಾತಿ ಕಳೆದುಕೊಂಡವರಿಗೆ ಇದು ಪಾಠ; ಈ ಹೋರಾಟದ ನೆನಪು ಯುವಜನರಲ್ಲಿ ಸ್ಫೂರ್ತಿಯ ಅಲೆ ಹುಟ್ಟಿಸುವುದು.

ನಯಾಪೈಸಾ ಚಳುವಳಿ ನಡೆದದ್ದು ಉತ್ತರ ಕನ್ನಡದ ಶಿರಸಿಯಲ್ಲಿ. ಸುಮಾರು 1968 ನೇ ಇಸವಿಯಲ್ಲಿ ಚಹಾದ ಬೆಲೆ ಕೇವಲ 1 ಪೈಸೆ ಹೆಚ್ಚಾದಾಗ (ಒಂದು ನಯಾಪೈಸೆ) ಅದರ ವಿರುದ್ಧ ಎದ್ದ ಸಂಘಟನಾ ಧ್ವನಿ ಚಳುವಳಿಯಾಗಿ ಹೆಚ್ಚಿದ ಪೈಸೆಯನ್ನು ಇಳಿಸುವ ಮೂಲಕ 'ನಯಾ ಪೈಸೆ ಚಳುವಳಿ' ಎಂದೇ ಹೆಸರಾಯಿತು.

1968 ಆಗಸ್ಟ್ ತಿಂಗಳಲ್ಲಿ ಶಿರಸಿಯ 'ಭಾರತ ಭವನ''ತಾಜ್‌ಮಹಲ್' 'ನಾಯಕ್ ಹೋಟೆಲ್'ಗಳಲ್ಲಿ ಎಂದಿನಂತೆ ಚಹಾ ಕುಡಿಯುವ ಕೂಲಿಯವರು, ರೈತರು ಹೊಕ್ಕರೆ ಚಹಾದ ಬೆಲೆ ಗ್ಲಾಸಿಗೆ 1 ಪೈಸೆ ಹೆಚ್ಚಾಗಿತ್ತು. ಸಹಿಸದಾದರು. ಅರಳಿಕಟ್ಟೆಯ ಮೇಲೆ ಕುಳಿತು ಹರಟೆ ಹೊಡೆಯುತ್ತಾ ಈ ಜನ ಪ್ರತಿಭಟಿಸಲು ನಿರ್ಧರಿಸಿದರು. ಆದರೆ ಏನು ಮಾಡಬೇಕು? ಆಡಳಿತಾರೂಢ ಪಕ್ಷಗಳು ಕುಲಗೆಟ್ಟು ಹೋಗಿದ್ದವು. ಆಗಲೇ ಉಳಿದ ಪದಾರ್ಥಗಳ ಬೆಲೆಯನ್ನು ಏರಿಸಿರುವ ಸರ್ಕಾರದ ಅಥವಾ ಆ ಪಕ್ಷದ ಜನಪ್ರತಿನಿಧಿಗಳ ಮೇಲೆ ಅವರಿಗೆ ವಿಶ್ವಾಸ ಇರಲಿಲ್ಲ. ಆದರೆ ಹೋರಾಟ ಮಾಡಲೇಬೇಕು. ಅದಕ್ಕೆ ನಾಯಕತ್ವ ಬೇಕು. ಆಗ ಜನರಿಗೆ ನೆನಪಾಗಿದ್ದು ಎಂ.ಎಸ್.ಧಾರೇಶ್ವರ್. ಅಂದೇ ಶಿರ್ಸಿಯ ಕೋರ್ಟಿಗೆ ಹೋಗಿ ಧಾರೇಶ್ವರರನ್ನು ಭೇಟಿ ಆದರು. ಕಮ್ಯುನಿಸ್ಟ್ ಪಕ್ಷವನ್ನು ಉತ್ತರ ಕನ್ನಡದಲ್ಲಿ ನೆಲಗೊಳಿಸುವ ಹೊಣೆಹೊತ್ತ ಎಂ.ಎಸ್.ಧಾರೇಶ್ವರ್ ಆಗಲೇ ಖ್ಯಾತ ವಕೀಲರೂ ಆಗಿದ್ದರು. ಜನ ಅವರಿಗೆ ಹೋರಾಟದ ನಾಯಕತ್ವ ವಹಿಸಲು ಕೇಳಿದಾಗ ಅವರು ಹೇಳಿದ್ದು 'ಕೆಂಬಾವುಟದಡಿಯಲ್ಲಿ ಹೋರಾಟ ಮಾಡಲು ತಯಾರಿದ್ದರೆ ಬರುತ್ತೇನೆ" ಜನ ಪ್ರೀತಿಯಿಂದ ಒಪ್ಪಿದ್ದರು. ಹೋರಾಟ ಪ್ರಾರಂಭವಾಯಿತು.


ಹೋರಾಟದ ಸ್ವರೂಪ ಕೂಡ ವಿಶಿಷ್ಟವಾಗಿತ್ತು. ಪ್ರತಿ ರೈತ, ಕೂಲಿಯವರು ಹೊಟೆಲಿಗೆ ಹೋಗುವುದು, ಚಹಾ ಕುಡಿಯುವುದು, 7 ಪೈಸೆ ಬದಲಿಗೆ 6 ಪೈಸೆ(ಮೊದಲಿನ ರೇಟು) ಕೊಟ್ಟು ಬರುವುದು. ಇದು ಮಾಲಿಕರಿಗೆ ಸಿಟ್ಟನ್ನು ತರಿಸಿತು. ಆದರೆ ಚಳುವಳಿ ನಿಲ್ಲಲಿಲ್ಲ. ಈ ಕ್ರಿಯೆ ಕೂಡ ಅನೇಕ ಹೊಟೆಲುಗಳನ್ನು ಸಂಪೂರ್ಣವಾಗಿ ಮುಚ್ಚಿದರು, ಅದೂ ವಾರಗಳ ಕಾಲ. ಜನ ದಿನನಿತ್ಯ ಸೇರಿದರು. ಘೋಷಣೆ ಕೂಗಿದರು. ಸಾವಿರಾರು ಜನರ ಮೆರವಣಿಗೆ ಕೂಡ ಶಿರಸಿಯಲ್ಲಿ ನಡೆಯಿತು.

ಈ ಹೋರಾಟ ಜೋರಾಗುತ್ತಿದ್ದಂತೆ ಎಂ.ಎಸ್.ಧಾರೇಶ್ವರ ಮತ್ತು ಕಮ್ಯುನಿಸ್ಟ್ ಪಕ್ಷದ ಇತರ ಜನರನ್ನು ಪೋಲೀಸರು ಬಂಧಿಸಿದರು. ಧಾರೇಶ್ವರ್ ಅವರ ಬಂಧನದ ಸುದ್ದಿ ತಿಳಿಯುತ್ತಲೇ ಸಾವಿರಾರು ಜನ ಪೋಲೀಸ್ ಠಾಣೆಗೆ ಮೆರವಣಿಗೆಯಲ್ಲಿ ಹೋಗಿ ಧರಣಿ ಕುಳಿತರು. ಪೋಲೀಸರೊಂದಿಗೆ ಜಟಾಪಟಿ ಮಾತುಗಳಾದವು. ಕೊನೆಗೂ ಜನರ ಒತ್ತಾಯಕ್ಕೆ ಪೋಲೀಸರು ಮಣಿಯಬೇಕಾಯಿತು. ಧಾರೇಶ್ವರ ಮತ್ತು ಇತರರ ಬಿಡುಗಡೆ ಆಯಿತು. ಜನ ಅವರನ್ನು ಕುತ್ತಿಗೆಯ ಮೇಲೆ ಹೊತ್ತು ಬಿಡಕಿ ಬೈಲಿ ನವರೆಗೆ ಮೆರವಣಿಗೆಯಲ್ಲಿ ತಂದರು.

ಅಂದಿನ ಹೋರಾಟದಲ್ಲಿ ಕಾಂ. ಧಾರೇಶ್ವರರೊಂದಿಗೆ ಮಂಜುನಾಥ ಪುಲ್ಕರ, ಜಿ.ಮಶಾಲ್ದಿ, ರಂಗ, ಬೀಮ್ಸಿ, ಕೆರೆಯಾ ಗೌಡ(ಈಗಿನ ಶಿರಸಿಯ ಬಂಗಾರೇಶ್ವರ ಗೌಡ ಅವರ ತಂದೆ), ಗುಬ್ಬುನಾಯಕ್, ಅಹಮದ್ ಬ್ಯಾರಿ, ತುಕಾರಾಂ ಸುಂದರ, ಕೀಳಪ್ಪನ್, ಮರಾಠಿ ಮುಂತಾದವರು ನಾಯಕತ್ವ ವಹಿಸಿದ್ದರು.

ಹೋರಾಟ ತೀವ್ರರೂಪ ಪಡೆದುಕೊಳ್ಳುತ್ತಿದಂತೆ ಜಿಲ್ಲಾಡಳಿತ, ತಾಲೂಕು ಆಡಳಿತ ಮಧ್ಯ ಪ್ರವೇಶಿಸಿತು. ಅಸಿಸ್ಟೆಂಟ್ ಕಮಿಷನ್ ಅವರ ಮಧ್ಯಸ್ಥಿಕೆಯಲ್ಲಿ ಸಭೆ ನಡೆದು 7 ಪೈಸೆಯಾಗಿದ್ದ ಚಹಾದ ಬೆಲೆಯನ್ನು ಪುನಃ 6 ಪೈಸೆಗೆ ಇಳಿಸಲಾಯಿತು. ಜಿಲ್ಲೆಯ ಜನ ಮೊದಲಬಾರಿಗೆ ಸಾಮೂಹಿಕ ಹೋರಾಟದ ಮಹತ್ವ ಅರಿತರು.

ಆಕಾಶವಾಣಿಯಲ್ಲಿ ಇದು ದೊಡ್ಡ ಸುದ್ದಿಯಾಯಿತು. ರಾಷ್ಟ್ರೀಯ ಪತ್ರಿಕೆಯಲ್ಲಿ, ವಿದೇಶಿಯ ಪತ್ರಿಕೆಯಲ್ಲಿ ಕೂಡ ಇದು ದೊಡ್ಡ ಸುದ್ದಿಯಾಯಿತು. ಇಂತಹ ಹೋರಾಟವನ್ನು


ಧಾರೇಶ್ವರ್

ಸಂಘಟಿಸಿದ ಕೆಂಬಾವುಟ ನಾಯಕತ್ವದ ಧಾರೇಶ್ವರರನ್ನು ಭೇಟಿ ಆಗಲು ಬಿಬಿಸಿ ಯವರು ದೇಶ ವಿದೇಶಗಳ ಕೆಲ ಮಾಧ್ಯಮದವರು ಬಂದಿದ್ದು ಇಲ್ಲಿ ಉಲ್ಲೇಖನೀಯ.

- ವಿಠ್ಠಲ್

ಕತ್ತಲೆಯಿಂದ ಬೆಳಕಿಗೆ ....

ಪುಟ 9 ರಿಂದ

ಕೊಳ್ಳುತ್ತಿದ್ದರು. ಲಂಬಾಣಿ ರೈತರ ಮೇಲೆ ಸುಳ್ಳು ಕೇಸುಗಳನ್ನು ದಾಖಲಿಸಿ, ಪೋಲೀಸ್ ಸ್ಟೇಷನ್‌ಗೆ ಕಳುಹಿಸುತ್ತಿದ್ದರು. ರೈತರ ಹೋರಾಟಕ್ಕೆ ಸೇವಾದಾಸ್ ಬಂಜಾರ್ ಕ್ರಾಂತಿ ಸಂಘದ ನಾಯಕರಾಗಿ ಬಾಲಾಜಿ ಸ್ವಯಂ ಪ್ರೇರಣೆಯಿಂದ ಹೋರಾಟದ ನಾಯಕತ್ವ ವಹಿಸಿ, ಅನೇಕ ಬಾರಿ ರೈತರ ಪ್ರದರ್ಶನ, ಹೋರಾಟಗಳು ಭೂಮಿಗಾಗಿ ನಡೆಸಿದರು. 2000 ಜನರ ಪ್ರದರ್ಶನ ನಡೆಸಿದರು. ಹರತಾಳ, ದಿಗ್ಬಂಧನ, ಮೀಟಿಂಗುಗಳು ನಡೆದವು. ಸಭೆಗಳಿಗೆ, ಪ್ರದರ್ಶನಗಳಿಗೆ ಪೋಲೀಸರಿಂದ ಅನುಮತಿ ದೊರೆಯಲಿಲ್ಲ. ನಾವು ಅದನ್ನು ಧಿಕ್ಕರಿಸಿ ಹೋರಾಟ ಮಾಡುತ್ತಿದ್ದೆವು. ಪೋಲೀಸರು ಚಿತ್ರಹಿಂಸೆ ಮಾಡುತ್ತಿದ್ದರು. ಕತ್ತಲೆಯ ಕೋಣೆಯಲ್ಲಿ ಅನೇಕ ದಿನಗಳು ರಾತ್ರಿ ಹಗಲು ಅನ್ನ ನೀರಿಲ್ಲದೆ ಸಾಯಿಸುತ್ತಿದ್ದರು. ಸುಳ್ಳು ಕೇಸುಗಳನ್ನು ಹಾಕಿದರು. ಆದರೂ ಇದಕ್ಕೆಲ್ಲಾ ಹೆದರದೆ ಹೋರಾಟ ನೂರಕ್ಕೆ ನೂರರಷ್ಟು ನಡೆಯಿತು. ಹೀಗೆ ಹತ್ತು ವರ್ಷಗಳ ಕಾಲ ನಡೆಯಿತು. ತೀವ್ರ ಹೋರಾಟ ನಡೆಯುತ್ತಿದ್ದಾಗ ಜಮೀನ್ದಾರರು ಎಚ್ಚರಿಕೆಯಿಂದ ಗಮನಿಸುತ್ತಿದ್ದರು. ಎಲ್ಲಾ ಚಿತ್ರಹಿಂಸೆಯನ್ನು ಸಹಿಸಿಕೊಂಡು ರೈತರು ಹೋರಾಡುತ್ತಿದ್ದರೆ ಜಮೀನ್ದಾರರು ಮೌನವಾಗಿ ಮಾಡಬೇಕಾದ್ದನ್ನು ಮಾಡಿಬಿಡುತ್ತಿದ್ದರು. ಅಗಾಧ ಭೂಮಿಗಾಗಿ ಘರ್ಷಣೆ ನಡೆಯುತ್ತಿತ್ತು. ಅನೇಕ ದಾಳಿ ದಬ್ಬಾಳಿಕೆಗಳನ್ನು ಎದುರಿಸಿ ಕೊನೆಗೂ ಲಂಬಾಣಿ ಜನರಿಗೆ ನ್ಯಾಯ ದೊರಕಿತು.

ಕೊನೆಗೂ ಭೂಮಿ ದಕ್ಕಿತು

ಹೋರಾಟದ ಫಲವಾಗಿ ಸರ್ಕಾರ ಭೂಮಿಯನ್ನು ಬಡ ರೈತರಿಗೆ ಹಂಚಿತು. 110 ಕುಟುಂಬಗಳಿಗೆ ತಲಾ 3.9 ಎಕರೆ ಜಮೀನು ಮಂಜೂರು ಮಾಡಿತು. ಅನೇಕ ಕಷ್ಟಗಳನ್ನು ಅನುಭವಿಸಿ ಹೋರಾಡಿ ಬಾಲಾಜಿ, ಆತನ ಸ್ನೇಹಿತರು ವಿಜಯ ಸಾಧಿಸಿದರು. ಲಂಬಾಣಿ ಜನರು ತುಂಡು ಭೂಮಿಯನ್ನು ಪಡೆದರು. ಕುಟುಂಬದ ಆದಾಯ ಹೆಚ್ಚಾಯಿತು. ಇವರಲ್ಲಿ ಅನೇಕರು ಸಕ್ಕರೆ ಕಾರ್ಖಾನೆಯ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ಈ ಕಾರ್ಮಿಕರು ಪ್ರತಿವರ್ಷ ಬವಲ್ ಗಾಂ ಗ್ರಾಮಕ್ಕೆ 7-8 ಲಕ್ಷ ರೂಪಾಯಿಯನ್ನು ತರುತ್ತಿದ್ದರು. ಕೆಲವು ವರ್ಷ ಇನ್ನೂ ಹೆಚ್ಚಾಗಿ ತರುತ್ತಿದ್ದರು.

ನೀರಾವರಿ ಯೋಜನೆಯತ್ತ

ಬಾಲಾಜಿ ಹೊಸ ಯೋಜನೆಯನ್ನು ರೂಪಿಸಿದರು. ಭೂಮಿಯನ್ನು ಸಾಗುವಳಿ ಮಾಡಲು ನೀರಾವರಿ ಯೋಜನೆಯನ್ನು, ಈ ನೀರಾವರಿ ಯೋಜನೆಯ ಜಾರಿಯಾಗಬೇಕಾದರೆ 300 ಜನ ರೈತರ ಸಹಿ ಆಗಬೇಕಾಗಿತ್ತು. ವಾಸ್ತವವಾಗಿ 300 ಜನರೈತರು ಅಲ್ಲಿ ಇರಲಿಲ್ಲ. ಒಂದು ಮನವಿ ತಯಾರಿಸಿ 300 ಜನರ ಸಹಿಯನ್ನು ಕಾಗದದ ಮೇಲೆ ತಯಾರಿಸಿದರು. ಇದರಿಂದ ಉಪಯೋಗ ವಾಯಿತು. ಈ ಪ್ರದೇಶದ ರೈತರಿಗೆ ನೀರಾವರಿ ಸೌಲಭ್ಯ ಸಿಕ್ಕಿತು.

ಹಮ್ ಬೀ ಜಮೀನ್ದಾರ್ ಹೇ

ಇಷ್ಟೆಲ್ಲಾ ಹೋರಾಟ ಮಾಡಿದರೂ ಬಾಲಾಜಿ ಈ ಬಾರಿ ನಡೆದ ಪಂಚಾಯತ್ ಚುನಾವಣೆಯಲ್ಲಿ ಕೂಡ ಗೆಲ್ಲಲು ಸಾಧ್ಯವಾಗಲಿಲ್ಲ. ಈ ಗ್ರಾಮದ ಜನರ ಬೇಡಿಕೆಗಳಾದ ರಸ್ತೆ, ನೀರು, ವಸತಿ, ಶಾಲೆ ಇತ್ಯಾದಿ ಬೇಡಿಕೆಗಳಿಗಾಗಿ ಜನರನ್ನು ಸಂಘಟನೆ ಮಾಡಿ ಹೋರಾಡಲು ಬಾಲಾಜಿ ತೀರ್ಮಾನಿಸಿದ್ದಾರೆ. ಪ್ರತಿದಿನ ಮಹಾರಾಷ್ಟ್ರಕ್ಕೆ ಶಾಲೆಗೆ ಹೋಗುವ ಮಕ್ಕಳ ಭವಿಷ್ಯಕ್ಕಾಗಿ ಹೋರಾಟ ಮುಂದುವರಿದಿದೆ.

'ಹಮ್ ಬೀ ಜಮೀನ್ ದಾರ್ ಹೈ' ಎಂದು ಜಮೀನುದಾರರಿಗೆ ನಗುನಗುತ್ತಾ ಹೇಳುತ್ತಾನೆ ಬಾಲಾಜಿ.

ಅನು: ಕೋದಂಡರಾಮ ವಿ.

ನಾಚಿಕೆಗೇಡಿನ ವಾಜಪೇಯಿ ಸರ್ಕಾರ.....

ಪುಟ 5 ರಿಂದ

ಸಂವಿಧಾನವನ್ನು ಬುಡಮೇಲುಗೊಳಿಸುವಲ್ಲಿ ಕಿಂಚಿತ್ತೂ ಹಿಂಜರಿತವಿಲ್ಲ. ಆದರೆ ಇತರರ ಮೇಲೆ ದೊಡ್ಡ ಆರೋಪವನ್ನು ಹರಿಯಬಿಡಲಾಗುತ್ತದೆ. ಸಂವಿಧಾನದ 356 ನೇ ವಿಧಿಯನ್ನು ಬಳಸಲು ಸಿದ್ದರಿದ್ದರೂ ಕೂಡ.

ಹಿಂದೆ ಬಿಜೆಪಿ ವಿರೋಧ ಪಕ್ಷದ ಸ್ಥಾನದಲ್ಲಿದ್ದಾಗ ಕೇಂದ್ರ-ರಾಜ್ಯ ಸಂಬಂಧಗಳ ಬಗ್ಗೆ ವರದಿ ನೀಡಲು ನೇಮಿಸಲಾಗಿದ್ದ ಸರ್ಕಾರಿಯಾ ಆಯೋಗದ ಎದುರು ಇದೇ ಬಿಜೆಪಿ 356ನೇ ಕಲಮ್ಮಿನ ಬಳಕೆ ಮತ್ತು ರಾಜ್ಯಪಾಲರ ಪಾತ್ರದ ಬಗ್ಗೆ ತನ್ನ ವಾದ ನೀಡಿತ್ತು. ಅದರಂತೆ ರಾಜ್ಯಪಾಲರ ಅವಧಿ 5 ವರ್ಷ ಕಡ್ಡಾಯ ಇರಬೇಕೆಂದೂ ಅವರನ್ನು ಪಾರ್ಲಿಮೆಂಟ್ ಮಾತ್ರವೇ ನಿರ್ಧರಿಸಿ ವಾಪಾಸು ಕರೆಸಿ ಕೊಳ್ಳಬಹುದೆಂದು ತಿಳಿಸಿತ್ತು. ಡಿಎಂಕೆ ಸಹ'ರಾಜ್ಯಪಾಲರು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಬೇಕು. ಕೇಂದ್ರದ ಏಜೆಂಟ ರಾಗಿರಬಾರದೆಂದು ಅಭಿಪ್ರಾಯಿಸಿತ್ತು. ಆದರೀಗ....?


ಘನತೆ ಕಾಯ್ದುಕೊಂಡು ರಾಜ್ಯಪಾಲೆ ಫಾತಿಮ ಬೀವಿ

ವಾಜಪೇಯಿ, ಬಿಜೆಪಿ ಮತ್ತವರ ಕೂಟಕ್ಕೆ ಈ ಅಂಶಗಳ ಬಗ್ಗೆ ಭಾರಿ ತಿರಸ್ಕಾರ, ಕಡುದ್ವೇಷ. ಒಂದೊಂದು ರಾಜ್ಯಗಳಿಗೂ ಒಂದೊಳ್ದು ಮಾನದಂಡ ಅನುಸರಿಸುವುದರಲ್ಲಿ ನಿಸ್ಸೀಮತೆ ತೋರಿಸಿದ್ದಾರೆ. ಚುನಾವಣೆಗೆ ಸ್ವಲ್ಪ ಮೊದಲು ಯಾರದೋ ಎಲುಬುಗಳನ್ನು ಹೆಕ್ಕಿ ತಂದು ಇದು ಸಿಪಿಎಂ ಕಾರ್ಯಕರ್ತರಿಂದಾದ ಹತ್ಯೆ ಎಂದು ದೆಹಲಿಯಲ್ಲಿ ತೋರಿಸಿದ ಮಮತಾ ಬ್ಯಾನರ್ಜಿ ಆಲಾಪವನ್ನೇ ಆಧಾರವಾಗಿಟ್ಟುಕೊಂಡು ಪ.ಬಂಗಾಳ ಸರ್ಕಾರ ವಜಾಗೊಳಿಸಲು 'ತಂಡ'ಗಳನ್ನು ಕಳಿಸಿ, ಪ.ಬಂಗಾಳದ ಎಡರಂಗ ಸರ್ಕಾರ ಹಾಗೂ ಜನತೆಯೆದುರು ಈ ಆಟ ಸಾಗದೇ ಮುಖಭಂಗ ಅನುಭವಿಸಿದ್ದು ಸಾಕಾಗಲಿಲ್ಲವೇ? ಬಿಹಾರದಲ್ಲಿಯೂ ಹೀಗೆಯೇ... ರಾಷ್ಟ್ರಪತಿಗಳಿಂದ, ಪಾರ್ಲಿಮೆಂಟಿನಿಂದ ಮುಖಕ್ಕೆ ಹೊಡೆಸಿಕೊಂಡರೂ ತಮ್ಮ ಫ್ಯಾಸಿಸ್ಟ್ ಮನೋಭಾವದ ವರ್ತನೆಯನ್ನು ಬಿಡಲು ತಯಾರಿಲ್ಲ.

ಕರುಣಾನಿಧಿ ಬಂಧನವಾದ ಜೂನ್ 26 ರನ್ನು ಕರಾಳವಾದ, ಅದು ಕಪ್ಪು ಚುಕ್ಕೆಯ ದಿನವೆಂದು' ಗೃಹ ಸಚಿವ ಅಡ್ವಾಣಿ ಹಾಗೂ ಬಿಜೆಪಿ ವಾಲಾಗಳು ಬಣ್ಣಿಸಿಕೊಂಡು ಓಡಾಡುತ್ತಿದ್ದಾರೆ. ಆದರೆ ಉತ್ತರ ಪ್ರದೇಶದಲ್ಲಿ ಜಾತಿ ವೈಷಮ್ಯದ ಹಿಂಸಾಕಾಂಡದ ಎರಡು ಘಟನೆಗಳಲ್ಲಿ ದಲಿತರು ಕಗ್ಗೊಲೆಗೆ ಈಡಾಗಿದ್ದಾರೆ. ಮಹಿಳೆ-ಮಕ್ಕಳ ಮೇಲೆ ಮೇಲ್ಜಾತಿಗಳ ದೌರ್ಜನ್ಯ ನಡೆದೇ ಇದೆ. ಉತ್ತರ ಪ್ರದೇಶದ ಬಿಜೆಪಿ ಸರ್ಕಾರ ಈ ಘಟನೆಗಳತ್ತ ಕಣ್ಣು ಹಾಯಿಸದೆ ನಿರ್ಲಕ್ಷಿಸಿದೆ. ಇಲ್ಲಿಗೆ ಕೇಂದ್ರದ ಗೃಹ ಸಚಿವರು ಒಂದು ತಂಡವನ್ನು ಕಳಿಸಿಲ್ಲ. ಅವರಾಗಲೀ ಭೇಟಿ ಮಾಡಿಲ್ಲ. ಆದರೆ ರಾಜಕೀಯ ದ್ವೇಷದ ಸಾಧನೆಗೆ ಕ್ಷಣಾರ್ಧದಲ್ಲಿ ತಂಡಗಳು, ಮಂತ್ರಿಗಳ ದಂಡೇ ಬಂದು ಹೋಗಿ ಅಲ್ಲೋಲ ಕಲ್ಲೋಲ ಹುಟ್ಟಿಸಲಾಗುತ್ತಿದೆ.

ವಾಜಪೇಯಿ ಸರ್ಕಾರ ತಮಿಳುನಾಡಿನ ಈ ಘಟನೆಗಳಲ್ಲಿ ಸಂವಿಧಾನದ ಗಡಿ ರೇಖೆಗಳನ್ನು ಉಲ್ಲಂಘಿಸಿ, ಸರ್ಕಾರದ ಅಧಿಕಾರಗಳ ವ್ಯಾಪ್ತಿ ತಿರಸ್ಕರಿಸಿ ಮನಬಂದಂತೆ ವರ್ತಿಸಿ ಅಪರಾಧವೆಸಗಿದೆ. ಇದನ್ನು ಭಾರತದ ಜನತೆ ಸಹಿಸಲಾರರು.

- ಎಸ್.ವೈ.ಜಿ

ಯುಗೋಸ್ಲಾವಿಯಾದ ಸಾರ್ವಭೌಮತೆಯ ಮಾರಾಟ

ಸ್ಲೊಬೊದನ್ ಮಿಲೊಸೆವಿಕ್ ಯುಗೋಸ್ಲಾವಿಯಾದ ಮಾಜಿ ಅಧ್ಯಕ್ಷ. ಯುಗೋಸ್ಲಾವಿಯಾ ಗಣರಾಜ್ಯವನ್ನು ಧರ್ಮ-ಜನಾಂಗೀಯ ಆಧಾರದ ಮೇಲೆ ಚೂರು-ಚೂರು ಮಾಡಿ ತಮ್ಮ ವಸಾಹತುಗಳನ್ನಾಗಿ ಮಾಡಬೇಕೆಂದು ಬಯಸಿದ ಅಮೆರಿಕನ್ ಮತ್ತು ಯುರೋಪಿನ ಸಾಮ್ರಾಜ್ಯಶಾಹಿಗಳ ಪಿತೂರಿಗೆ ಸವಾಲು ಹಾಕಿದವ. ಅಮೆರಿಕ ಮತ್ತು ನಾಟೋ ದುಷ್ಟ ಮಿಲಿಟರಿ ಕೂಟದ ಇಡೀ ಮಿಲಿಟರಿ ಬಲವನ್ನು ಎದುರಿಸಿದವ. ಯುಗೋಸ್ಲಾವಿಯದ ಮೇಲೆ ಅವರು ಹೂರಿಸಿದ ಯುದ್ಧದ ವಿರುದ್ಧ ಇಡೀ ದೇಶದ ನಾಯಕತ್ವ ಹೊತ್ತು ನಿಂತವ. ಇದೇ ಅವರ 'ಯುದ್ಧ ಅಪರಾಧ'. ಇದಕ್ಕಾಗಿ ಆತನನ್ನು ಅಪಹರಿಸಿಕೊಂಡು ಹೋಗಿ ವಿಚಾರಣೆಗೆ ಗುರಿಪಡಿಸಿದ ಸಾಮ್ರಾಜ್ಯಶಾಹಿ. ಆತನ ಸರ್ಕಾರವನ್ನು ಎಲ್ಲಾ ಅನ್ಯಾಯಯುತ-ಕಾನೂನುಬಾಹಿರ ಕ್ರಮಗಳನ್ನು ಬಳಸಿ, ಅಧಿಕಾರಕ್ಕೆ ಬಂದ ಅಧ್ಯಕ್ಷನೇ ಮಿಲೋಸೋವಿಕ್‌ನನ್ನು ಒಪ್ಪಿಸಲು ನಿರಾಕರಿಸಿದ. ಆದರೆ ಪ್ರಧಾನಮಂತ್ರಿ ಮತ್ತಿತರರು ಆ ದೇಶದ ಸುಪ್ರೀಂ ಕೋರ್ಟನ್ನು ಉಲ್ಲಂಘಿಸಿ ಆತನನ್ನು ಸಾಮ್ರಾಜ್ಯಶಾಹಿಗಳಿಗೆ ಅಪಹರಿಸಲು ಬಿಟ್ಟಿದ್ದಾರೆ. ಅದೂ ಮಿಲೋಸೋವಿಕ್‌ನನ್ನು ಅಪಹರಿಸಿಬಿಟ್ಟರೆ ನಿಮಗೆ 125 ಕೋಟಿ ಡಾಲರು ಕೊಡುತ್ತೇವೆ ಎಂದು ಆಸೆ ತೋರಿಸಿದಾಗ. 20ನೇ ಶತಮಾನದಲ್ಲಿ ಹಲವಾರು ಭೀಕರ ಯುದ್ಧಗಳು ನಡೆದಿವೆ. ಐರ್ಲೆಂಡ್, ಪ್ಯಾಲೆಸ್ಟೇನ್, ವಿಯೆಟ್ನಾಂ, ಇರಾಕ್, ಯುಗೋಸ್ಲಾವಿಯದ ಮೇಲೆ ಆಕ್ರಮಣ ಮಾಡಿದ ದೇಶದ ನಾಯಕರನ್ನು ಇದುವರೆಗೆ ಯಾವುದೇ 'ಯುದ್ಧ ಅಪರಾಧ'ಗಳಿಗೆ ವಿಚಾರಣೆ ಮಾಡಿಲ್ಲ, ಶಿಕ್ಷಿಸಿಲ್ಲ. ಇಂತಹ ವಿಚಾರಣೆ ಎದುರಿಸುತ್ತಿರುವ ಮೊದಲ ದೇಶದ ಮುಖ್ಯಸ್ಥ ಮಿಲೊಸೋವಿಕ್. ಇಂತಹ ಘೋರ ವಿಪರ್ಯಾಸವಾದರೂ ಅಮೆರಿಕಕ್ಕೆ ಡೊಗ್ಗು ಸಲಾಮು ಹಾಕುತ್ತಿರುವ ನಮ್ಮ ವಾಜಪೇಯಿ ಸರ್ಕಾರವನ್ನು ಎಚ್ಚರಿಸಬಲ್ಲುದೇ?

125 ಕೋಟಿ ಡಾಲರುಗಳಿಗೆ ಮಾಜಿ ಅಧ್ಯಕ್ಷರನ್ನು ಮಾರಿಕೊಂಡರು!

ಯುಗೋಸ್ಲಾವಿಯದ ಮಾಜಿ ಅಧ್ಯಕ್ಷ ಮಿಲೊಸೋವಿಕ್‌ರನ್ನು ಅಲ್ಲಿನ ರಾಜಧಾನಿ ಬೆಲ್‌ಗ್ರೇಡ್‌ನ ಜೈಲಿನಿಂದ ಅಪಹರಿಸಿ ಹಾಲೆಂಡ್‌ನ ರಾಜಧಾನಿ ಹೇಗ್‌ಗೆ ಒಯ್ಯಲಾಯಿತು. ಯಾರೋ ಡಕಾಯಿತರು ಬೆದರಿಸಿ ದುಡ್ಡುಕಿತ್ತುಕೊಳ್ಳಲು ಅಪಹರಿಸಿರಬೇಕು ಎಂದು ಕೊಳ್ಳಬೇಡಿ. ಅಪಹರಿಸಿದವರು ಅಂತರ್ರಾಷ್ಟ್ರೀಯ ಕುಖ್ಯಾತಿ ಡಕಾಯಿತರೇನೋ ಹೌದು. ಆದರೆ ಇವರು ಎಂತಹ ವಿಚಿತ್ರ ಡಕಾಯಿತರೆಂದರೆ ಅಪಹರಿಸಲು 125 ಕೋಟಿ ಡಾಲರುಗಳನ್ನು ತೆತ್ತು ಹೋಗಿದ್ದಾರೆ! ಅಮೆರಿಕದ ಮತ್ತು ಯುರೋಪಿನ ಸಾಮ್ರಾಜ್ಯಶಾಹಿಗಳೇ ಈ ಕುಖ್ಯಾತ ಡಕಾಯಿತರು. ಯುಗೋಸ್ಲಾವಿಯಾದ ಈಗಿನ ಸರ್ಕಾರವನ್ನು ಬೆದರಿಸಿ ಈ ಅಪಹರಣ ನೆಡೆಸಿದ್ದಾರೆ. ಅದೇ ದಿನ ಇದೇ ಕುಖ್ಯಾತ ಡಕಾಯಿತರು ಯುಗೋಸ್ಲಾವಿಯದ ಮೇಲೆ ತಿಂಗಳುಗಳ ಕಾಲ ನಡೆಸಿದ ಯುದ್ಧದಲ್ಲಿ ನಿರ್ನಾಮವಾದ ಆ ದೇಶವನ್ನು ಪುನಃ ಕಟ್ಟಲು ಸಹಾಯ ಮಾಡುವ ಸಭೆ ಬೆಲ್ಜಿಯಂನ ಬ್ರಸೆಲ್ಸ್‌ನಲ್ಲಿ ನಡೆಯಲಿತ್ತು. ಮಿಲೋಸೆವಿಕ್‌ನನ್ನು ಅಪಹರಿಸಿಕೊಂಡು ಹೋಗಲು ಬಿಡದಿದ್ದರೆ, 125 ಕೋಟಿ ರೂ ಸಹಾಯಧನವನ್ನು ಕೊಡುವುದಿಲ್ಲ ಎಂದು ಬೆದರಿಸಿದ್ದರು. ಮಿಲೋಸೆವಿಕ್ ಅವರಿಗೆ ಏಕೆ ಬೇಕಾಗಿತ್ತು? ಮಿಲೊಸೊವಿಕ್ ಯುಗೋಸ್ಲಾವಿಯ ಗಣರಾಜ್ಯದ ದೇಶಗಳ ಮೇಲೆ ಯುದ್ಧ ಹೂಡಿದ ಅಪರಾಧ ಮಾಡಿದ್ದಾನಂತೆ. ಆತನ ಈ ಯುದ್ಧ ಅಪರಾಧ ವಿಚಾರಣೆಗೆ ಅಂತರ್ರಾಷ್ಟ್ರೀಯ ಕ್ರಿಮಿನಲ್ ಕೋರ್ಟ್‌ನ ಮುಂದೆ ತೆಗೆದುಕೊಂಡು ಹೋಗುತ್ತಿದ್ದಾರೆ. ತನ್ನ ದೇಶದ ಒಳಗೆ ಮಾಡಿದ 'ಅಪರಾಧ'ಗಳಿಗೆ ಇನ್ನೊಂದು ದೇಶದಲ್ಲಿ ಅಂತರ್ರಾಷ್ಟ್ರೀಯ ಕೋರ್ಟಿನ ಮುಂದೆ ವಿಚಾರಣೆಗೊಳಪಡಿಸಬೇಕಾಗಿರುವ ಮೊದಲ ಯಾವುದೇ ದೇಶದ ಮುಖ್ಯಸ್ಥ ಮಿಲೊಸೋವಿಕ್.

ಇವರು ನಿಜವಾದ ಯುದ್ಧ ಅಪರಾಧಿಗಳು



ಕಾನೂನು ಬಾಹಿರ 'ಅಪಹರಣ'

ಇದನ್ನು ಸಾಧ್ಯ ಮಾಡಲು ಯುಗೋಸ್ಲಾವಿಯದ ಸರ್ಕಾರ ತನ್ನ ದೇಶದ ಎಲ್ಲಾ ಕಾನೂನು, ಕಟ್ಟಳೆಗಳನ್ನು ಮುರಿಯಿತು. ತನ್ನ ದೇಶದ ಸ್ವಾತಂತ್ರ್ಯ, ಸಾರ್ವಭೌಮತೆಯನ್ನು ಮಾರಿಕೊಂಡಿತು. ಕೇವಲ 125 ಕೋಟಿ ಡಾಲರುಗಳ ಆಸೆಗಾಗಿ ತನ್ನ ಮಾಜಿ ಅಧ್ಯಕ್ಷರನ್ನು ಮಾರಿಕೊಳ್ಳಲು ಒಪ್ಪಿಕೊಂಡಿತು. ಮಾಜಿ ಅಧ್ಯಕ್ಷ ಮಿಲೊಸೊವಿಕ್‌ರನ್ನು 'ಯುದ್ಧ ಅಪರಾಧ'ಗಳಿಗಾಗಿ ಆಮೇಲೆ ಅಧಿಕಾರಕ್ಕೆ ಬಂದ ಸರ್ಕಾರ ಬಂಧಿಸಿ ವಿಚಾರಣೆಗೆ ಒಳಪಡಿಸಿತ್ತು, ಆದರೆ ಈಗಿನ ಅಧ್ಯಕ್ಷ ಕೊಸ್ತುನಿಕಾ, ಅಂತರ್ರಾಷ್ಟ್ರೀಯ ಕ್ರಿಮಿನಲ್ ಕೋರ್ಟಿಗೆ ಮಿಲೊಸೊವಿಕ್‌ರನ್ನು ಒಪ್ಪಿಸಲು ನಿರಾಕರಿಸಿದ್ದ. ಆದರೆ ಪ್ರಧಾನಮಂತ್ರಿ ಜಿಂಡ್ಜೆಕ್ ನಾಯಕತ್ವದಲ್ಲಿ ಮಂತ್ರಿಮಂಡಲದ ಹಲವರು ಹೇಗಾದರೂ ಮಾಡಿ ಮಿಲೊಸೊವಿಕ್‌ರನ್ನು ಅಂತರ್ರಾಷ್ಟ್ರೀಯ ಕೋರ್ಟಿಗೆ ಒಪ್ಪಿಸಬೇಕೆಂದು ಪ್ರಯತ್ನಿಸಿದರು. ಇದಕ್ಕಾಗಿ ಒಂದು 'ಕಾನೂನು' ತರಲಾಯಿತು. ಆದರೆ ಪಾರ್ಲಿಮೆಂಟಿನಲ್ಲಿ ಸಾಕಷ್ಟು ಬೆಂಬಲವಿಲ್ಲದೆ ಅದು ಬಿದ್ದುಹೋಯಿತು. ಆದರೂ ತಮ್ಮ ಪಟ್ಟು ಬಿಡದೆ ಸರ್ಕಾರ ಈ ಬಗ್ಗೆ ಒಂದು ಸುಗ್ರೀವಾಜ್ಞೆ ಹೊರಡಿಸಿತು. ಇದು ಸಂಪೂರ್ಣವಾಗಿ ಕಾನೂನು ಬಾಹಿರವಾಗಿತ್ತು.

ಇದರ ವಿರುದ್ಧ ಮಿಲೊಸೊವಿಕ್ ಬೆಂಬಲಿಗರು ಸಂವಿಧಾನಾತ್ಮಕ ಕೋರ್ಟಿಗೆ ಹೋದರು. ಅದು ಇನ್ನೂ ಮೂರು ವಾರಗಳ ಕಾಲ ಮಿಲೊಸೊವಿಕ್‌ರನ್ನು ಅಂತರ್ರಾಷ್ಟ್ರೀಯ ಕೋರ್ಟಿಗೆ ಕೊಡಬಾರದೆಂದು ಹೇಳಿತು. ಆದರೂ ದೇಶದ ಅತ್ಯುನ್ನತ ಕೋರ್ಟಿನ, ಎಲ್ಲಾ ಕಾನೂನು ಕಟ್ಟಳೆಗಳನ್ನು ಮುರಿದು ಸಂಪುಟ ಭದ್ರತಾ ಪಡೆ ಬಳಸಿ ಮಿಲೊಸೊವಿಕ್‌ರನ್ನು ದೇಶದಿಂದ ಹೊರಗೆ ಕಳಿಸಿತು. ಹೇಗ್‌ನ ಕೋರ್ಟ್‌ನ ವಶಕ್ಕೆ ಒಪ್ಪಿಸಿತು. ಆ ಮೂಲಕ ದೇಶದ ಸಾರ್ವಭೌಮತೆ ಪೂರ್ಣವಾಗಿ ಮಾರಿಕೊಂಡಿತು. ಇದಕ್ಕೇಕೆ ಸರಕಾರಕ್ಕೆ ಈ ಪರಿಯ ತರಾತುರಿ? ಸಹಾಯಧನದ ಆಮಿಷವಲ್ಲದೆ, ಯುಗೋಸ್ಲಾವಿಯಾದ ಒಳಗೆ ಇರುವವರೆಗೆ ಅತ್ಯಂತ ಜನಪ್ರಿಯರಾದ ಮಿಲೊಸೊವಿಕ್‌ರ 'ವಿಚಾರಣೆ' ಸಾಧ್ಯವಾಗುವುದಿಲ್ಲ ಎಂದು ಅವರಿಗೆ ಗೊತ್ತು. ಒಂದಲ್ಲ ಒಂದು ದಿನ ಜನ ದಂಗೆ ಎದ್ದರೆ ತಮ್ಮ ಅಧಿಕಾರಕ್ಕೆ ಸಂಚಕಾರ ಎಂದು ಅವರಿಗೆ ಗೊತ್ತಿದೆ.

ಈ ಅಂತರ್ರಾಷ್ಟ್ರೀಯ ಕೋರ್ಟು ಯಾವುದು 'ಯುದ್ಧ ಅಪರಾಧ' ಗಳ ವಿಚಾರಣೆಗೆ 1995 ರಲ್ಲಿ ಅಮೆರಿಕದ ಕೈಗೊಂಬೆಯಾಗಿರುವ ಭದ್ರತಾ ಸಮಿತಿ ಸ್ಥಾಪಿಸಿದ ಕೋರ್ಟು ಇದು. ಇದಕ್ಕೆ ಆರ್ಥಿಕ ಸಹಾಯ ಪೂರ್ತಿ ಅಮೆರಿಕದ್ದು. ಅಮೆರಿಕದ ಕೋಟ್ಯಾಧೀಶ ಜಾರ್ಜ್ ಪೋರೋನ್ ಸಹ ಇದಕ್ಕೆ ಆರ್ಥಿಕ ಸಹಾಯ ಕೊಟ್ಟವರು. 'ಸೋರೋನ್ ಪ್ರತಿಷ್ಠಾನ' ಪೂರ್ವ ಯೋರೋಪಿನಲ್ಲೆಲ್ಲ 'ಮುಕ್ತ ಮಾರುಕಟ್ಟೆ' ಮತ್ತು 'ಪ್ರಜಾಪ್ರಭುತ್ವ' (ಅಂದರೆ ಬಂಡವಾಳಶಾಹಿ) ಸ್ಥಾಪಿಸಲು ಸಹಾಯ ಮಾಡುತ್ತದೆ. ಇಂತಹ ಕೋರ್ಟು ಮಿಲೊಸೊವಿಕ್‌ಗೆ 'ಶಿಕ್ಷೆ' ಕೊಡಲು ತುದಿಗಾಲಲ್ಲಿ ಕಾದಿದೆ. ಈ ಕೋರ್ಟನ್ನು ಮನ್ನಿಸುವುದಿಲ್ಲ. ಇದು ಕಾನೂನು-ಬಾಹಿರ ಕೋರ್ಟು ಎಂದು ಮಿಲೊಸೆವಿಕ್ ಈಗಾಗಲೇ ಹೇಳಿದ್ದಾರೆ.

ಮಿಲೊಸೆವಿಕ್ ರ 'ಅಪರಾಧ'ಗಳೇನು?

ಪೂರ್ವಯುರೋಪಿನಲ್ಲೆಲ್ಲ ಸಮಾಜವಾದಿ ದೇಶಗಳಲ್ಲಿ ಜನಾಂಗ, ಧರ್ಮ, ರಾಷ್ಟ್ರೀಯತೆ - ಎಲ್ಲವನ್ನು ಬಳಸಿ ದೇಶ ಒಡೆಯುವ ಬುಡಮೇಲು ಕೃತ್ಯಗಳಲ್ಲಿ, ಅಮೆರಿಕನ್ ಮತ್ತು ಯುರೋಪಿಯನ್ ಸಾಮ್ರಾಜ್ಯಶಾಹಿ ತೀವ್ರವಾಗಿ ತೊಡಗಿತ್ತು. ಇದರ ಭಾಗವಾಗಿ ಯುಗೋಸ್ಲಾವಿಯಾದಲ್ಲೂ ಅದು ಸಕ್ರಿಯವಾಗಿತ್ತು. ಹಲವು ಧರ್ಮ, ಜನಾಂಗ, ರಾಷ್ಟ್ರೀಯತೆಗಳ ಸಂಗಮವಾದ ಆದರೂ ಐಕ್ಯತೆ, ಸೌಹಾರ್ದದಿಂದ ಇದ್ದ ಯುಗೋಸ್ಲಾವಿಯಾದ ಮೇಲೆ ಅವರಿಗೆ ವಿಶೇಷ ಕಣ್ಣು. ಯುಗೋಸ್ಲಾವಿಯಾ ಏಳು ಗಣರಾಜ್ಯಗಳುಳ್ಳ ಫೆಡರೇಷನ್ ಆಗಿತ್ತು. ಅವರ ಸತತ ಪ್ರಯತ್ನ 90 ದಶಕದಲ್ಲಿ 'ಫಲ' ಕೊಡಲಾರಂಭಿಸಿತು. ಜನಾಂಗ- ಧರ್ಮ-ರಾಷ್ಟ್ರೀಯತೆ ಆಧಾರದ ಮೇಲೆ ಯುಗೋಸ್ಲಾವಿಯಾದ ಒಳಗೆ ಕಲಹ ಆರಂಭವಾಯಿತು. ಈ ಕಲಹದ ಮಧ್ಯೆಯೂ ಮೊದಮೊದಲು ಯುಗೋಸ್ಲಾವಿಯಾದ ಐಕ್ಯತೆ ಕಾಪಾಡಲು ಪ್ರಯತ್ನಿಸಿದ ಮಿಲೊಸೊವಿಕ್ ಸರ್ಬಿಯ ಗಣರಾಜ್ಯದ ಸ್ವಾತಂತ್ರ್ಯ, ಸಾರ್ವಭೌಮತೆಯ ಪಕ್ಷ ಹಿಡಿಯಬೇಕಾಯಿತು. ಉಳಿದೆಲ್ಲ ಗಣರಾಜ್ಯಗಳ ನಾಯಕರು ಹೆಚ್ಚಾಗಿ ಸಾಮ್ರಾಜ್ಯಶಾಹಿ ಕೈಗೊಂಬೆಗಳು, ಅವರಿಂದ ಪ್ರೇರಿತರಾದವರು ಆಗಿದ್ದ ಫಲವಾಗಿ ಯುಗೋಸ್ಲಾವಿಯ ಒಡೆಯುತ್ತ ಹೋಯಿತು. ಇದರಲ್ಲಿ ಅಮೆರಿಕ ಮತ್ತು ಮುಖ್ಯವಾಗಿ ಜರ್ಮನಿ ಮುಖ್ಯ ಪಾತ್ರ ವಹಿಸಿದ್ದವು. ಈ ಎಲ್ಲಾ ಯುದ್ಧಗಳಿಗೆ ಅಮೆರಿಕ, ಜರ್ಮನಿ ಮುಖ್ಯ ಕಾರಣವಾದರೂ ಸತತ ಅಪಪ್ರಚಾರಗಳ ಮೂಲಕ ಜಗತ್ತಿನಲ್ಲೂ, ಯುಗೋಸ್ಲಾವಿಯದ (ಸರ್ಬಿಯ ಅಲ್ಲದ) ಇತರ ಹಲವು ಗಣರಾಜ್ಯಗಳಲ್ಲೂ ಮಿಲೊಸೊವಿಕ್ ಇದಕ್ಕೆಲ್ಲಾ ಕಾರಣ ಎಂದು ಬಿಂಬಿಸಲಾಯಿತು. ಇದಕ್ಕೆ ಮಿಲೊಸೊವಿಕ್‌ರ ಇತರ ನಾಯಕರಂತೆ ಅಮೆರಿಕನ್/ಜರ್ಮನ್ ಪಿತೂರಿಯ ಭಾಗವಾಗಲು, ಅವರ ಬಾಲವಾಗಲು ನಿರಾಕರಿಸಿದ್ದು, ಅವರನ್ನು ಸಕ್ರಿಯವಾಗಿ ವಿರೋಧಿಸಲು ಕಾರಣವಾಯಿತು.

ಆದರೆ ಇವರ ಮೇಲೆ ಯುದ್ಧ ಅಪರಾಧದ ವಿಚಾರಣೆ



ಮಿಲೊಸೊವಿಕ್

ಮಾರ್ಚ್ 1999 ರಲ್ಲಿ ಸರ್ಬಿಯಾದ ಒಂದು ಭಾಗವಾದ 'ಕೊಸೊವೊ'ನ್ನು 'ರಕ್ಷಿಸಲು' ಇಡಿ ದೇಶದ ಮೇಲೆ ವಾರಗಟ್ಟಲೆ ಬಾಂಬ್ ದಾಳಿ ಮಾಡಿದರೂ ಮಣಿಸಲಾಗಲಿಲ್ಲ. ಆಮೇಲೆ ಕೋಟ್ಯಾಂತರ ಡಾಲರುಗಳನ್ನು ಖರ್ಚು ಮಾಡಿ ಆದೇಶದ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡಿ ಆಮೇಲೆ ನಡೆದ ಚುನಾವಣೆಗಳಲ್ಲಿ ಮಿಲೊಸೊವಿಕ್‌ರನ್ನು ಚುನಾವಣೆಯಲ್ಲಿ ಸೋಲುವಂತೆ ಮಾಡಲಾಯಿತು. ಆಮೇಲೆ ಬಂದ ಅಮೆರಿಕದ ಕೈಗೊಂಬೆ ಸರಕಾರದ ಮೇಲೆ ಮಿಲೊಸೊವಿಕ್‌ರನ್ನು 'ಯುದ್ಧ ಅಪರಾಧ'ಗಳ ವಿಚಾರಣೆಗೆ ತನಗೆ ಒಪ್ಪಿಸುವಂತೆ ಒತ್ತಡ ಹೇರುತ್ತಿದ್ದುದು ಸಫಲವಾಗದೆ, ಈಗಿನ ಅಪಹರಣದಲ್ಲಿ ಕೊನೆಗೊಂಡಿದೆ.

'ಯುದ್ಧ ಅಪರಾಧ'ಗಳ ವಿಚಾರಣೆಯ ಘೋರ ವಿಪರ್ಯಾಸ

ಯುಗೋಸ್ಲಾವಿಯದಲ್ಲಿ ಯುದ್ಧ ಹುಟ್ಟಿ ಹಾಕಿದ್ದಕ್ಕಾಗಿ ಆಗಿನ ಅಮೆರಿಕ, ಜರ್ಮನಿಗಳ ಮತ್ತು ಹೆಚ್ಚಿನ ನಾಟೋ ದೇಶಗಳ ಅಧ್ಯಕ್ಷ/ ಪ್ರಧಾನಿಗಳ ವಿಚಾರಣೆಯಾಗಬೇಕು, ನಿಜವಾಗಲೂ. ಯುಗೋಸ್ಲಾವಿಯ ಎಲ್ಲಾ ಆಂತರಿಕ ಯುದ್ಧಗಳಿಗೆ ಮಾತ್ರವಲ್ಲ, ಆದೇಶದ ಮೇಲೆ ಮಾರ್ಚ್ 1999 ರಿಂದ ನಡೆದ ಯುದ್ಧಕ್ಕೂ ಅವರೇ ಕಾರಣ. 1995 ರಲ್ಲಿ ಈ ಕೋರ್ಟು ಆದ ನಂತರ ನಡೆದ ಮೊದಲ ದೊಡ್ಡ ಯುದ್ಧ ಇದು. ಆದರೆ ಯುದ್ಧ ಹೂಡಿದವರನ್ನು ವಿಚಾರಣೆ ಮಾಡುವ ಬದಲು ಯುದ್ಧದಲ್ಲಿ ಆಕ್ರಮಣಕ್ಕೊಳಗಾದವರ 'ವಿಚಾರಣೆ' ನಡೆಸುವುದಕ್ಕಿಂತ ಘೋರ ವಿಪರ್ಯಾಸ ಬೇರೆ ಇರಲಿಕ್ಕಿಲ್ಲ.

ಇದು ಮಾತ್ರವಲ್ಲ, ವಿಯೆಟ್ನಾಮ್, ಪ್ಯಾಲೆಸ್ಟೇನ್, ಇರಾಕ್, ಯುಗೋಸ್ಲಾವಿಯಾದ ಮೇಲೆ ವಿನಾಕಾರಣ ಯುದ್ಧ ಹೂಡಿ ನರಮೇಧ ನಡೆಸಿದ ಆ ದೇಶಗಳಿಗೆ ಭಾರಿ ಕಷ್ಟ-ನಷ್ಟ ಹೊರಿಸಿದ ಅಮೆರಿಕದ ಅಧ್ಯಕ್ಷರುಗಳನ್ನು ಈ ಕೋರ್ಟಿನ ಮುಂದೆ ಎಳೆಯಲಾಗಿಲ್ಲ. ಚಿಲಿಯ ಕುಖ್ಯಾತ ಮಿಲಿಟರಿ ಸರ್ವಾಧಿಕಾರಿ ಪಿನೊಚೆ ವಿರುದ್ಧ ಸ್ಪಾನಿಷ್ ಕೋರ್ಟೊಂದು ವಿಚಾರಣೆ ಕೈಗೆತ್ತಿಕೊಂಡಿತ್ತು. ಬ್ರಿಟನ್ ಭೇಟಿಗೆ ಬಂದಿದ್ದ ಆತನನ್ನು ಸ್ಪೇನ್‌ಗೆ ಕಳಿಸಬೇಕೆಂದು ಸ್ಪಾನಿಷ್ ಕೋರ್ಟು ಆಜ್ಞೆ ಮಾಡಿದರೂ ಬ್ರಿಟಿಶ್ ಪ್ರಧಾನಿ 'ಮಾನವೀಯ ಮಧ್ಯ ಪ್ರವೇಶ' ಮಾಡಿ ಕುಖ್ಯಾತ ಸರ್ವಾಧಿಕಾರಿಯನ್ನು ರಕ್ಷಿಸಿದ್ದರು. ಪ್ಯಾಲೆಸ್ಟೇನ್ ಮೇಲೆ 'ಜನಾಂಗೀಯ ಯುದ್ಧ' ನಡೆಸುತ್ತಿರುವ ಇಸ್ರೇಲಿ ಪ್ರಧಾನಿ ಶಾರೋನನಂತಹ 'ಯುದ್ಧ ಅಪರಾಧಿ' ಬೇರೊಬ್ಬನಿರಲಿಕ್ಕಿಲ್ಲ. ಶಾರೋನ್ ಅಮೆರಿಕದ ಅತ್ಯಂತ ಆಪ್ತ ಮಿತ್ರ. ಆದರೆ ಮಿಲೊಸೆವಿಕ್ ಮಾತ್ರ 'ಯುದ್ಧ ಅಪರಾಧಿ'.

ಇಂತಹ ಘೋರ ವಿಪರ್ಯಾಸದ ದುರಂತ ನಾಟಕ ಮುಂದೆ ಹೋಗಗೊಡಬಾರದು. ಇದು ಭಾರತಕ್ಕೂ ಎಚ್ಚರಿಕೆ ಗಂಟೆಯಾಗಬೇಕು. ಅಮೆರಿಕದ ವಿಧೇಯ ಜ್ಯೂನಿಯರ್ ಪಾರ್ಟನರ್ ಆಗಲಿರುವ ವಾಜಪೇಯಿ ಸರ್ಕಾರ ಈಗಾದರೂ ಎಚ್ಚೆತ್ತುಕೊಳ್ಳಬೇಕು. ನಮ್ಮ ದೇಶದ ಸಾರ್ವಭೌಮ, ಸ್ವಾತಂತ್ರ್ಯ ಕಾಪಾಡಿಕೊಳ್ಳಬೇಕಾದರೆ ವಾಜಪೇಯಿ ಸರ್ಕಾರವನ್ನು ಈ ಬಗ್ಗೆ ಎಚ್ಚರಿಸಬೇಕು. ಇಲ್ಲವೇ ಕಿತ್ತುಹಾಕಬೇಕು. ಇಲ್ಲದಿದ್ದರೆ ಯುಗೋಸ್ಲಾವಿಯಾಕ್ಕೆ ಆದ ಗತಿಯೇ ನಮಗೆ ಕಾದಿದೆ.

ಶರತ್ ಚಂದ್ರ

ದ್ವೇಷದ ಕಿಚ್ಚು ಹಚ್ಚುವ ಅತಿರೇಕದ ಚಿತ್ರ 'ಗದರ್'

ಸಿನಿಮಾ

ಧರ್ಮ ಎನ್ನುವುದು ಒಂದು ಅಫೀಮು. ಅದರ ಮತ್ತೇರಿಸಿಕೊಂಡ ವರಿಗೆ ತಾವು ನಡೆದದ್ದೇ ದಾರಿ, ಮಾಡಿದ್ದೇ ಸರಿ. ಧರ್ಮ ಅಭಿಮಾನವಿದ್ದವರ ಮನೆಯಲ್ಲಿ ಮನೆ ಬೆಳಗುವ ದೀಪವಾಗಬೇಕೇ ಹೊರತು ಪರರ ಮನೆಗೆ ಬೆಂಕಿ ಹಚ್ಚಿ ಊರಿಗೆ ಬೆಳಕು ಹಂಚುತ್ತೇವೆಂದು ಹೇಳುವುದು ದುರಭಿಮಾನ. ಈ ದುರಭಿಮಾನದ ಫಲವಾಗಿ ದೇಶವೇ ಕೆಂಗೆಟ್ಟಿದೆ. ಹಲವರು ನೊಂದು ಬೆಂದಿದ್ದಾರೆ. ಬೆಂದ ಮನೆಯ ಗಳ ಹಿರಿಯದೇ ನೊಂದ ಮನಕೆ ತಣ್ಣೀರಿನ ಸಿಂಚನವಾಗಬೇಕು.

ಇಂತಹ ಸೂಕ್ಷ್ಮ ವಿಷಯಗಳ ಕುರಿತಾದ ಚಿತ್ರ ಮಾಡುವಾಗ ಬಹಳ ಎಚ್ಚರಿಕೆ ಅಗತ್ಯ. ಎರಡು ಜನಾಂಗ, ಎರಡು ರಾಷ್ಟ್ರ, ಎರಡು ಧರ್ಮಗಳನ್ನು ಬೆಸೆಯಲು ಸಾಧ್ಯವಾಗಬೇಕು. ಕಿಡಿ ಹಚ್ಚಿ ಮೈ ಕಾಯಿಸಿಕೊಳ್ಳುವಂತಹ ಕೆಲಸಕ್ಕೆ ಕೈ ಹಾಕಬಾರದು. ಆದರೆ 'ಗದರ್' ಇಂತಹ ಉನ್ಮಾದದ, ಉದ್ರೇಕಕ್ಕೆ ಎಡೆ ಮಾಡಿಕೊಡುವಂತಹ ಚಿತ್ರವಾಗಿರುವುದೇ ವಿಪರ್ಯಾಸ.

1947 ರಲ್ಲಿ ಹಿಂದೂಸ್ತಾನ-ಪಾಕಿಸ್ತಾನ ಬ್ರಿಟಿಷರ ಕುತಂತ್ರದಿಂದ ಇಬ್ಭಾಗವಾಗುವ ಸಂದರ್ಭದಲ್ಲಿನ ಪ್ರೇಮಕಥೆಯೇ 'ಗದರ್'. ಲಾಹೋರ್ ನಿಂದ ಅಮೃತಸರಕ್ಕೆ ರೈಲಿನಲ್ಲಿ ಹೊರಟ ಹಿಂದೂಗಳ ಮಾರಣಹೋಮ ದೊಂದಿಗೆ ಚಿತ್ರ ಆರಂಭವಾಗುತ್ತದೆ(ಇಲ್ಲಿ ಹಿಂಸಾಚಾರ ಮುಸ್ಲಿಂರಿಂದಲೇ ಪ್ರಾರಂಭವಾಗಿದ್ದು ಎಂಬ ಸಂದೇಶ ಹಲವರಲ್ಲಿ ಭಾವೋದ್ವೇಗಕ್ಕೆ ಕಾರಣ ವಾಗಿದೆ). ತನ್ನ ಕುಟುಂಬವನ್ನು ಕಳೆದುಕೊಂಡ ಸಿಖ್ ಯುವಕನೊಬ್ಬ ಅದಕ್ಕೆ ಪ್ರತೀಕಾರವಾಗಿ ಅಮೃತಸರದಿಂದ ಲಾಹೋರ್‌ಗೆ ಹೊರಟ ಮುಸ್ಲಿಮ ರನ್ನು ಹತ್ಯೆಗೈಯುವ ಸಂದರ್ಭದಲ್ಲಿ ಮತೀಯವಾದಿ ಮುಸ್ಲಿಂ ವ್ಯಾಪಾರಿ ಯೊಬ್ಬನ ಮಗಳು ಎದುರಾಗುತ್ತಾಳೆ. ಹಿಂದೊಮ್ಮೆ ಆಗಿದ್ದ ಪರಿಚಯದ ಕಾರಣ ಅವಳನ್ನು ಬಿಟ್ಟುಬಿಡುತ್ತಾನೆ. ಆದರೆ ಆ ಯುವತಿ ತನ್ನ ಕುಟುಂಬ ದೊಂದಿಗೆ ರೈಲು ಹತ್ತಲು ವಿಫಲಳಾಗಿ ಹಿಂದುಗಳ ಕೈಗೆ ಸಿಕ್ಕು ಬೀಳುತ್ತಾಳೆ. ಆಗ ಸಿಖ್ ಯುವಕ ಅವಳಿಗೆ ಆಶ್ರಯ ನೀಡಿ ರಕ್ಷಣೆ ನೀಡುತ್ತಾನೆ. ಮುಸ್ಲಿಂ ಯುವತಿ ಗಲಭೆಯಲ್ಲಿ ತನ್ನ ಹೆತ್ತವರು ಗಲಭೆಯಲ್ಲಿ ಹತರಾಗಿರ ಬಹುದೆಂದು ಭಾವಿಸಿ ಸಿಖ್ ಯುವಕನ್ನು ಮೆಚ್ಚಿ ಆತನನ್ನು ವರಿಸುತ್ತಾಳೆ.

ಕೆಲ ಕಾಲಗಳ ನಂತರ ಅವರ ಕುಟುಂಬ ಬದುಕಿದ್ದು ಅವಳ ತಂದೆ ಪಾಕಿಸ್ತಾನದಲ್ಲಿ ದೊಡ್ಡ ಪದವಿಯಲ್ಲಿರುವುದು ತಿಳಿದು ಅವರನ್ನು ಕಾಣಲು ಗಂಡ ಮತ್ತು ಮಗನೊಂದಿಗೆ ಹೊರಡುತ್ತಾಳೆ. ಆದರೆ ಆಕೆಯ ತಂದೆಯ ಪ್ರಭಾವದಿಂದ ಆಕೆಯ ಗಂಡ ಮತ್ತು ಮಗನಿಗೆ ಪಾಕಿಸ್ತಾನಕ್ಕೆ ಹೋಗಲು ಸಾಧ್ಯವಾಗುವುದಿಲ್ಲ ಮತ್ತು ಅಲ್ಲಿಗೆ ಹೋದ ಮೇಲೆ ಆಕೆಯನ್ನು ಭಾರತಕ್ಕೆ ಮರಳಲು ಅವಕಾಶ ಕೊಡದೆ ಬೇರೆ ಮದುವೆ ಮಾಡಲು ಹೊರಡುತ್ತಾರೆ. ಆದರೆ ಸಿಕ್ ಯುವಕ ತನ್ನ ಮಗ ಮತ್ತು ಸ್ನೇಹಿತನೊಂದಿಗೆ ಪಾಕಿಸ್ತಾನಕ್ಕೆ ಅತಿಕ್ರಮವಾಗಿ ಪ್ರವೇಶಿಸಿ ತನ್ನ ಪತ್ನಿಯನ್ನು ಮರಳಿ ಭಾರತಕ್ಕೆ ಕರೆತರಲು ಹೊರಡುತ್ತಾನೆ. ಆದರೆ ಹಿಂದೂಸ್ತಾನದ ವಿರೋಧಿ ಯಾದ ಅವರು ನಾಯಕನ ಮೇಲೆ ಧಾಳಿ ನಡೆಸುತ್ತಾರೆ. ನಾಯಕ ಅಲ್ಲಿನ ಪೋಲೀಸ್, ಸೇನೆ ಎಲ್ಲವನ್ನೂ ಸದೆ ಬಡಿಯುತ್ತಾನೆ. ಕೊನೆ ದೃಶ್ಯದಲ್ಲಿ ಆಕೆಯ ತಂದೆಗೆ ಜ್ಞಾನೋದಯ ವಾಗಿ ಇವರಿಬ್ಬರನ್ನು ಹರಸುತ್ತಾನೆ. ಇದು ಗದರ್ ಚಿತ್ರದ ಕಥೆ.



ದೆಹಲಿ ಚಿತ್ರಮಂದಿರವೊಂದರ ಮುಂದೆ ಪೋಲೀಸ್ ಪಹರೆ

ಇದು ಸಾಮಾನ್ಯ ಪ್ರೇಮ ಕಥೆಯಾದರೂ ನಿರ್ದೇಶಕರು ಎರಡು ಧರ್ಮ ಮತ್ತು ರಾಷ್ಟ್ರಗಳನ್ನು ಮುಖಾಮುಖಿಯಾಗಿಸಿ ಒಂದು ಇನ್ನೊಂದನ್ನು ಅವಹೇಳನ ಮಾಡುವ ಕೆಲಸ ಮಾಡಿದ್ದಾರೆ. ಅದರಲ್ಲೂ ಮುಸ್ಲಿಮರು ಯಾವುದಕ್ಕೂ ಬಾಗದೆ ತಮ್ಮದ್ರೇ ನಡೆಯಬೇಕೆಂಬ ದುರಹಂಕಾರದವರು ಎಂಬಂತೆ ಚಿತ್ರಿಸಿರುವುದಲ್ಲದೆ, ಹಿಂದೂಸ್ತಾನ-ಪಾಕ್ತಿಸಾನದ ಐಕ್ಯತೆಯನ್ನು ಬಯಸುವ ಮುಸ್ಲಿಮನೊಬ್ಬನನ್ನು ಹುಚ್ಚನಂತೆ ಚಿತ್ರಿಸಿ ದೇಶಪ್ರೇಮಿ ಮುಸ್ಲಿಮರಿಗೆ ಅವಹೇಳ ಮಾಡದ್ದಾರೆ. ಸಿಕ್ ಯುವಕ ಅತ್ಯಂತ ಕರುಣಾಳು, ಎಲ್ಲದಕ್ಕೂ ಹೊಂದಿಕೊಳ್ಳುವಂತ ವ್ಯಕ್ತಿ ಎಂದು ಬಿಂಬಿಸಿ ಕೊನೆಗೆ ಯಾವುದಕ್ಕೂ ಜಗ್ಗದೆ ಒಂಟಿಯಾಗಿಯೇ ಎಲ್ಲರನ್ನೂ ಸದೆಬಡಿಯುವ ಸಾಮರ್ಥ್ಯವಿರುವವನಂತೆ ತೋರಿಸಲಾಗಿದೆ.

ಎರಡು ರಾಷ್ಟ್ರಗಳ ಸಂಬಂಧಗಳು ಈಗಾಗಲೇ ಹಳಸಿಕೊಂಡಿದ್ದು ಅದಕ್ಕೆ ತೇಪೆ ಹಾಕುವ ಕೆಲಸ ನಡೆಯುತ್ತಿರುವಾಗಲೇ ಇಂತಹ ಚಿತ್ರಗಳಿಂದ ಮತ್ತೆ ಉನ್ಮಾದಕ್ಕೆಡೆ ಮಾಡಲು ಹೊರಟಿದ್ದಾರೆ ಈ ಚಿತ್ರದ ನಿರ್ಮಾಪಕರು (ಝೀ ನೆಟ್‌ವರ್ಕ್ ಈ ಚಿತ್ರದ ನಿರ್ಮಾಪಕರು). ಯಾರೂ ಮೇಲಲ್ಲ, ಯಾರೂ ಕೀಳಲ್ಲ ಎಲ್ಲರೂ ಸಮಾನರು ಎಂಬ ಸಾಮರಸ್ಯದ ಬೀಜವನ್ನು ಬಿತ್ತದೆ ದ್ವೇಷದ ಬೀಜವನ್ನು ಬಿತ್ತಲು ಹೊರಟಿದೆ ಈ ಚಿತ್ರ. ಕೆಲವು ಮುಸ್ಲಿಮರು ತಮ್ಮ ಮತದ ಚಿತ್ರಣದಿಂದ ರೊಚ್ಚಿಗೆದ್ದು ಪ್ರತಿಭಟಿಸುತ್ತಿರುವುದನ್ನು ಕಂಡು ಭಾಳಾ ಠಾಕ್ರೆಯವರು ಅವರು ದೇಶದ್ರೋಹಿಗಳೆಂದು ಕರೆದು ತಮ್ಮ ಬಣ್ಣ ಬಯಲು ಮಾಡಿಕೊಂಡಿದ್ದಾರೆ. ಸಣ್ಣಪುಟ್ಟ ವಿಷಯಗಳನ್ನೇ ದೊಡ್ಡದು ಮಾಡಿಕೊಂಡು ಬೀದಿರಂಪ ಮಾಡುವ ಶಿವಸೈನಿಕರಿಗೆ ಇನ್ನೇನನ್ನಬೇಕೋ?

- ರಾಮು

ಸಮುದಾಯ 20 ಜನಸಂಸ್ಕೃತಿ ಉತ್ಸವ

ಕರ್ನಾಟಕದ ಮೂಲೆಯಲ್ಲಿರುವ ಕೆಜಿಎಫ್ ನ ಬೆಮೆಲ್ ನಗರದ 'ಸಮುದಾಯ' ಎರಡು ದಶಕಗಳನ್ನು ಯಶಸ್ವಿಯಾಗಿ ಪೂರೈಸಿದೆ. ಈ ಸಂದರ್ಭದಲ್ಲಿ ಕಳೆದ ಆರು ತಿಂಗಳಿಂದ ಸತತ ಐದು ಹಂತಗಳ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಎಲ್ಲರ ಗಮನ ಸೆಳೆದಿದೆ. ಇವುಗಳಿಗೆಲ್ಲಾ ಕಳಸವಿಟ್ಟಂತೆ ಸಮಾರೋಪ ಸಮಾರಂಭವು ನಡೆಯಿತು ಅದರ ಚಟುವಟಿಕೆಗಳ ವರದಿ ಇಲ್ಲಿದೆ.

ಸಮುದಾಯ-20 ಜನಸಂಸ್ಕೃತಿ ಉತ್ಸವವು ಮಕ್ಕಳ ರಂಗತರಬೇತಿ ಶಿಬಿರದ ಮೂಲಕ ಉದ್ಘಾಟನೆಗೊಂಡಿತು. ಶಿಬಿರದಲ್ಲಿ ಭಾಗವಹಿಸಿದ್ದ ಮಕ್ಕಳಿಂದ "ಪಂಜರ ಶಾಲೆ" ಎಂಬ ನಾಟಕವನ್ನು ಪ್ರದರ್ಶಿಸಲಾಯಿತು. ಎರಡನೇ ಹಂತವಾಗಿ "ಇನ್ನಾತಕೆ ಕುಂತಿರುವಿರೋ" ಎಂಬ ಬೀದಿನಾಟಕ ಪ್ರದರ್ಶನಗಳು, ನಂತರ "ರಂಗಸಮ್ಮಿಲನ" ನಾಟಕೋತ್ಸವದಲ್ಲಿ ಕುದುರೆ ಮುಖ, ಮೈಸೂರು, ಬೆಂಗಳೂರಿನ ತಂಡಗಳಿಂದ ನಾಟಕಗಳ ಪ್ರದರ್ಶನ ಮೂರನೆ ಹಂತದ ಕಾರ್ಯಕ್ರಮವಾಗಿ ಹಮ್ಮಿಕೊಂಡಿತು. ನಾಲ್ಕನೇ ಹಂತವಾಗಿ "ಚಿತ್ತಾರ" ಎಂಬ ಹೆಸರಿನಲ್ಲಿ ಚಿತ್ರಕಲಾ ಸ್ಪರ್ಧೆ ಮಕ್ಕಳಿಗಾಗಿ ನಡೆಸಿ 350ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದರು. ಇದರ ಜೊತೆಯಲ್ಲಿ ಕರಕುಶಲ ವಸ್ತುಪ್ರದರ್ಶನ ಏರ್ಪಾಡಾಗಿತ್ತು. ತಂಡದಿಂದ ಕನ್ನಡ, ತಮಿಳು ಮತ್ತು ತೆಲುಗು ಭಾಷೆಯ ನಾಟಕಗಳ ಜೊತೆ ಇತ್ತೀಚಿಗೆ ವಿರಳವಾಗಿರುವ 'ಮಹಿಳಾನಾಟಕ' ಮೆಚ್ಚುಗೆ ಪಡೆಯಿತು. ಇದೇ ಸಂದರ್ಭದಲ್ಲಿ ಸಮುದಾಯದ ಹಿತೈಷಿಗಳಾದ ಸತ್ಯನಾರಾಯಣ ಶ್ರೇಷ್ಠಿ ಮತ್ತು ಹಿರಿಯ ಸದಸ್ಯೆಯಾದ ದಿವಂಗತ ಹೇಮಲತಾದೇವಿಯವರ ಸನ್ಮಾನ ಕೂಡಾ ನಡೆಯಿತು.



ಈ ವಿಚಾರ ಸಂಕಿರಣ

ಈ ಎಲ್ಲಾ ಕಾರ್ಯಕ್ರಮಗಳಿಗೂ "ಕಳಸ ಪ್ರಾಯ' ದಂತೆ ದಿನಾಂಕ 17 ಜೂನ್ 1ರ ಭಾನುವಾರದಂದು ಬೆಮೆಲ್ ಕಲಾ ಕ್ಷೇತ್ರದಲ್ಲಿ ಸಮಾರೋಪ ಸಮಾರಂಭ ನಡೆಯಿತು. ಬೆಳಿಗ್ಗೆ ನಡೆದ "ವಿಚಾರ ಸಂಕಿರಣ" ಕಾರ್ಯಕ್ರಮ ರಾಮಚಂದ್ರ ಮತ್ತು ತಂಡದವರ ಹಾಡಿನ ಮೂಲಕ ಪ್ರಾರಂಭವಾಯಿತು.

ಸಮುದಾಯದ ಕಾರ್ಯದರ್ಶಿ ಅಚ್ಯುತ ಸ್ವಾಗತ ಮಾಡಿದರು. ಕಾರ್ಯಕ್ರಮದ ನಿರ್ವಹಣೆಯನ್ನು ಸುಭಾಷಿಣಿ ಕಾಲೇಜಿನ ಉಪನ್ಯಾಸಕರಾದ ದಯಾನಂದ್ ಮಾಡಿದರು. ಇತ್ತೀಚಿನ ದಿನಗಳಲ್ಲಿ ವಿಚಾರ ಸಂಕಿರಣಗಳಿಗೆ ಜನರು ಬರುವುದಿಲ್ಲ ಎಂಬೆಲ್ಲಾ ಹೇಳಿಕೆಗಳ ನಡುವೆಯೂ 250 ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದು ದಾಖಲೆಯೇ ಸರಿ. ಗೌರಿಬಿದನೂರು ನ್ಯಾಷನಲ್ ಕಾಲೇಜಿನ ಉಪನ್ಯಾಸಕರಾದ ಬಿ. ಗಂಗಾಧರಮೂರ್ತಿ ಸಂಕಿರಣದ ಅಧ್ಯಕ್ಷತೆ ವಹಿಸಿದ್ದರೆ ಅದೇ ಕಾಲೇಜಿನ ಡಾ। ರಂಗಾರೆಡ್ಡಿ ಕೋಡಿರಾಂಪುರ ಅವರು **'ಕೋಲಾರ ಜಿಲ್ಲೆ ಸಾಂಸ್ಕೃತಿಕ ಪರಂಪರೆ'** ವಿಷಯವಾಗಿ ಪ್ರಬಂಧ ಮಂಡಿಸಿದರು. ಖ್ಯಾತರಂಗ ನಿರ್ದೇಶಕ ರಾದ ಸಿ. ಬಸವಲಿಂಗಯ್ಯ ನವರು **'ಸಮಕಾಲೀನ ಕನ್ನಡ ರಂಗ ಭೂಮಿ ಸವಾಲುಗಳು'** ಎನ್ನುವ ವಿಷಯದಲ್ಲಿ ಪ್ರಬಂಧ ಮಂಡಿಸಿದರೆ, **'ರಂಗ ಭೂಮಿಯ ಮೇಲೆ ಜಾಗತೀಕರಣದ ಪ್ರಭಾವ'** ಈ ವಿಷಯದ ಮೇಲೆ ಬೆಂಗಳೂರು ಸಮುದಾಯದ ಸುರೇಂದ್ರ ಪ್ರಬಂಧ ಮಂಡಿಸಿದರು. ಹಾಗೆಯೇ ಸಿ.ಕೆ.ಗುಂಡಣ್ಣ **'ಜನಜಾಗೃತಿ ಯಲ್ಲಿ ಬೀದಿ ನಾಟಕಗಳ ಪಾತ್ರ'**ದ ಬಗ್ಗೆ ಪ್ರಬಂಧ ಮಂಡಿಸಿದರು. ವಿಚಾರಸಂಕಿರಣಕ್ಕೆ ಸಮುದಾಯದ ಜಂಟಿ ಕಾರ್ಯದರ್ಶಿ ಎ.ಜಿ.ಗಣೇಶ್ ವಂದನಾರ್ಪಣೆ ಮಾಡಿದರು.

ಬೀದಿ ನಾಟಕ

ವಿಚಾರಸಂಕಿರಣದ ನಂತರ ಬೆಂಗಳೂರು ಸಮುದಾಯ ತಂಡ ದವರಿಂದ **'ಕುಂಡಲಿ ಮಹಾತ್ಮೆ'** ಎಂಬ ಬೀದಿ ನಾಟಕ ಪ್ರದರ್ಶಿಸಿದರು. ಇತ್ತೀಚಿಗೆ ನಮ್ಮ ಘನ ಕೇಂದ್ರ ಸರ್ಕಾರ 'ಜ್ಯೋತಿಶ್ಯ ಶಾಸ್ತ್ರ' ವನ್ನು ವಿಶ್ವವಿದ್ಯಾಲಯಗಳಲ್ಲಿ ಬೋಧಿಸಬೇಕು ಎಂಬ ಆದೇಶವನ್ನೇ ಜನ ಸಾಮಾನ್ಯರು ಪ್ರಶ್ನಿಸುವಂತೆ ಇತ್ತು ಈ ನಾಟಕದ ವಸ್ತು.

ಇದೇ ದಿನ ಸಂಜೆ ನಡೆದ ಸ್ಮರಣಸಂಚಿಕೆ ಬಿಡುಗಡೆ ಮತ್ತು ಸನ್ಮಾನ ಸಮಾರಂಭಕ್ಕೆ ಸಮುದಾಯ-20 ಜನಸಂಸ್ಕೃತಿ ಉತ್ಸವ ಸಮಿತಿ ಅಧ್ಯಕ್ಷರಾದ ಜಿ.ಎನ್.ಕೃಷ್ಣೇಗೌಡರು ಸ್ವಾಗತ ಮಾಡಿದರು. ಅಧ್ಯಕ್ಷತೆ ರಾಜ್ಯ ಸಮುದಾಯ ಸಮನ್ವಯ ಸಮಿತಿಯ ಅಧ್ಯಕ್ಷರಾದ ಬಸವಲಿಂಗಯ್ಯ ವಹಿಸಿದ್ದರು.

ಸಮಾರೋಪ ಸಮಾರಂಭ

ಮುಖ್ಯ ಅತಿಥಿಗಳಾಗಿ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರಾದ ಸಿ.ಜಿ.ಕೃಷ್ಣಸ್ವಾಮಿ, ಬೆಮಲ್‌ನ ಉಪಪ್ರಧಾನ ವ್ಯವಸ್ಥಾಪಕರಾದಂತಹ ಯು.ಗೋಪಾಲ್, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿಯಲ್ಲಿ ರೀಡರ್ ಡಾ. ಜಿ.ಆರ್.ತಿಪ್ಪೇಸ್ವಾಮಿ, ಕೋಲಾರ ಜಿಲ್ಲಾ ಕನ್ನಡ ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಬಿ.ಎಸ್. ವೆಂಕಟಾಚಲಪತಿ ಹಾಗೂ ನ್ಯಾಷನಲ್ ಕಾಲೇಜ್, ಬೆಂಗಳೂರಿನ ನಗರಗೆರೆ ರಮೇಶ್‌ರವರು ಹಾಜರಿದ್ದರು.

ಈ ಸಂದರ್ಭದಲ್ಲಿ **'ರಂಗಪುಷ್ಪ'** ಎಂಬ ಸ್ಮರಣ ಸಂಚಿಕೆಯನ್ನು ಸಿ.ಜಿ. ಕೃಷ್ಣಸ್ವಾಮಿಯವರು ಬಿಡುಗಡೆ ಮಾಡಿದರು. ಇದರ ಜೊತೆಯಲ್ಲಿ ನಡೆದ ಸನ್ಮಾನ ಸಮಾರಂಭದಲ್ಲಿ ಸಮುದಾಯದ ಹಿರಿಯ ಸದಸ್ಯೆ ಮತ್ತು ಹಿರಿಯ ಕಲಾವಿದರಾದ ಸೂರಮ್ಮನವರನ್ನು ಸನ್ಮಾನಿಸಲಾಯಿತು.

ಟಿ.ವಿ. ಹಾವಳಿ ಎಷ್ಟೇ ಇದ್ದರೂ ಕೂಡ ಒಳ್ಳೆಯ ನಾಟಕಗಳಿಗೆ ಪ್ರೇಕ್ಷಕರು ಬಂದೇ ಬರುತ್ತಾರೆ ಎನ್ನುವುದನ್ನು ಸಮುದಾಯ ಬೆಂಗಳೂರು ಅಭಿನಯಿಸಿದ 'ಜ್ಞಾನಪೀಠ ಪ್ರಶಸ್ತಿ ಪುರಸ್ಕೃತೆ ಮಹಾಶ್ವೇತದೇವಿಯವರ 'ಜಲ್' ಆಧಾರಿತ **'ನೀರು'** ನಾಟಕ ಸಾಕ್ಷೀಕರಿಸಿದಂತಿತ್ತು. ಉತ್ತಮ ಸಂಗೀತ, ಬೆಳಕು ಹಾಗೂ ನೈಜ ಅಭಿನಯ ಹೊಂದಿತ್ತು. ಕೃಷ್ಣಕುಮಾರ್ ಯಾದವ್ ನಾಟಕವನ್ನು ನಿರ್ದೇಶಿಸಿದ್ದರು. ಕೊನೆಯಲ್ಲಿ ಸಮುದಾಯದ ಉಪಾಧ್ಯಕ್ಷರಾದ ಚೊಕ್ಕಲಿಂಗಂರವರು ವಂದನಾರ್ಪಣೆ ಮಾಡಿದರು.

ವರದಿ: **ಜನಾರ್ಧನ**



'ನೀರು' ನಾಟಕದ ಒಂದು ದೃಶ್ಯ

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ: 2236462,
ಮುದ್ರಣ: ಹೆಚ್ಚು ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor : S.Y.GURUSHANTH